## ಅಧ್ಯಾಯ 4

# ಪರಿಶುದ್ಧ ಜೀವನ, ಸಹೋದರ ಪ್ರೀತಿ, ಮತ್ತು ಎರಡನೆಯ ಬರೋಣ

### ಪರಿಶುದ್ಧರಾಗಿ ಜೀವಿಸಬೇಕೆಂದು ಬುದ್ಧಿವಾದ ಹೇಳಿದ್ದು (4:1-8)

[1]ಕಡೇ ಮಾತೇನಂದರೆ, ಸಹೋದರರೇ, ನಾವು ಕರ್ತನಾದ ಯೇಸುವಿನ
ಅಧಿಕಾರದಿಂದ ನಿಮಗೆ ಕೊಟ್ಟ ಆಜ್ಞೆಗಳನ್ನು ತಿಳಿದಿದ್ದೀರಷ್ಟೆ. [2]ನೀವು ಹೇಗೆ ನಡೆದು ದೇವರನ್ನು
ಮೆಚ್ಚಿಸಬೇಕೋ ಅದನ್ನು ನಮ್ಮಿಂದ ಕಲಿತುಕೊಂಡು ಅದರಂತೆ ನಡೆಯುತ್ತಲೇ ಇದ್ದೀರಿ.
ನೀವು ಹಾಗೆಯೇ ಇನ್ನೂ ಹೆಚ್ಚಾಗಿ ನಡೆಯಬೇಕೆಂದು ನಿಮ್ಮನ್ನು ಬೇಡಿಕೊಂಡು ಯೇಸು
ಕರ್ತನಲ್ಲಿ ಪ್ರಬೋಧಿಸುತ್ತೇವೆ. [3]ದೇವರ ಚಿತ್ತವೇನಂದರೆ ನೀವು ಶುದ್ಧರಾಗಿ ಇರಬೇಕೆಂಬದೇ.
ಆದದರಿಂದ ಹಾದರಕ್ಕೆ ದೂರವಾಗಿರಬೇಕು. [4-5]ದೇವರನ್ನರಿಯದ ಅನ್ಯಜನಗಳಂತೆ
ಕಾಮಾಭಿಲಾಷೆಗೆ ಒಳಪಡದೆ ನಿಮ್ಮಲ್ಲಿ ಪ್ರತಿಯೊಬ್ಬನು ಪವಿತ್ರವಾದ ಮನಸ್ಸಿನಿಂದಲೂ
ಘನತೆಯಿಂದಲೂ [6]ಧರ್ಮಪತ್ನಿಯನ್ನು ಸಂಪಾದಿಸಿಕೊಳ್ಳಲು ತಿಳಿಯಬೇಕು. ಈ ವಿಷಯದಲ್ಲಿ
ಯಾರೂ ತನ್ನ ಸಹೋದರನನ್ನು ವಂಚಿಸಿ ಕೇಡುಮಾಡಬಾರದು. ನಾವು ಮುಂಚೆ ತಿಳಿಸಿ
ನಿಮಗೆ ಖಂಡಿತವಾಗಿ ಹೇಳಿದ ಪ್ರಕಾರ ಇವೆಲ್ಲವುಗಳ ವಿಷಯದಲ್ಲಿ ಕರ್ತನು ಮುಯ್ಯಿಗೆ
ಮುಯ್ಯಿ ತೀರಿಸುವವನಾಗಿದ್ದಾನೆ. [7]ದೇವರು ನಮ್ಮನ್ನು ಬಂಡತನಕ್ಕೆ ಕರೆಯದೆ
ಶುದ್ಧರಾಗುವದಕ್ಕೆ ಕರೆದನು. [8]ಹೀಗಿರಲು ಈ ಮಾತನ್ನು ತಾತ್ಸಾರ ಮಾಡುವವನು
ಮನುಷ್ಯನನ್ನು ತಿರಸ್ಕರಿಸುವದು ಮಾತ್ರವಲ್ಲದೆ ಪವಿತ್ರಾತ್ಮ ವರವನ್ನು ನಿಮಗೆ
ದಯಪಾಲಿಸುವ ದೇವರನ್ನೂ ತಿರಸ್ಕರಿಸುತ್ತಾನೆ.

**ವಚನ 1.** ಈ ವಚನದ ಸನ್ನಿವೇಶದಲ್ಲಿ, **ಕಡೇ ಮಾತೇನಂದರೆ** ಎಂಬುದು "ಮಿಕ್ಕ ವಿಷಯಕ್ಕೆ ಸಂಬಂಧಿಸಿದಂತೆ" ಎಂದರ್ಥವನ್ನು ಕೊಡುತ್ತದೆ, ಅದು ಪತ್ರಿಕೆಯಲ್ಲಿ ಕಡೇ ಪ್ರಮುಖ ಚರ್ಚೆಯ ವಿಷಯಕ್ಕೆ ಪೌಲನು ಮುಂದಕ್ಕೆ ಸಾಗುತ್ತಿದ್ದಾನೆಂಬುದನ್ನು ಸೂಚಿಸುತ್ತದೆ (ನೋಡಿರಿ ಎಫೆಸ 6:10; ಫಿಲಿಪ್ಪಿ 4:8). ಆತನು ಆಗಷ್ಟೆ ಮುಂಚಿನ ವಚನದಲ್ಲಿ ಕ್ರಿಸ್ತನ ಎರಡನೆಯ ಬರೋಣದ ಬಗ್ಗೆ ಪ್ರಸ್ತಾಪಿಸಿದ್ದನು (3:13), ಮತ್ತು ಇಲ್ಲಿ ಆತನು ಅದರ ಬಗ್ಗೆ ಈ ಪತ್ರಿಕೆಯಲ್ಲಿ ಮಾಡಬೇಕಾಗಿರುವ ಕೊನೆಯ ಸಾಮಾನ್ಯವಾದ ವಿಷಯವಾಗಿ ಪೂರ್ಣ ಪ್ರಮಾಣದ ಚರ್ಚೆಗೆ ಸಾಗುತ್ತಾನೆ.

ಪುನಃ, ಆತನು ಸಭೆಯನ್ನು ಅಕ್ಕರೆಯ **ಸಹೋದರರೇ** ಎಂದು ಸಂಬೋಧಿಸುತ್ತಾನೆ (1:4ರ ಮೇಲಿನ ಚರ್ಚೆಯನ್ನು ನೋಡಿರಿ). ಪೌಲನು ಥೆಸಲೋನಿಕದಲ್ಲಿದ್ದ ವೇಳೆ ಅವರು ಆತನಿಂದ **ಕಲಿತುಕೊಂಡ** ಬೋಧನೆಗಳ ಪ್ರಕಾರವಾಗಿ **ನಡೆಯಬೇಕೆಂದು** ಆತನು ಅವರನ್ನು ಕರ್ತನಲ್ಲಿ (ಆತನ ಅಧಿಕಾರದಿಂದ) **ಬೇಡಿಕೊಂಡು ಪ್ರಬೋಧಿಸಿದ[ನು]**. "ನಡೆಯಬೇಕು" ಎಂಬ ಪದವು ಇಲ್ಲಿ ಕ್ರೈಸ್ತ ಜೀವಿತವನ್ನು ದೇವರಿಂದ ರೂಪಿಸಲ್ಪಟ್ಟಿರುವ ಒಂದು ಇಕ್ಕಟ್ಟಾದ ದಾರಿ (2:12; ಮತ್ತಾಯ 7:14; KJV) ಆಗಿದ್ದು ಮತ್ತು ಅದರಲ್ಲಿ ಕ್ರೈಸ್ತನು **ದೇವರನ್ನು ಮೆಚ್ಚಿಸಬೇಕೆಂದು** "ನಡೆಯಬೇಕು" ಅಥವಾ ಜೀವಿಸಬೇಕಾದದ್ದಾಗಿದೆ ಎಂಬದಾಗಿ ಮುಂದಿಡುತ್ತದೆ. ಕ್ರೈಸ್ತರು ತಾವಾಗಲಿ ಅಥವಾ ಬೇರೆಯವರಾಗಲಿ ಬಯಸುವ ರೀತಿಯಲ್ಲಿ ಬಾಳಬಾರದು (ಗಲಾತ್ಯ 1:10), ಆದರೆ ದೇವರು ಬಯಸುವ ರೀತಿಯಲ್ಲಿ ಬಾಳಬೇಕು (2:4, 15). **ನಡೆಯುತ್ತಲೇ ಇದ್ದೀರಿ ನೀವು ಹಾಗೆಯೇ ಇನ್ನೂ** ಎಂಬ ಪದಗುಚ್ಛವು (ಪ್ರಕ್ಷೇಪ ಚಿಹ್ನೆಗಳಲ್ಲಿ) ಥೆಸಲೋನಿಕದವರು ತಮಗೆ ಕೊಡಲ್ಪಟ್ಟ ಸತ್ಯದಲ್ಲಿ ನಡೆಯುತ್ತಿದ್ದಾರೆಂದು ಪೌಲನು ಪರಿಗಣಿಸಿದ್ದನೆಂಬುದನ್ನು ಸೂಚಿಸುತ್ತದೆ. ಈ ಮಾತುಗಳು ಹಲವಾರು ಹಸ್ತಪ್ರತಿಗಳಲ್ಲಿ ಸೇರ್ಪಡೆಗೊಳಿಸಲ್ಪಟ್ಟಿರುವದಿಲ್ಲವಾದರೂ, ಅವುಗಳು Sinaiticus, Alexandrinus, Vaticanus ಮತ್ತು ಇತರ ಹಸ್ತಪ್ರತಿಗಳಲ್ಲಿರುತ್ತವೆ. ಒಟ್ಟಾರೆಯಾಗಿ, ಪುರಾವೆಯು ಈ ಸಂಗತಿಗಳು ಸೇರ್ಪಡೆಗೊಂಡಿರುವದಕ್ಕೆ ಬೆಂಬಲವನ್ನು ಒದಗಿಸುತ್ತವೆ.

ಥೆಸಲೋನಿಕದಿಂದ ಹಿಂದಿರುಗಿ ಬಂದ ಬಳಿಕ, ತಿಮೊಥೆಯನು ಒಟ್ಟಾರೆಯಾಗಿ, ಥೆಸಲೋನಿಕದವರು ಪೌಲನ ಬೋಧನೆಗಳನ್ನು ಅನುಸರಿಸುತ್ತಿದ್ದಾರೆಂಬ ಕುರಿತು ವರದಿಯನ್ನು ನೀಡಿದ್ದನು (3:6). ಇಲ್ಲಿ ಪೌಲನು ಅವರಿಗೆ ತಾವು ಆತನಿಂದ "ಹೊಂದಿದ ಬೋಧನೆಯಲ್ಲಿ" (2 ಥೆಸಲೋನಿಕ 3:6) ಅಥವಾ "ಉಪದೇಶದಲ್ಲಿ" (NIV) **ಇನ್ನೂ ಹೆಚ್ಚಾಗಿ** ನಡೆಯಬೇಕೆಂದು ಬೇಡಿಕೊಳ್ಳುತ್ತಿದ್ದಾನೆ (ಅಥವಾ ಕೇಳಿಕೊಳ್ಳುತ್ತಿದ್ದಾನೆ) ಮತ್ತು ಪ್ರಬೋಧಿಸುತ್ತಿದ್ದಾನೆ (ಅಥವಾ ವಿನಂತಿಸಿಕೊಳ್ಳುತ್ತಿದ್ದಾನೆ). ಅವರು ತನ್ನನ್ನು ಅವರ ಯಜಮಾನನ್ನಾಗಿ ಮಾಡಿಕೊಂಡು ಆತನ ಪ್ರತಿಯೊಂದು ಆಜ್ಞೆಯಂತೆಯೇ ನಡೆಯಬೇಕೆಂದು ಬೇಡಿಕೊಳ್ಳುತ್ತಿದ್ದಾನೆ.

**ವಚನ 2.** [ತಾನು] **ಅವರಿಗೆ ಕೊಟ್ಟ ಆಜ್ಞೆಗಳನ್ನು ತಿಳಿದಿದ್ದೀರಷ್ಟೆ** ಎಂದು ಅವರಿಗೆ ಪೌಲನು ನೆನಪಿಸುತ್ತಾನೆ. *παραγγελία* (*parangelia*) ಎಂಬುದರಿಂದ ಬಂದಿರುವ "ಆಜ್ಞೆ" ಎಂಬುದು, "ಬಹುಶಃ ಒಂದು ಸೈನಿಕರ ಸಾಲಿಗೆ (*παρά* [*para*]) ಹಸ್ತಾಂತರಿಸಲಾದ ಆಜ್ಞೆಯೊಂದು ಆಗಿರುತ್ತದೆ. ಇದರಿಂದ ಅದು ಯಾವದೇ ಅಧಿಕಾರಯುಕ್ತ ಆಜ್ಞಾಪನೆಯನ್ನು ಸೂಚಿಸುವದಾಯಿತು."[1] ಈ ಪದವು "ಬೋಧನೆಗಳು" (NIV) ಅಥವಾ "ಉಪದೇಶಗಳು" ಎಂಬ ಅರ್ಥವನ್ನು ಸಹ ಕೊಡಬಲ್ಲದು. ಆ ಬೋಧನೆಗಳು ತನ್ನಿಂದ ಉತ್ಪತ್ತಿಯಾಗಲಿಲ್ಲ ಆದರೆ ಅವುಗಳು **ಕರ್ತನಾದ ಯೇಸುವಿನ ಅಧಿಕಾರದಿಂದ** ಕೊಡಲ್ಪಟ್ಟವುಗಳೆಂದು ಪೌಲನು ಹೇಳಿದನು.

ಅವರಿಗೆ ಕೊಡಲ್ಪಟ್ಟಿದ್ದು "ಮನುಷ್ಯರ ವಾಕ್ಯ" ಆಗಿರಲಿಲ್ಲ (2:13), ಆದರೆ "ದೇವರ ವಾಕ್ಯ" ಆಗಿತ್ತು. ಅದನ್ನು ಆಗ ನೆನಪಿನಲ್ಲಿಟ್ಟುಕೊಳ್ಳುವ ಅಗತ್ಯವಿದ್ದಿತ್ತು, ಮತ್ತು ಅದನ್ನು ಈಗ ಸಹ ನೆನಪಿಟ್ಟುಕೊಳ್ಳುವ ಅಗತ್ಯವಿರುತ್ತದೆ, ಯಾಕೆಂದರೆ ನಾವು ವಾಕ್ಯವನ್ನು ಬಹಳ

ಲಘುವಾಗಿ ತೆಗೆದುಕೊಂಡು, ಅದು ದೇವರ ವಾಕ್ಯವೆಂಬುದನ್ನು ಮರೆತು ಬಿಡುವ ಪ್ರವೃತ್ತಿ ತೋರುತ್ತೇವೆ.

**ವಚನ 3.** ನಿರ್ದಿಷ್ಟವಾಗಿ ಹೇಳಬೇಕಾದ ಕಾರ್ಯಗಳ ಕಡೆಗೆ ತಿರುಗಿಕೊಳ್ಳುತ್ತಾ, ಪೌಲನು ಅವರಿಗೆ ಒಂದು ನಿರ್ದಿಷ್ಟವಾದ ಕ್ಷೇತ್ರದಲ್ಲಿ ದೇವರ ಚಿತ್ತವೇನೆಂಬುದನ್ನು ತಿಳಿಸುತ್ತಾನೆ-ಏನೆಂದರೆ ಅವರು **ಹಾದರಕ್ಕೆ ದೂರವಾಗಿರಬೇಕು,** ಅದು ಅವರ **ಶುದ್ಧತೆ**ಗೆ (ἁγιασμός, *hagiasmos*) ಸಂಬಂಧಿಸಿದ್ದಾಗಿತ್ತು. "ಶುದ್ಧರಾಗಿರುವದನ್ನು" ವ್ಯಕ್ತಪಡಿಸು ಇನ್ನೊಂದು ರೀತಿಯೆಂದರೆ "ಪರಿಶುದ್ಧತೆ" ಆಗಿರುತ್ತದೆ (NIV). ಪರಿಶುದ್ಧರಾಗಿರುವದೆಂದರೆ ಪಾಪದಿಂದ ಶುಚಿಗೊಳಿಸಲ್ಪಡುವದು, ಪ್ರತ್ಯೇಕಿಸಲ್ಪಡುವದು. ನಮ್ಮ ಕ್ರೈಸ್ತ ಜೀವಿತದ ಆರಂಭದ ವೇಳೇ ದೇವರು ನಮ್ಮನ್ನು ಶುಚಿಗೊಳಿಸುತ್ತಾನೆ (ಅಪೊಸ್ತಲರ ಕೃತ್ಯಗಳು 22:16) ಮಾತ್ರವಲ್ಲದೆ ನಾವು ಆ ಜೀವನದಲ್ಲಿ ಮುಂದೆ ಸಾಗಿದಂತೆ ಬೆಳಕಿನಲ್ಲಿ ನಡೆಯುತ್ತಾ, ನಮ್ಮ ಪಾಪಗಳನ್ನು ಒಪ್ಪಿಕೊಂಡು ಅವುಗಳಿಗಾಗಿ ಪಶ್ಚಾತ್ತಾಪ ಪಡುವಾಗ ಸಹ ನಮ್ಮನ್ನು ಶುದ್ಧಗೊಳಿಸುತ್ತಾನೆ (1 ಯೋಹಾನ 1:7-10). ನಾವು ಅಂತಿಮ ನ್ಯಾಯತೀರ್ಪಿನ ವೇಳೇ (5:23; ಇದನ್ನು 1 ಪೇತ್ರ 1:13-16ರೊಂದಿಗೆ ಹೋಲಿಸಿರಿ) "ನಿರ್ದೋಷಿಗಳು" ಆಗಿರಬೇಕು ಎಂಬುದಕ್ಕಾಗಿ ಇದನ್ನು ಮಾಡುತ್ತಾನೆ (3:13). ಪರಿಶುದ್ಧರಾಗಿರುವದೆಂದರೆ ಹಳೆಯ ಒಡಂಬಡಿಕೆಯ ಲೇವಿಯರ ಹಾಗೆ (ಅರಣ್ಯಕಾಂಡ 3:11-13), ದೇವರ ವಿಶೇಷ ಸೇವೆಗಾಗಿ ಪ್ರತ್ಯೇಕಿಸಲ್ಪಡುವದು ಎಂದು ಸಹ ಅರ್ಥವಾಗಿದೆ. ಹೇಗೂ, ಕ್ರೈಸ್ತ ವ್ಯವಸ್ಥೆಯಲ್ಲಿ, ಭಾಗಿಯಾದವರೆಲ್ಲರೂ ಸಹ ದೇವರ ವಿಶೇಷವಾದ ಸ್ವತ್ತು (1 ಪೇತ್ರ 2:5, 9), ಆತನಿಗೋಸ್ಕರ ವಿಶೇಷ ಸೇವೆ ಮಾಡುವದಕ್ಕಾಗಿ ಪ್ರತ್ಯೇಕಿಸಿಡಲ್ಪಟ್ಟವರು ಆಗಿದ್ದಾರೆ.

ಕ್ರೈಸ್ತರು ಒಂದು ವಿಶೇಷವಾದ ರೀತಿಯಲ್ಲಿ ದೇವರಿಗೆ ಸೇರಿದವರಾಗಿರುವದರಿಂದ, ಅವರು ಆತನ **ಚಿತ್ತ**ವನ್ನು ಜಾಗರೂಕರಾಗಿ ಪಾಲಿಸಿಕೊಂಡು ಹೋಗಬೇಕು. ಪೌಲನು ನಿರ್ದಿಷ್ಟವಾಗಿ ಕಳಕಳಿ ಹೊಂದಿದ್ದ ಕ್ಷೇತ್ರವು ಯಾವದೆಂದರೆ ಅವರು "ಹಾದರದಿಂದ ದೂರವಿರಬೇಕು" (ಲೈಂಗಿಕ ಅನೈತಿಕತೆ) ಎಂಬದೆ. "ಲೈಂಗಿಕ ಅನೈತಿಕತೆ" ("ಹಾದರ"; KJV) ಎಂಬುದರ ಅನುವಾದಿತ ಗ್ರೀಕ್ ಪದವು πορνεία (*porneia*) ಬಂದಿರುತ್ತದೆ, ಅದು ಎಲ್ಲಾ ಅನೈತಿಕವಾದ ಲೈಂಗಿಕ ಚಟುವಟಿಕೆಗಳನ್ನೊಳಗೊಂಡ-ಸಮಾನ ಲಿಂಗದ ವ್ಯಕ್ತಿಗಳ ನಡುವಿನ ಸಂಬಂಧಗಳನ್ನು ಸಹ ಒಳಗೊಂಡಿರುವ-ಒಂದು ಬಹು ಕ್ರಿಯೆಗಳನ್ನು ಸೂಚಿಸುವ ಪದವಾಗಿರುತ್ತದೆ (1 ಕೊರಿಂಥ 6:9-11ರೊಂದಿಗೆ ಹೋಲಿಸಿರಿ). F. F. Bruce ಹೇಳಿದ್ದೇನೆಂದರೆ, "*porneia* ಎಂಬುದು ಪ್ರಾಥಮಿಕವಾಗಿ ಸೂಳೆಯೊಂದಿಗೆ (*pornai*) ಸಂಪರ್ಕವಿಟ್ಟುಕೊಳ್ಳುವದು ಎಂಬರ್ಥವನ್ನು ಹೊಂದಿದೆಯಾದರೂ . . . ಅದು ಯಾವದೇ ರೂಪದ ಅನೈತಿಕ ಸಂಬಂಧವನ್ನು ಸೂಚಿಸುವದಾಗಿದೆ."[2]

ಆ ಭಾಗದ ಜಗತ್ತಿನಲ್ಲಿ ಲೈಂಗಿಕ ಅನೈತಿಕತೆಯು ವ್ಯಾಪಕವಾಗಿತ್ತು. ಉದಾಹರಣೆಗೆ, ದಕ್ಷಿಣ ದಿಕ್ಕಿನಲ್ಲಿ ಕೇವಲ 175 ಮೈಲುಗಳಷ್ಟು ದೂರದಲ್ಲಿದ್ದ ಕೊರಿಂಥ ಪಟ್ಟಣವು ತನ್ನ Aphroditeನ ದೇವಸ್ಥಾನದ ಕುರಿತು ಹೆಗ್ಗಳಿಕೆಯನ್ನು ಹೊಂದಿತ್ತು. ಪ್ರಾಚೀನ ಮೂಲಗಳಲ್ಲೊಂದರ ಪ್ರಕಾರವಾಗಿ, ದೇವಾಲಯವು ಪುರುಷ ಆರಾಧಕರಿಗೆ ತಮ್ಮನ್ನು ಲೈಂಗಿಕವಾಗಿ ಒಪ್ಪಿಸಿಕೊಂಡಿದ್ದಂಥ ಒಂದು ಸಾವಿರ ವ್ಯಭಿಚಾರಿಗಳಿಗೆ ಆರ್ಥಿಕ

ಸಹಾಯವನ್ನು ಕೊಡುತ್ತಿತ್ತು. ಕೊರಿಂಥ ಸಭೆಯಲ್ಲಿದ್ದ ಪ್ರಕಾರವಾಗಿ, ಥೆಸಲೋನಿಕದಲ್ಲಿ ಅನೈತಿಕತೆಯಿದ್ದ ನಿರ್ದಿಷ್ಟವಾದ ಉದಾಹರಣೆಗಳಿರಲಿಲ್ಲ (1 ಕೊರಿಂಥ 5), ಆದರೆ ಮೊದಲ ಶತಮಾನದ ವೇಳೆ ಆ ಭಾಗದ ಜಗತ್ತಿನಲ್ಲಿದ್ದ ನೈತಿಕ ವಾತಾವರಣವನ್ನು ಪರಿಗಣಿಸುವದಾದಲ್ಲಿ ಈ ವಿಧವಾದ ನಡವಳಿಕೆಯು ಯಾವಾಗಲೂ ಒಂದು ನಿಜವಾದ ಅಪಾಯವೇ ಆಗಿತ್ತು. ಆ ನಿರ್ದಿಷ್ಟವಾದ ಅಪಾಯದ ಕುರಿತಾಗಿಯೇ ಪೌಲನು ಈ ವಿಭಾಗದಲ್ಲಿ ಮಾತಾಡುತ್ತಾನೆ.

**ವಚನಗಳು 4-5. ತನ್ನ ಸ್ವಂತ ಪಾತ್ರೆಯನ್ನು** ಎಂಬುದು ἑαυτοῦ σκεῦος (*heautou skeuos*) ಎಂಬ ಗ್ರೀಕ್ ಪದಗುಚ್ಛದ ಸರಿಯಾದ ಅಕ್ಷರಶಃ ಅನುವಾದವಾಗಿರುತ್ತದೆ. "ತನ್ನ ಸ್ವಂತ ದೇಹವನ್ನು ಸ್ವಾಧೀನದಲ್ಲಿಟ್ಟುಕೊಳ್ಳಲು" (NIV) ಮತ್ತು "ತನಗೋಸ್ಕರ ಒಬ್ಬ ಹೆಂಡತಿಯನ್ನು ಸಂಪಾದಿಸಿಕೊಳ್ಳಲು" (RSV) ಎಂಬ ಅನುವಾದಗಳು ಭಾಗಶಃ ಅರ್ಥನಿರೂಪಣೆಗಳಾಗಿವೆ, ಆದರೆ "ಆತನ ಪಾತ್ರೆ" ಎಂಬ ಪದಗುಚ್ಛವನ್ನು ಅರ್ಥಮಾಡಿಕೊಳ್ಳಲು ಎರಡು ಪ್ರಮುಖ ಆಯ್ಕೆಗಳಿರುತ್ತವೆ. ಎರಡರಲ್ಲಿ ಆಯ್ಕೆ ಮಾಡಿಕೊಳ್ಳುವ ವೇಳೆ, ಬೈಬಲಿನಲ್ಲಿ ಬೇರೆ ಎಲ್ಲಿಯೂ ಪುರುಷನ ಹೆಂಡತಿಯನ್ನು ಆತನ *skeuos* ಅಥವಾ "ಪಾತ್ರೆ" ಎಂದು ಕರೆಯಲಾಗಿರುವದಿಲ್ಲ, ಆದರೆ ಅದೇ ವೇಳೆಯಲ್ಲಿ ಮಾನವ ದೇಹವು ಬೇರೆ ಸ್ಥಳಗಳಲ್ಲಿ "ಪಾತ್ರೆ" ಅಥವಾ "ಸಾಧನ" ಎಂದು ಕರೆಯಲ್ಪಟ್ಟಿದೆ (1 ಸಮುವೇಲ 21:5; ಅಪೊಸ್ತಲರ ಕೃತ್ಯಗಳು 9:15; ರೋಮಾ 9:21-23; 2 ಕೊರಿಂಥ 4:7; 2 ತಿಮೊಥೆ 2:21). ಈ ವಾಸ್ತವಾಂಶವು ಸ್ಪಷ್ಟಪಡಿಸುವದೇನಂದರೆ ಪೌಲನು **ಸ್ವಾಧೀನಪಡಿಸಿಕೊಳ್ಳಲು** ಎಂದು ಹೇಳಿದಾಗ, ಆತನ ತಾತ್ಪರ್ಯವು ಪ್ರತಿಯೊಬ್ಬ ಕ್ರೈಸ್ತನು ತನ್ನ ಸ್ವಂತ ದೇಹವನ್ನು ನಿಗ್ರಹಿಸಿಕೊಳ್ಳಬೇಕು, ಮತ್ತು ಅದನ್ನು **ಪವಿತ್ರವಾದ ಮನಸ್ಸಿನಿಂದಲೂ ಘನತೆಯಿಂದಲೂ** ಮಾಡತಕ್ಕದ್ದು, "ಪರಿಶುದ್ಧ ಮತ್ತು ಗೌರವಯುತವಾದ ಒಂದು ರೀತಿಯಲ್ಲಿ" (NIV) ಎಂದು ಹೇಳಿರಬಹುದಾದ ಸಂಭಾವ್ಯತೆಯು ಅಧಿಕವಾಗಿರುತ್ತದೆ. ಆ ವಿಧದಲ್ಲಿ ಅರ್ಥನಿರೂಪಿಸಲ್ಪಟ್ಟಾಗ, ವಚನವು ರೋಮಾ 6:19ಕ್ಕೆ ಸಮಾನಾರ್ಥವನ್ನು ಹೊಂದುತ್ತದೆ, "ಪರಿಶುದ್ಧರಾಗುವದಕ್ಕಾಗಿ ನಿಮ್ಮ ಅಂಗಗಳನ್ನು ನೀತಿಗೆ ದಾಸರನ್ನಾಗಿ ಒಪ್ಪಿಸಿ ಕೊಡಿರಿ."

ಈ ಅರ್ಥನಿರೂಪಣೆಯಲ್ಲಿರುವ ಅತಿ ದೊಡ್ಡ ಸಮಸ್ಯೆಯೆಂದರೆ κτάομαι (*ktaomai*) ಎಂಬ ಗ್ರೀಕ್ ಪದಕ್ಕೆ "ಸ್ವಾದೀನಪಡಿಸಿಕೋ" ಎಂಬ ಅನುವಾದವನ್ನು ನೀಡಿರುವದೆ. ಅನೇಕ ಸಾರಿ ಇದು "ಪಡೆದುಕೋ" ಅಥವಾ ಅದನ್ನು ಹೋಲುವಂತೆ ಅನುವಾದಿಸಲ್ಪಟ್ಟಿರುತ್ತದೆ. ಹೇಗೂ, ಈ ನಿರ್ದಿಷ್ಟವಾದ ವಾಕ್ಯಭಾಗದಲ್ಲಿ James Hope Moulton ಮತ್ತು George Milliganರು "ಸ್ವಾಧೀನಪಡಿಸಿಕೋ" ಎಂಬದಕ್ಕೆ ಒಲವು ತೋರುತ್ತಾರೆ. ಅವರು ಹೇಳಿದ್ದೇನೆಂದರೆ, "ಬಹುಶಃ 1 ಥೆಸಲೋನಿಕ 4:4ರಲ್ಲಿ 'ಕ್ರಮೇಣವಾಗಿ ದೇಹದ ಮೇಲೆ ಸಂಪೂರ್ಣ ಪ್ರಾಬಲ್ಯ ಸಾಧಿಸಿರಿ' ಎಂಬುದಕ್ಕೆ ಆದ್ಯತೆ ಕೊಡಬಹುದಾಗಿದೆ."[3]

ಒಬ್ಬ ವ್ಯಕ್ತಿಯು **ಕಾಮಾಭಿಲಾಷೆಗೆ** ("ಭಾವೋದ್ರಿಕ್ತ ಕಾಮ"; NIV) ಒಳಪಟ್ಟು ನಡೆದುಕೊಳ್ಳದೆ, ತನ್ನ ಸ್ವಂತ ದೇಹವನ್ನು ನಿಗ್ರಹಿಸಿಕೊಳ್ಳಬೇಕು. ಇಲ್ಲಿ, "ಕಾಮಾಭಿಲಾಷೆ" ಎಂಬುದರ ಅನುವಾದಿತ ಗ್ರೀಕ್ ಪದವು πάθος (*pathos*), ಇದರರ್ಥವು ನಿಯಂತ್ರಣ

ಮಾಡಲಾಗದ ಆದರೆ "ವಿಶೇಷವಾಗಿ ಲೈಂಗಿಕ ಸ್ವಭಾವವುಳ್ಳ [ಗಳಾದ]" ಎಲ್ಲಾ ಅನುರಾಗಗಳು ಎಂದಾಗಿರುತ್ತದೆ.[4] "ಅಭಿಲಾಷೆ" ಎಂಬುದರ ಅನುವಾದಿತ ಗ್ರೀಕ್ ಪದವು ἐπιθυμία (*epithumia*) ಎಂಬುದು, ಅದರಲ್ಲಿ ಎಲ್ಲಾ ಉತ್ಕಟವಾದ ಬಯಕೆಗಳು ಸೇರಿವೆ-ಸಾಮಾನ್ಯವಾಗಿ ಕೆಟ್ಟ, ಆದರೆ ಯಾವಾಗಲಾದರೂ ಒಳ್ಳೇ ಬಯಕೆಗಳಾಗಿರುತ್ತವೆ (2:17).

ಈ ದೇಹವನ್ನು ನಿಗ್ರಹಿಸಿಕೊಳ್ಳುವಿಕೆಯು **ದೇವರನ್ನರಿಯದ ಅನ್ಯಜನಗಳು** ಮಾಡುತ್ತಿದ್ದಕ್ಕೆ ವಿರುದ್ಧವಾಗಿತ್ತು. ಈ "ಅನ್ಯಜನಗಳು" ಕೆಳಗಿನ ಟಿಪ್ಪಣಿಯಲ್ಲಿ ಚಿತ್ರಿಸಲ್ಪಟ್ಟಿರುವ ವಿಗ್ರಹಾರಾಧಕ ಜನಾಂಗದ ಲೈಂಗಿಕ ಅನೈತಿಕತೆಯ ಅಂಗೀಕಾರವನ್ನು ಪ್ರತಿಪಾದಿಸುವವರಾಗಿದ್ದರು: "ಇಲ್ಲಿ ಖಂಡನೆ ಮಾಡಲಾಗಿರುವ ಮರಣಾಂತಿಕ ಪಾಪವು . . . ತಂದೆತಾಯಿಗಳಿಂದ ಮನ್ನಿಸಲ್ಪಟ್ಟದ್ದು (*Terent.* Adelph. I. ii. 21), ನೈತಿಕವಾದಿಗಳಿಂದ *ಶ್ಲಾಘಿಸಲ್ಪಟ್ಟದ್ದು* ಆಗಿತ್ತು (*Horat.* I Sat. ii. 32; cp. *Cicero* pro Coelis 48), ಮತ್ತು ವಿಶೇಷವಾಗಿ ಗ್ರೀಸ್‌ನಲ್ಲಿ ಹಾಗೂ ನಿರ್ದಿಷ್ಟವಾಗಿ ಸಂತ. ಪೌಲನು ಈಗ ಇದ್ದಂಥ *ಕೊರಿಂಥ* ಪಟ್ಟಣದಲ್ಲಿ ಅನ್ಯದೇವರಾಧಕ ಧರ್ಮದಿಂದ ಪ್ರತಿಷ್ಠಿಸಲ್ಪಟ್ಟಿತ್ತು . . ."[5]

"ಅನ್ಯಜನಗಳು" ಅಕ್ಷರಶಃ "ಜನಾಂಗಗಳು" ಆಗಿರುತ್ತದೆ. ಈ ಯೆಹೂದ್ಯೇತರ ಜನಾಂಗಗಳು ಅನ್ಯದೇವರಾಧಕರು "ದೇವರನ್ನರಿಯದ" ಕಾರಣದಿಂದ ತಮ್ಮನ್ನು ನಿಗ್ರಹಿಸಿಕೊಳ್ಳದವರಾಗಿದ್ದರು. ಪೌಲನು ಬೇರೆ ಕಡೆಯಲ್ಲಿ ದೇವರು ಅನ್ಯಜನರನ್ನು ತಿರಸ್ಕರಿಸಿದನು ಯಾಕೆಂದರೆ ಅವರು ಆತನ ಕುರಿತ ಜ್ಞಾನವನ್ನು ಇಷ್ಟಪಡಲಿಲ್ಲ ಎಂದು ನಮಗೆ ಹೇಳಿದನು (ರೋಮಾ 1:26-28). ಪರಿಚಯ ಭಾಗದಲ್ಲಿ ಗಮನಿಸಿದ ಹಾಗೆ, ಥೆಸಲೋನಿಕದ ಸದಸ್ಯರಲ್ಲಿ ಬಹುಪಾಲು ಜನರು ಅನ್ಯಜನಾಂಗದ ಮೂಲದಿಂದ ಬಂದವರಾಗಿದ್ದರು, ಆದರೆ ಸುವಾರ್ತೆಗೆ ವಿಧೇಯರಾಗುವ ಮೂಲಕ, ಅವರು ಆತ್ಮೀಕ ಅರ್ಥದಲ್ಲಿ ಯೆಹೂದ್ಯರಾಗಿದ್ದರು (ನೋಡಿರಿ ರೋಮಾ 2:28, 29).

**ವಚನ 6.** ಸನ್ನಿವೇಶವು ಸ್ಪಷ್ಟಗೊಳಿಸುವದೇನೆಂದರೆ ಹೇಳಲ್ಪಟ್ಟಿರುವ **ವಿಷಯದಲ್ಲಿ** ಎಂಬುದು ಸಮರ್ಪಕವಾದ ಮೇರೆಗಳನ್ನು ದಾಟಿ ಹೋಗಿ **ತನ್ನ ಸಹೋದರನನ್ನು ವಂಚಿಸಿ ಕೇಡಮಾಡುವದ**ರ ಬದಲಾಗಿ ಒಬ್ಬನು ತನ್ನ ದೇಹ ಅಥವಾ ಅಭಿಲಾಷೆಗಳನ್ನು ನಿಯಂತ್ರಣ ಮಾಡಿಕೊಳ್ಳುವದರ ಅವಶ್ಯಕತೆ ಆಗಿರುತ್ತದೆ. ಒಬ್ಬನ ಅನೈತಿಕತೆಯು ಯಾವ ವಿಧದಲ್ಲಿ "ಆತನ ಸಹೋದರನನ್ನು ವಂಚಿಸಿ ಕೇಡು ಮಾಡುವದು"? ಪೌಲನು ಬಹುಶಃ ಆ ಸಹೋದರನ ಹೆಂಡತಿಯೊಂದಿಗೆ ವ್ಯಭಿಚಾರ ಮಾಡುವ ಮೂಲಕ ಆತನನ್ನು ವಂಚಿಸಿ ಕೇಡುಮಾಡುವ ಕುರಿತಾಗಿ ಮಾತಾಡುತ್ತಿರಬಹುದು (ನೋಡಿರಿ ವಿಮೋಚನಕಾಂಡ 20:17), ಅಥವಾ ಯಾವದೋ ಒಬ್ಬ ವ್ಯಕ್ತಿಯ ಭಾವಿ ಸಂಗಾತಿಯೊಂದಿಗೆ ಅನೈತಿಕ ಸಂಭೋಗ ನಡಿಸುವ ಅಥವಾ ದುರುಪಯೋಗಪಡಿಸಿಕೊಳ್ಳುವ ಮೂಲಕ ವಂಚಿಸುವದು ಆಗಿರಬಹುದಾಗಿದೆ. ಪೌಲನು ಥೆಸಲೋನಿಕದವರಿಗೆ ಮತ್ತು ಲೈಂಗಿಕ ಅಸಡ್ಡೆ ತನವು ವ್ಯಾಪಕವಾಗಿರುವ ನಮ್ಮ ಸಮಾಜಕ್ಕೆ, ಅನೈತಿಕತೆಯಿಂದ ದೂರವಿರುವದಕ್ಕೆ ಜಾಗ್ರತೆ ವಹಿಸಬೇಕು ಯಾಕೆಂದರೆ ಅಂಥ ಪಾಪಗಳಿಗೆಲ್ಲಾ **ಕರ್ತನು ಮುಯ್ಯಿಗೆ ಮುಯ್ಯಿ ತೀರಿಸುವವನಾಗಿದ್ದಾನೆ** ("ಕರ್ತನು ಅಂಥ ಪಾಪಗಳಿಗಾಗಿ ಮನುಷ್ಯರನ್ನು ದಂಡಿಸುವನು";

NIV) ಎಂದು ಪೌಲನು ಹೇಳುತ್ತಾನೆ. "ಮುಯ್ಯಿ ತೀರಿಸುವವನಾಗಿದ್ದಾನೆ" ಎಂಬುದು ἔκδικος (*ekdikos*) ಎಂಬ ಪದದಿಂದ ಬಂದಿರುತ್ತದೆ, ಅದು "ಪ್ರತೀಕಾರ ಸಲ್ಲಿಸುವದು" ಎಂಬ ಅರ್ಥವನ್ನು ನೀಡುವದಿಲ್ಲ, ಅದು ಕೇವಲ ನಿಜವಾದ ನ್ಯಾಯವನ್ನು ಒದಗಿಸುವದು ಎಂಬದನ್ನಷ್ಟೆ ಒಳಗೊಂಡಿರುತ್ತದೆ. ಹೊಸ ಒಡಂಬಡಿಕೆಯೊಳಗೆ ಇದು ಬೇರೆ ಇನ್ನೊಂದು ಸಾರಿ ಮಾತ್ರವೇ ಕಾಣಿಸಿಕೊಳ್ಳುವದು ರೋಮಾ 13:4ರಲ್ಲಿ ಆಗಿರುತ್ತದೆ, ಅಲ್ಲಿ ಅದು ಸರ್ಕಾರಿ ನ್ಯಾಯಾಧಿಪತಿಗಳಿಗೆ ಸಂಬಂಧ ಪಟ್ಟದ್ದಾಗಿರುತ್ತದೆ. ಇಂದು ಅನೇಕರು ಹೇಳುವದೇನೆಂದರೆ ದೇವರು ನಮ್ಮನ್ನು ಅತಿಯಾಗಿ ಪ್ರೀತಿಸುವವನಾಗಿದ್ದು ನಮ್ಮನ್ನು ದಂಡಿಸುವಂತವನಲ್ಲ ಎಂಬದೆ, ಆದರೆ ಪೌಲನು ಈ ಯೋಚನೆಗೆ ಸಹಮತವನ್ನು ವ್ಯಕ್ತಪಡಿಸಲಿಲ್ಲ. ಅಷ್ಟುಮಾತ್ರವಲ್ಲದೆ, ತಾನು ಅವರ ಸಂಗಡ ಇದ್ದ ವೇಳೆಯಲ್ಲಿ ಮುಂಚೆಯೇ ಈ ಸತ್ಯದ ಕುರಿತು **ಖಂಡಿತವಾಗಿ ಹೇಳಿದ**ನು ಎಂಬುದನ್ನು ಪೌಲನು ಅವರಿಗೆ ಜ್ಞಾಪಕ ಪಡಿಸುತ್ತಾನೆ.

**ವಚನ 7.** ದೇವರು ಜನರನ್ನು ಕ್ರೈಸ್ತರಾಗುವದಕ್ಕೆ ಕರೆಯುವ ದಾರಿಯು ಸುವಾರ್ತೆಯ ಮೂಲಕವೇ ಆಗಿದೆ (2 ಥೆಸಲೋನಿಕ 2:14). **ದೇವರು ನಮ್ಮನ್ನು ಬಂಡತನಕ್ಕೆ ಕರೆಯದೆ ಶುದ್ಧರಾಗಿರುವದಕ್ಕೆ ಕರೆದನು** ಎಂಬದಾಗಿ ಪೌಲನು ಹೇಳಿದನು. ಅದು ನಾವು ಹಿಂದಿನಂತೆಯೇ ಪಾಪ ಕೃತ್ಯದಲ್ಲಿ ಮುಂದುವರೆಯುವಂತ ಜೀವನಕ್ಕಾಗಿ ಕೊಡುವ ಕರೆಯಲ್ಲ, ಆದರೆ ಬದಲಾಗಿ ದೇವರು ಕ್ರಮೇಣದಲ್ಲಿ ಪಾಪವನ್ನು ಜಯಿಸುವಂತೆ ನನಮಗೆ ಸಹಾಯ ಮಾಡುವ ಜೀವಿತಕ್ಕೆ ನೀಡುವ ಕರೆಯುವಿಕೆಯಾಗಿದೆ. "ಅಶುದ್ಧತೆ" ಮತ್ತು "ಶುದ್ಧೀಕರಣ"ಗಳ ನಡುವಿನ ವಿರುದ್ಧತೆಯು "[ἐπὶ] *epi* (ಅದರ ಆಧಾರದ ಮೇಲೆ) ಮತ್ತು [ἐν] *en* (ಅದರ ವ್ಯಾಪ್ತಿಯಲ್ಲಿ) ಎಂಬ ಎರಡು ಉಪಸರ್ಗಗಳ ಮೂಲಕ ಇನ್ನಷ್ಟು ತೀಕ್ಷ್ಣಗೊಳಿಸಲ್ಪಡುತ್ತದೆ."[6] ನಾವು ಪಾಪಭರಿತ ಮತ್ತು ಪಾಪಭರಿತವಲ್ಲದ ನಡವಳಿಕೆ ನಡುವೆ ವ್ಯತ್ಯಾಸವನ್ನು ಗುರುತಿಸಿ ಪಾಪದಿಂದ ದೂರವಿರುವಂಥ ಜನರೋ?

**ವಚನ 8.** ನಾವು ಪರಿಶುದ್ಧ ಜೀವಿತಗಳನ್ನು ಜೀವಿಸಬೇಕೆಂದು ಹೇಳುವಂಥ **ಈ ಮಾತನ್ನು** (ಆಜ್ಞೆಯನ್ನು) ತಿರಸ್ಕರಿಸುವ ಕ್ರೈಸ್ತನು **ಮನುಷ್ಯನನ್ನು ತಿರಸ್ಕರಿಸುವದು ಮಾತ್ರವಲ್ಲದೆ . . .** ವಿಶ್ವದ ಸೃಷ್ಟಿಕರ್ತನಾದ **ದೇವರನ್ನೂ ತಿರಸ್ಕರಿಸುತ್ತಾನೆ.** "ತಿರಸ್ಕರಿಸುತ್ತಾನೆ" ಎಂಬದಕ್ಕಿರುವ ಗ್ರೀಕ್ ಕ್ರಿಯಾಪದ ἀθετέω (*atheteō*) ಎಂಬುದು "ಒಂದು ಚಿತ್ತವನ್ನು (ಗಲಾತ್ಯ 3:15) ಅಥವಾ ಅದಕ್ಕೆ ಹೋಲಿಕೆಯಾಗಿರುವ ದಸ್ತಾವೇಜನ್ನು 'ರದ್ದುಗೊಳಿಸುವ' ಅಧಿಕೃತ ಅಥವಾ ಕಾನೂನಾತ್ಮಕ ಅರ್ಥದಲ್ಲಿ ಬಳಸಲ್ಪಟ್ಟಿದೆ."[7]

ಕ್ರೈಸ್ತರು ಆ ವಿಧದಲ್ಲಿ ನಡೆಯುವದಕ್ಕೆ ಮುನ್ನ, ನಾವು ತನ್ನ **ಪವಿತ್ರಾತ್ಮ ವರವನ್ನು** ದಯಪಾಲಿಸಿದ ದೇವರನ್ನು ತಿರಸ್ಕರಿಸುವವರಾಗಿರುತ್ತೇವೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ದೇವರು ದೀಕ್ಷಾಸ್ನಾನದ ವೇಳೆ ನಮಗೆ ತನ್ನ ಆತ್ಮನನ್ನೂ ಕೊಟ್ಟನು (ಅಪೊಸ್ತಲರ ಕೃತ್ಯಗಳು 2:38) ಮತ್ತು ಬಳಿಕ ನಮ್ಮೊಳಗೆ ನಿರಂತರವಾಗಿ ವಾಸಿಸುವದಕ್ಕೆ ಸಹ ತನ್ನ ಪವಿತ್ರಾತ್ಮನನ್ನು "ಕೊಡುತ್ತಾನೆ," ಅಥವಾ ಅನುಮತಿಸುತ್ತಾನೆ (1 ಕೊರಿಂಥ 6:11; 18-20). ಪೌಲನು ಇಲ್ಲಿ ನಿರಂತರವಾಗಿ *ನಮ್ಮೊಳಗೆ* ನೆಲೆಸಲು ದೇವರು ಕೊಡುವ ಪವಿತ್ರಾತ್ಮನನ್ನು ಹೊಂದಿದವರಾಗಿರುವ ಅದೇ ವೇಳೆಯಲ್ಲಿ ಪಾಪಕೃತ್ಯದಲ್ಲಿ ತೊಡಗಿರುವದರ ಅಸಂಬದ್ಧತೆಯನ್ನು ಎತ್ತಿ ತೋರಿಸುತ್ತಿದ್ದಾನೆ. ನಾವು "ಪವಿತ್ರಾತ್ಮನನ್ನು

ದುಃಖಿಸದವರಾಗದಂತೆ" ಜಾಗ್ರತೆ ವಹಿಸಬೇಕು (ಎಫೆಸ 4:30). ಈ ಭಯಂಕರವಾದ ಅಸಾಮಂಜಸ್ಯತೆಯ ಅಪರಾಧಕ್ಕೊಳಗಾದವರೋ?

## ಸಹೋದರ ಪ್ರೀತಿಯಲ್ಲಿರಬೇಕೆಂದು ಬುದ್ಧಿವಾದ (4:9-12)

**[9]ಸಹೋದರಸ್ನೇಹ ವಿಷಯದಲ್ಲಿ ನಿಮಗೆ ಬರೆಯುವದು ಅವಶ್ಯವಿಲ್ಲ; ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬ ಉಪದೇಶವನ್ನು ನೀವೇ ದೇವರಿಂದ ಹೊಂದಿದವರಾಗಿದ್ದು ಸಮಸ್ತ ಮಕೆದೋನ್ಯದಲ್ಲಿರುವ ಸಹೋದರರನ್ನೆಲ್ಲಾ ಪ್ರೀತಿಸುವವರಾಗಿಯೇ ಇದ್ದೀರಿ. [10]ಆದರೂ ಸಹೋದರರೇ, ನೀವು ಪ್ರೀತಿಯಲ್ಲಿ ಇನ್ನೂ ಹೆಚ್ಚುತ್ತಾ ಬರಬೇಕೆಂದು ನಿಮ್ಮನ್ನು ಪ್ರಬೋಧಿಸುತ್ತೇವೆ. [11]ಇದಲ್ಲದೆ ನಾನು ನಿಮಗೆ ಆಜ್ಞೆ ಕೊಟ್ಟ ಪ್ರಕಾರ ನೀವು ಮತ್ತೊಬ್ಬರ ಕಾರ್ಯದಲ್ಲಿ ತಲೆಹಾಕದೆ ಸುಮ್ಮಗಿದ್ದು ಸ್ವಂತ ಕಾರ್ಯವನ್ನೇ ನಡಿಸಿಕೊಂಡು ಕೈಯಾರೆ ಕೆಲಸಮಾಡುವದೇ ಮಾನವೆಂದೆಣಿಸಿರಿ. [12]ಹೀಗಿದ್ದರೆ ನೀವು ಹೊರಗಿನವರ ಎದುರಿನಲ್ಲಿ ಸಜ್ಜನರಾಗಿ ನಡೆದುಕೊಳ್ಳುವಿರಿ ಮತ್ತು ನಿಮಗೆ ಯಾವದಕ್ಕೂ ಕೊರತೆಯಿರುವದಿಲ್ಲ.**

**ವಚನ 9. ಸಹೋದರಸ್ನೇಹ** ಎಂಬುದು ಗ್ರೀಕ್ ನ φιλαδελφία (*philadelphia*) ಎಂಬ ಪದದಿಂದ ಬಂದದ್ದಾಗಿದೆ, ಅದರಲ್ಲಿ ಒಬ್ಬನು ತಕ್ಷಣವೇ ಫಿಲದೆಲ್ಫಿಯಾ, "ಸಹೋದರ ಪ್ರೀತಿಯ ಪಟ್ಟಣ" ಎಂಬದರೊಂದಿಗಿರುವ ಹೋಲಿಕೆಯನ್ನು ಕಾಣುವನು. ಈ ವಿಧವಾದ ಪ್ರೀತಿಯು ಗ್ರೀಕ್ ನಲ್ಲಿ ಬೇರೆ ರೀತಿಯ ಭಾವಗಳಿಂದ ವ್ಯತ್ಯಾಸಗೊಳಿಸಲ್ಪಟ್ಟಿರುತ್ತದೆ. ಇದು ತನ್ನ ಸ್ವಂತ ಕುಟುಂಬದಲ್ಲಿರುವವರ ಕಡೆಗೆ ಒಬ್ಬನು ಸಾಮಾನ್ಯವಾಗಿ ಹೊಂದಿದ್ದ ಭಾವ ಆಗಿತ್ತು, ಸಾಮಾನ್ಯವಾಗಿ ಇದೊಂದು ತನ್ನಿಂದ ತಾನೇ ಉಂಟಾಗುತ್ತಿದ್ದ ಭಾವವಾಗಿರುತ್ತದೆ. ಈ ವಿಧವಾದ ಪ್ರೀತಿಯು ಒಬ್ಬರೊಂದಿಗೊಬ್ಬರು ಹೊಂದಿರುವ ನಿಷ್ಠೆಯನ್ನು ಸೂಚಿಸುವದಾಗಿದೆ (ರೋಮಾ 12:10; ಇಬ್ರಿಯ 13:1 ರೊಂದಿಗೆ ಹೋಲಿಸಿರಿ). ಥೆಸಲೋನಿಕದವರಿಗೆ ಈ ಪ್ರೀತಿಯ ಕುರಿತು ತಾನು ಅವರಿಗೆ **ಬರೆಯುವದು ಅವಶ್ಯವಿಲ್ಲ** ಯಾಕೆಂದರೆ ಈಗಾಗಲೇ ಈ ವಿಷಯದ ಕುರಿತ **ಉಪದೇಶವನ್ನು . . . ದೇವರಿಂದ ಹೊಂದಿದವರಾಗಿದ್ದರು.** ಈ ಸಮರ್ಥನೆಯಲ್ಲಿ "ಬರೆಯುವದು" ಎಂಬ ಪದದ ಮೇಲೆ ಒತ್ತು ಇರುವಂತೆ ತೋರುತ್ತದೆ. ಆತನು ಅವರಿಗೆ "ಬರೆಯುವಂಥ" ಅವಶ್ಯಕತೆಯನ್ನು ಅವರು ಹೊಂದಿರಲಿಲ್ಲ, ಯಾಕೆಂದರೆ ಈ ವಿಷಯದಲ್ಲಿ ಅವರು ಈಗಾಗಲೇ ಮೌಖಿಕವಾಗಿ ದೇವರಿಂದ "ಉಪದೇಶಿಸಲ್ಪಟ್ಟಿದ್ದರು." ದೇವರು ಅವರಿಗೆ ತನ್ನನ್ನು ಪ್ರತ್ಯಕ್ಷಪಡಿಸಿಕೊಂಡಿದ್ದನು ಎಂಬದಾಗಿ ಪೌಲನು ಹೇಳುತ್ತಿಲ್ಲ ಎಂಬುದು ಸ್ಪಷ್ಟವಾಗಿರುತ್ತದೆ. ಆತನ ತಾತ್ಪರ್ಯವು ತಾನು (ಪೌಲನು) ಥೆಸಲೋನಿಕದಲ್ಲಿದ್ದು ಅವರಿಗೆ ಉಪದೇಶಿಸಿದ ವೇಳೆಯಲ್ಲಿ "ದೇವರು ಪರೋಕ್ಷವಾಗಿ ಕಲಿಸಿದನು" ಎಂಬದಾಗಿತ್ತು. ಒಬ್ಬ ಪ್ರೇರಿತ ಮನುಷ್ಯನು ಮಾತಾಡುವಾಗ, ಆತನ ಮಾತುಗಳು ಮನುಷ್ಯನ ವಾಕ್ಯವಾಗಿರುವದಿಲ್ಲ, ಆದರೆ ದೇವರ ವಾಕ್ಯವಾಗಿರುತ್ತದೆ (2:13). ಶಾಸ್ತ್ರಗಳ ಸರಿಯಾದ ಭಾವನೆಯು ಪ್ರೇರಿತ ಮನುಷ್ಯರು ಮಾಡಿದ ಉಪದೇಶ ಮತ್ತು ಬೇರೆಯವರು ಮಾಡಿದ ಉಪದೇಶದ ನಡುವೆ ವ್ಯತ್ಯಾಸವನ್ನು ತೋರಿಸುತ್ತದೆ. ಇಂದು ಧಾರ್ಮಿಕ ಜಗತ್ತಿನಲ್ಲಿ ಕೆಲವರು ಈ ಅವಶ್ಯಕವಾದ

ವ್ಯತ್ಯಾಸವನ್ನು ಮಾಡುವದಿಲ್ಲ. Leon Morris ನಂಬುವದೇನೆಂದರೆ ಅವರೊಳಗಿರುವ ಪವಿತ್ರಾತ್ಮನೇ ಅವರಿಗೆ ನೇರವಾಗಿ ಕಲಿಸುವವನಾಗಿದ್ದಾನೆ,[8] ಆದರೆ ಆ ರೀತಿಯಿರುವಂತದ್ದು ಎಲ್ಲಾ ಅಪೊಸ್ತಲಿಕ ಪತ್ರಿಕೆಗಳನ್ನು ಅನಾವಶ್ಯಕಗೊಳಿಸುವದಾಗುವದು!

**ವಚನ 10.** ಅವರ ಪ್ರೀತಿಯ ಕುರಿತಾಗಿ ಪೌಲನು ತಿಮೊಥೆಯನ ಮೂಲಕವಾಗಿ ತಿಳುಕೊಂಡಿದ್ದನು (3:6). **ಮಕೆದೋನ್ಯ**ವು ಥೆಸಲೋನಿಕ ಇದ್ದಂಥ ಪ್ರಾಂತ್ಯವಾಗಿತ್ತು, ಮತ್ತು ಅದರಲ್ಲಿ ಫಿಲಿಪ್ಪಿ ಹಾಗೂ ಬೆರೋಯ ಪಟ್ಟಣಗಳು ಸಹ ಸೇರಿದ್ದವು, ಆ ಪಟ್ಟಣಗಳಲ್ಲಿ ಪೌಲನು ಸ್ಥಾಪಿಸಿದ್ದ ಸಭೆಗಳೊಂದಿಗೆ ಥೇಸಲೋನಿಕದ ಸಹೋದರರು ಸಂಬಂಧಗಳನ್ನು ಕಾಪಾಡಿಕೊಂಡು ಬಂದಿದ್ದರು. ಥೆಸಲೋನಿಕದ ಸಹೋದರರು ಶ್ರೀಮಂತರು ಮತ್ತು ಬಡವರು, ವಿದ್ಯಾವಂತರು ಮತ್ತು ಅವಿದ್ಯಾವಂತರು, ಅಥವಾ ಬೇರೆ ಇತರ ರೀತಿಗಳಲ್ಲಿ ಭೇದವನ್ನು ಮಾಡದೆ **ಸಹೋದರರನ್ನೆಲ್ಲಾ** ಪ್ರೀತಿಸುತ್ತಿದ್ದರು (ಗಲಾತ್ಯ 3:28 ರೊಂದಿಗೆ ಹೋಲಿಸಿರಿ). ಇದು ಸತ್ಯವಾಗಿತ್ತಾದರೂ, ಅವರನ್ನು ಪ್ರೀತಿಯಲ್ಲಿ **ಇನ್ನೂ ಹೆಚ್ಚುತ್ತಾ ಬರಬೇಕೆಂದು ಪ್ರಬೋಧಿಸಬೇಕು** ಅಥವಾ ಸಹೋದರರೆಡೆಗೆ ಈ ಪ್ರೀತಿಯಲ್ಲಿ ಬೆಳೆಯುವಂತೆ ಬೇಡಿಕೊಳ್ಳಬೇಕು ಎಂಬದಾಗಿ ಪೌಲನು ನಂಬಿದ್ದನು. "ಪ್ರಬೋಧಿಸು" ಎಂಬುದು ಪುನಃ παρακαλέω (*parakaleō*) ಎಂಬುದರ ಒಂದು ರೂಪವಾಗಿರುತ್ತದೆ. (3:7ರ ಮೇಲಿನ ಚರ್ಚೆಯನ್ನು ನೋಡಿರಿ.)

ಇಂದು ನಾವು ನಮ್ಮ ಸಹೋದರರನ್ನು ಎಷ್ಟೊಂದು ಪ್ರೀತಿಸುತ್ತೇವೆ? ಅಪೊಸ್ತಲ ಮಾತುಗಳು ನಮ್ಮನ್ನು ಅದರಲ್ಲಿ "ಇನ್ನೂ ಹೆಚ್ಚುತ್ತಾ ಬರಬೇಕೆಂದು" ಪ್ರಬೋಧಿಸುತ್ತವೆ ಯಾಕೆಂದರೆ ನಾವು ಖಂಡಿತವಾಗಿಯೂ ನಮ್ಮ ಪರಲೋಕದ ತಂದೆಯು ಪ್ರೀತಿಸುವಷ್ಟರ ಮಟ್ಟಿಗೆ ಸಹೋದರರನ್ನು ಪ್ರೀತಿಸಿರುವದಿಲ್ಲ, ಮತ್ತು ಆತನೇ ನಮಗೆ ಮಾನದಂಡವಾಗಿದ್ದಾನೆ (ಮತ್ತಾಯ 5:48). "ಇನ್ನೂ ಹೆಚ್ಚುತ್ತಾ ಬರಬೇಕು" ಎಂಬ ಈ ಪ್ರಬೋಧನೆಯು 1ನೇ ವಚನದಲ್ಲಿ "ಇನ್ನೂ ಹೆಚ್ಚಾಗಿ ನಡೆಯಬೇಕು" ಎಂಬುದಕ್ಕೆ ಸಮಾನವಾಗಿರುತ್ತದೆ ಎಂಬುದನ್ನು ಗಮನಿಸತಕ್ಕದ್ದು. ಪವಿತ್ರಾತ್ಮನಿಂದ ಮಾರ್ಗದರ್ಶಿಸಲ್ಪಟ್ಟವನಾಗಿ, ಪೌಲನು ಕಳಕಳಿಯು ಕ್ರೈಸ್ತರು ಆತ್ಮೀಕವಾಗಿ ನಿರಂತರವಾಗಿ ಬೆಳೆಯಬೇಕೆಂಬುದಾಗಿತ್ತು. ಇದರರ್ಥವೇನೆಂದರೆ ನಾವು ನಮ್ಮ ಆತ್ಮೀಕ ಬೆಳವಣಿಗೆಯ ಬಗ್ಗೆ ಕಳಕಳಿಯನ್ನು ಹೊಂದಿರಬೇಕು ಎಂಬದೆ.

**ವಚನ 11.** ಈ ವಚನದಲ್ಲಿರುವ ಬೋಧನೆಯಲ್ಲಿನ ಮೂರು ಅಂಶಗಳು ಥೆಸಲೋನಿಕದ ಸಮಾಜದಲ್ಲಿ ಅಗತ್ಯವಾದವುಗಳಾಗಿದ್ದವು. ಕೆಲವು ಲೌಕಿಕ ಪುರಾವೆ ಸೂಚಿಸುವ ಪ್ರಕಾರ ಥೆಸಲೋನಿಕದವರು ಚಡಪಡಿಸುವವರು, ಆವೇಗವುಳ್ಳವರು, ಮತ್ತು ಸುಲಭವಾಗಿ ತಳಮಳಗೊಳ್ಳುವವರು ಆಗಿದ್ದರು. ಈ ವಿಕಟ ಚಿತ್ರಣವು ಅವರು παρουσία (*parousia*), ಅಥವಾ ಎರಡನೆಯ ಬರೋಣವನ್ನು ಎದುರು ನೋಡುವವರಾಗಿ ಉದ್ಯೋಗಗಳನ್ನೇ ನಿಲ್ಲಿಸಿಬಿಟ್ಟಿದ್ದರು ಎಂಬುದೊಂದಿಗೆ ಸರಿಯಾಗಿ ಹೊಂದಿಕೆಯಾಗುತ್ತದೆ (2 ಥೆಸಲೋನಿಕ 3:1-15ರಲ್ಲಿರುವ ಪ್ರಕಾರ).

ಮೊದಲನೆಯದಾಗಿ, ಲೋಕದ ವರ್ತನೆಗೆ ತದ್ವಿರುದ್ಧವಾಗಿ ಅವರು ಮೊದಲು

**ಸುಮ್ಮಗಿದ್ದು ಸ್ವಂತ ಕಾರ್ಯವನ್ನೇ ನಡಿಸಿಕೊಂಡು** [ಹೋಗುವದು] **ಮಾನವೆಂದೆಣಿಸಬೇಕು** ಎಂದು ಪೌಲನು ಹೇಳುತ್ತಾನೆ. ಮೂಲ ವಾಕ್ಯರಚನೆಯ ಒಂದು ಹೆಚ್ಚು ಅಕ್ಷರಶಃ ಅನುವಾದವು "ಸುಮ್ಮಗಿರುವದಕ್ಕೆ ವಿಶ್ರಾಂತಿಯಿಲ್ಲದವರಾಗಿ ಪರಿಶ್ರಮ ಪಡಿರಿ" ಎಂದಿರುತ್ತದೆ. NEBಯು ಅವರು "ಶಾಂತದಿಂದಿರುವದಕ್ಕೆ" ಪರಿಶ್ರಮ ಪಡಬೇಕು ಹೊರತು ಯಾವಾಗಲೂ ತಮ್ಮನ್ನು ತಳಮಳದ ಸ್ಥಿತಿಯಲ್ಲಿ ಇರಬಾರದು ಎಂಬ ಭಾವಾನುವಾದವನ್ನು ಒದಗಿಸುತ್ತದೆ (ನೋಡಿರಿ ಫಿಲಿಪ್ಪಿ 4:4-7). ಎರಡನೆಯದಾಗಿ, ಅವರಿಗೆ ಬೇರೆಯವರ ಕೆಲಸಗಳಲ್ಲಿ ಮೂಗು ತೂರಿಸಿದೆ **ಸ್ವಂತ ಕಾರ್ಯವನ್ನೇ ನಡಿಸಿಕೊಂಡು** ಹೋಗಬೇಕೆಂದು ("[ತಮ್ಮ] ಸ್ವಂತ ಕೆಲಸವನ್ನು ನೋಡಿಕೊಳ್ಳಬೇಕು"; NIV) ಹೇಳಲಾಯಿತು (1 ಪೇತ್ರ 4:15ರೊಂದಿಗೆ ಹೋಲಿಸಿರಿ). ಮೂರನೆಯದಾಗಿ, ತನ್ನ ಸ್ವಂತ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಒಬ್ಬನು ಬೇರೆಯವರ ವ್ಯವಹಾರಗಳಲ್ಲಿ ಕೈ ಹಾಕದಿರುವ ಸಾಧ್ಯತೆ ಕಡಿಮೆಯಿರುತ್ತದೆಂಬದನ್ನು ತಿಳಿದವನಾಗಿ, ತಾನು ಅವರ ಮಧ್ಯದಲ್ಲಿ ವೈಯಕ್ತಿಕವಾಗಿ ಇದ್ದಂಥ ವೇಳೆಯಲ್ಲಿ ಈಗಾಗಲೇ ಅವರಿಗೆ [ತಮ್ಮ] **ಕೈಯಾರೆ ಕೆಲಸ ಮಾಡಬೇಕೆಂದು ಆಜ್ಞೆ ಕೊಟ್ಟ ಪ್ರಕಾರ** ಎಂದು ಜ್ಞಾಪಿಸುತ್ತಾನೆ. ಕ್ರೈಸ್ತನು ತನ್ನ ಜೀವನಕ್ಕಾಗಿ ದುಡಿಯುವದರಲ್ಲಿ ಮತ್ತು ಕಷ್ಟದಲ್ಲಿರುವವರಿಗೆ ಸಹಾಯ ಮಾಡುವದಕ್ಕಾಗಿ ಸ್ವಲ್ಪ ಹೆಚ್ಚುವರಿ ಹಣ ಸಂಪಾದಿಸುವದರಲ್ಲಿ ಕಾರ್ಯಮಗ್ನನಾಗಿರಬೇಕು ಎಂಬದಾಗಿ ಆತನು ಹೇಳುತ್ತಿದ್ದಾನೆ. ಆತನು ತನ್ನ ಸ್ವಂತ ಕೆಲಸದಲ್ಲಿ ನಿರತನಾಗಿದ್ದಲ್ಲಿ, ಬೇರೆಯವರ ವಿಷಯಗಳಲ್ಲಿ ತಳಮಳವನ್ನು ಸೃಷ್ಟಿಸುವವನಾಗುವದಿಲ್ಲ.

ಈಗಾಗಲೆ ಗಮನಿಸಿರುವಂತೆ, ಪೌಲನು ಅಲ್ಲಿದ್ದ ವೇಳೆಯಲ್ಲಿ ಈ ಸತ್ಯವನ್ನು ಕಲಿಸಿದ್ದನು, ಆದರೆ ಸ್ಪಷ್ಟವಾಗಿರುವ ಪ್ರಕಾರ ಅವರಲ್ಲಿ ಕೆಲವರು ಅದನ್ನು ಕೈಕೊಂಡಿರಲಿಲ್ಲ ಎಂದು ತೋರುತ್ತದೆ. ಅನಂತರ, ಅವರಲ್ಲಿ ಕೆಲವರು ಪೌಲನ ಉಪದೇಶವನ್ನು ಅಪಾರ್ಥ ಮಾಡಿಕೊಂಡು, ಕ್ರಿಸ್ತನು ಅವರ ಪೀಳಿಗೆಯಲ್ಲಿಯೇ ಹಿಂದಿರುಗುವನು ಎಂಬದಾಗಿ ಭಾವಿಸಿಕೊಂಡಿದ್ದರೆಂಬದನ್ನು ನಾವು ಕಾಣುತ್ತೇವೆ. ಆದದರಿಂದ, ಅವರು ಕೆಲಸ ಮಾಡುವದನ್ನು ನಿಲ್ಲಿಸಿ ಬಿಟ್ಟಿದ್ದು ಮತ್ತು ಬೇರೆಯವರ ವ್ಯವಹಾರಗಳಲ್ಲಿ ಕೈಹಾಕುವವರಾಗಿದ್ದರು, ಬೇರೆಯವರನ್ನು ಅವಲಂಭಿಸುವವರಾಗಿದ್ದರು (2 ಥೆಸಲೋನಿಕ 3:6-12). ಜೀವನವನ್ನು ಈ ವಿಧದಲ್ಲಿ ನಡಿಸುವದು ಎರಡು ಕಾರಣಗಳಿಗಾಗಿ ತಪ್ಪಾದದ್ದಾಗಿದೆ. ನಮಗೆ ಸಹಾಯ ಮಾಡಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದವರಾಗಿದ್ದು ಮತ್ತೊಬ್ಬರ ಮೇಲೆ ಆಧಾರಗೊಳ್ಳುವದು ತಪ್ಪು (2 ಥೆಸಲೋನಿಕ 3:10), ಮತ್ತು ಬೇರೆಯವರ ವ್ಯವಹಾರಗಳಲ್ಲಿ ತಲೆ ಹಾಕುವದು ತಪ್ಪು (2 ಥೆಸಲೋನಿಕ 3:11). ನಾವು ವ್ಯಕ್ತಿಗತವಾಗಿಯೂ ಸಭೆಯಾಗಿಯೂ ಸಮರ್ಮಪಕವಾದ ಮಾನವ ನಡವಳಿಕೆಯ ಈ ಮೂಲಭೂತ ತತ್ವವನ್ನು ನಾವು ಕೈಕೊಂಡು ನಡೆಯಬೇಕು ಮತ್ತು ಕೈಕೊಂಡು ನಡೆಯುವಂತೆ ಬೇರೆಯವರನ್ನು ಪ್ರೋತ್ಸಾಹಿಸಬೇಕು. ಖಂಡಿತವಾಗಿಯೂ, ಈ ವಾಸ್ತವಾಂಶವು ಕ್ರೈಸ್ತರು ಬಡವರಿಗೆ, ರೋಗಿಗಳಿಗೆ ಮತ್ತು ತಮಗೆ ಸಹಾಯ ಮಾಡಿಕೊಳ್ಳಲಾಗದ ಇತರರಿಗೆ ಸಹಾಯ ಮಾಡಬೇಕೆಂಬುದನ್ನು ನಿರಾಕರಿಸುವದಿಲ್ಲ (ಯಾಕೋಬ 2:14-17ರೊಂದಿಗೆ ಹೋಲಿಸಿರಿ).

**ವಚನ 12.** ಇದು **ಹೊರಗಿನವರ ಮುಂದೆ ಸಜ್ಜನರಾಗಿ ನಡೆದುಕೊಳ್ಳುವದಕ್ಕೋಸ್ಕರ** ಕ್ರೈಸ್ತರು ಅಳವಡಿಸಿಕೊಳ್ಳಬೇಕಾದ ಜೀವನ ಶೈಲಿಯನ್ನು ಬಣ್ಣಿಸುತ್ತದೆ. "ಸಮರ್ಪಕವಾಗಿ" ಎಂಬುದು "[εὐσχήμων] *euschēmōn* (*eu, schēma*, Latin *habitus*, ಸಂಭಾವಿತ ವ್ಯಕ್ತಿ) ಎಂಬ ಕ್ರಿಯಾವಿಶೇಷಣದಿಂದ ಬಂದಿದ್ದು, ಸಜ್ಜನರಾಗಿ, ಸಭ್ಯತೆಯಿಂದ ಎಂದಾಗಿರುತ್ತದೆ."[9]

ನಾವು ಸಮರ್ಪಕವಾದ ರೀತಿಯಲ್ಲಿ ನಡಕೊಳ್ಳುವದನ್ನು ಕ್ರೈಸ್ತೇತರರು ನೋಡುವಾಗ, ನಾವು ಅವರಿಂದ ಮಾನವನ್ನು ಗಳಿಸಿಕೊಳ್ಳುತ್ತೇವೆ. "ಜನರು ಏನು ಯೋಚಿಸುವರೋ ಅದರ ಬಗ್ಗೆ ನನಗೆ ಚಿಂತೆಯಿಲ್ಲ" ಎಂದು ಹೇಳುವ ಒಬ್ಬ ವ್ಯಕ್ತಿಯಲ್ಲಿ ಕ್ರೈಸ್ತೀಯ ಮನೋವೃತ್ತಿ ಇರುವದಿಲ್ಲ. ನಾವು ಬೇರೆಯವರ ಗೌರವವನ್ನು "ಸಂಪಾದಿಸಿಕೊಳ್ಳಲು" ಮತ್ತು ಅವರಲ್ಲಿ ಕೆಲವರನ್ನು ಕ್ರಿಸ್ತನಿಗೋಸ್ಕರ ಸಂಪಾದಿಸಿಕೊಳ್ಳುವದಕ್ಕೋಸ್ಕರ ಅವರೇನಂದುಕೊಳ್ಳು ವರೋ ಎಂಬದರ ಕುರಿತು ಚಿಂತೆಯುಳ್ಳವರಾಗಿರಬೇಕು ಎಂಬದನ್ನು ಖಂಡಿತವಾಗಿಯೂ ಪೌಲನು ತೋರಿಸಿ ಕೊಟ್ಟನು. ಆತನು "ಯಾವ ಯಾವ ವಿಧದಲ್ಲಿಯಾದರೂ ಕೆಲವರನ್ನು ರಕ್ಷಿಸಬೇಕೆಂದು ಯಾರಾರಿಗೆ ಎಂಥವನಾಗಬೇಕೋ ಅಂಥವನಾಗಿ" ಇರುವದಕ್ಕೆ ನಿಷ್ಕರ್ಷಿಸಿಕೊಂಡಿದ್ದನು (1 ಕೊರಿಂಥ 9:22). ಜನರನ್ನು ದೇವರಿಗೋಸ್ಕರ ಪುನಃ ಗೆದ್ದುಕೊಳ್ಳುವದಕ್ಕಿಂತಲೂ ಪ್ರಾಮುಖ್ಯವಾದ ಬೇರೆ ಯಾವದೂ ಕ್ರಿಸ್ತನಿಗಾಗಲಿ ಮತ್ತು ಪರಿಪಕ್ವಗೊಂಡ ಕ್ರೈಸ್ತರಿಗಾಗಲಿ ಇರುವದಿಲ್ಲ. ಸೃಷ್ಟಿಸಲ್ಪಟ್ಟ ಅಧಿಕಾರದ ಮೂಲಕ ಪ್ರತಿಯೊಬ್ಬನೂ ದೇವರಿಗೆ ಸ್ವಂತವಾಗಿರುತ್ತಾನೆ.

ಕ್ರೈಸ್ತರು "ಕೆಲಸ ಮಾಡಬೇಕು" ಎಂಬುದಕ್ಕೆ (ವ. 11) ಇನ್ನೊಂದು ಕಾರಣವೆಂದರೆ ನಮಗೆ **ಯಾವದಕ್ಕೂ ಕೊರತೆಯಿರದ**ವರಾಗುವದೇ ಆಗಿದೆ. (ವ. 11ರ ಮೇಲಿನ ಚರ್ಚೆಯನ್ನು ನೋಡಿರಿ.)

## ಕ್ರಿಸ್ತನ ಎರಡನೆಯ ಬರೋಣದ ಕುರಿತ ಬೋಧನೆ (4:13-18)

**13ಸಹೋದರರೇ, ನಿದ್ರೆಹೋಗುವವರ ಗತಿ ಏನೆಂದು ನೀವು ತಿಳಿಯದೆ ಇದ್ದು
ನಿರೀಕ್ಷೆಯಿಲ್ಲದವರಾದ ಇತರರಂತೆ ದುಃಖಿಸುವದು ನಮ್ಮ ಮನಸ್ಸಿಗೆ ಒಪ್ಪುವದಿಲ್ಲ. 14ಯೇಸು
ಸತ್ತು ಜೀವಿತನಾಗಿ ಎದ್ದನೆಂದು ನಾವು ನಂಬಿದ ಮೇಲೆ ಅದರಂತೆ ಯೇಸುವಿನಲ್ಲಿದ್ದುಕೊಂಡು
ನಿದ್ರೆಹೋಗುವವರನ್ನು ಸಹ ದೇವರು ಆತನೊಡನೆ ಕರೆದುಕೊಂಡು ಬರುವನೆಂದು
ನಂಬಬೇಕಲ್ಲವೇ. 15ನಾವು ಕರ್ತನ ಮಾತಿನ ಆಧಾರದಿಂದ ನಿಮಗೆ ಹೇಳುವದೇನಂದರೆ
ಕರ್ತನು ಪ್ರತ್ಯಕ್ಷನಾಗುವವರೆಗೂ ಜೀವದಿಂದುಳಿದಿರುವ ನಾವು ನಿದ್ರೆಹೋದವರಿಗಿಂತ
ಮುಂದಾಗುವದೇ ಇಲ್ಲ. ಕರ್ತನು ತಾನೇ ಆಜ್ಞಾಘೋಷದೊಡನೆಯೂ 16ಪ್ರಧಾನದೂತನ
ಶಬ್ದದೊಡನೆಯೂ ದೇವರ ತುತೂರಿಧ್ವನಿಯೊಡನೆಯೂ ಆಕಾಶದಿಂದ ಇಳಿದುಬರುವನು;
ಆಗ ಕ್ರಿಸ್ತನಲ್ಲಿರುವ ಸತ್ತವರು ಮೊದಲು ಎದ್ದು ಬರುವರು. 17ಆ ಮೇಲೆ ಜೀವದಿಂದುಳಿದಿರುವ
ನಾವು ಅಂತರಿಕ್ಷದಲ್ಲಿ ಕರ್ತನನ್ನು ಎದುರುಗೊಳ್ಳುವದಕ್ಕಾಗಿ ಅವರ ಸಂಗಡಲೇ
ಮೇಘವಾಹನರಾಗಿ ಫಕ್ಕನೆ ಒಯ್ಯಲ್ಪಡುವವವು; ಹೀಗಾಗಿ ನಾವು ಸದಾಕಾಲವೂ ಕರ್ತನ
ಜೊತೆಯಲ್ಲಿರುವೆವು. 18ಆದಕಾರಣ ಈ ಮಾತುಗಳಿಂದ ಒಬ್ಬರನ್ನೊಬ್ಬರು ಸಂತೈಸಿರಿ.**

**ವಚನ 13.** ಪೌಲನು ಅವರನ್ನು "ಅಜ್ಞಾನಿಗಳು" (KJV) ಎಂದು ಆರೋಪಿಸುತ್ತಿಲ್ಲ. **ತಿಳಿಯದೆ ಇದ್ದು** ಎಂಬುದು ಉತ್ತಮವಾದ ಅನುವಾದವಾಗಿರುತ್ತದೆ. ಆ ಕಾರಣದಿಂದ ಆತನು ಈ ಪತ್ರಿಕೆಯಲ್ಲಿ ಅವರಿಗೆ ಅಗತ್ಯವಾದ ಮಾಹಿತಿಯನ್ನು-ಕ್ರಿಸ್ತನ ಎರಡನೆಯ ಬರೋಣದ ಕುರಿತ ಮಾಹಿತಿ-ಒದಗಿಸುತ್ತಿದ್ದಾನೆ. ಹೆಚ್ಚು ನಿರ್ದಿಷ್ಟವಾಗಿ, ಪೌಲನು ಥೆಸಲೋನಿಕದವರಿಗೆ **ನಿದ್ರೆಹೋಗುವವರ** ವಿಷಯದಲ್ಲಿ ಅರ್ಥಮಾಡಿಸುವದಕ್ಕೆ ಪ್ರಯತ್ನಿಸುತ್ತಿದ್ದಾನೆ. "ನಿದ್ರೆಹೋಗುವದು" ಎಂಬುದು ಮರಣ ಎಂಬುದರ ಸೌಮ್ಯೋಕ್ತಿಯಾಗಿದೆ.

ಅವರ ಪ್ರಿಯರಲ್ಲಿ ಕೆಲವರು ಮರಣಿಸಿದ್ದರು. ಅವರು ಬಂಧುಗಳನ್ನು ಕಳಕೊಂಡದ್ದಕ್ಕಾಗಿ ದುಃಖದಿಂದದ್ದು ಮಾತ್ರವೇ ಆಗಿರಲಿಲ್ಲ, ಆದರೆ ಪೌಲನು ಸೆರಮನೆಯಲ್ಲಿರುವ ವೇಳೆ ಅವರು ಕ್ರಿಸ್ತನ ಎರಡನೆಯ ಬರೋಣದ ಕುರಿತ ಆತನ ಉಪದೇಶದ ಒಂದು ಭಾಗವನ್ನು ಅವರು ಅಪಾರ್ಥಮಾಡಿಕೊಂಡಿದ್ದರು. ಅದು ನಂಬಿಗಸ್ತರೆಲ್ಲರೂ ಕ್ರಿಸ್ತನ ಸಂಗಡ ಶಾಶ್ವತವಾಗಿ ಇರುವದಕ್ಕಾಗಿ ಒಯ್ಯಲ್ಪಡುವಂತಹ ಒಂದು ದೊಡ್ಡ ಹಾಗೂ ಮಹಿಮಾಕರವಾದ ಘಟನೆಯಾಗಿರುವದೆಂದು ಅವರು ಸರಿಯಾಗಿಯೇ ಅರ್ಥಮಾಡಿಕೊಂಡಿದ್ದರು. ಹೇಗೂ, ಇದೆಲ್ಲವೂ ಅವರಲ್ಲಿ ಯಾರೊಬ್ಬರೇ ಆಗಲಿ ಸಾಯುವದಕ್ಕೆ ಮುನ್ನವೇ ಸಂಭವಿಸುವದೆಂದು ಅಪಾರ್ಥ ಮಾಡಿಕೊಂಡಿದ್ದರು. ಬದಲಾಗಿ ಸಂಭವಿಸಿದ್ದೇನೆಂದರೆ, ಪೌಲನು ಅವರನ್ನು ತೊರೆದಿದ್ದನು, ಕ್ರಿಸ್ತನು ಹಿಂದಿರುಗಿ ಬಂದಿರಲಿಲ್ಲ, ಮತ್ತು ಈಗ ಅವರ ಪ್ರಿಯರಲ್ಲಿ ಕೆಲವರು ಮರಣಿಸಿದ್ದರು. ಈ ಪ್ರಿಯರಿಗೆ ಕ್ರಿಸ್ತನ ಮಹಿಮೆಯುಳ್ಳ ಪುನರಾಗಮನದಲ್ಲಿ ಪಾಲುಗಾರರಾಗುವ ಭಾಗ್ಯವು ಕೊಡಲ್ಪಡುವ ದಿಲ್ಲವೇನೋ ಎಂಬದಾಗಿ ಅವರು ಹೆದರಿದ್ದರು. ಆದದರಿಂದ, ತಿಮೊಥೆಯನು ಪೌಲನಿಗೆ ತಂದ ವರದಿಯ ಪ್ರಕಾರವಾಗಿ, ಅವರು ಈ ಪ್ರಿಯರಿಗೋಸ್ಕರ ಬಹಳವಾಗಿ ದುಃಖ ಪಡುತ್ತಿದ್ದರು (3:6).

ಪೌಲನು ಅವರಿಗೆ **ದುಃಖಿಸಬೇಡಿರಿ** ಎಂದು ಹೇಳಿದನು. "ದುಃಖಿಸು" ಎಂಬುದು λυπῆσθε (*lupēsthe*) ಗ್ರೀಕ್ ಪದದಿಂದ ಬಂದಿದ್ದು, ಅದು λυπέω (*lupeō*) ಎಂಬುದರ ಸಂಭಾವನಾ ರೂಪದ ಪದವಾಗಿರುತ್ತದೆ, ಇದು "ನಿರಂತರವಾದ ದುಃಖಿಸುವಿಕೆ"ಯನ್ನು ಸೂಚಿಸುವ ಒಂದು ರೂಪವಾಗಿರುತ್ತದೆ. ಆ ವಿಧವಾದ ದುಃಖಿಸುವಿಕೆಯು **ನಿರೀಕ್ಷೆಯಿಲ್ಲದ ಇತತರಿಗೆ** ಸೂಕ್ತವಾಗಿರುತ್ತದೆ. ಈ ಅವಿಶ್ವಾಸಿಗಳಿಗೆ, ಅಥವಾ "ಹೊರಗಿನವರಿಗೆ" (4:12) ಪಾಪದಿಂದ ಸಿಕ್ಕುವ ಅಂತಿಮವಾದ ಬಿಡುಗಡೆಯ "ನಿರೀಕ್ಷೆಯಿರಲಿಲ್ಲ" ಮತ್ತು ಆ ಕಾರಣದಿಂದ ನಿತ್ಯಜೀವದ "ನಿರೀಕ್ಷೆಯಿಲ್ಲದವರು" ಆಗಿದ್ದರು (ರೋಮಾ 8:21; ಎಫೆಸ 2:12 ರೊಂದಿಗೆ ಹೋಲಿಸಿರಿ). ಪೌಲನು ಈ ಹೇಳಿಕೆಯ ಮೂಲಕ ಎಲ್ಲಾ ದುಃಖಿಸುವಿಕೆ ಅಥವಾ ಶೋಕ ಪಡುವಿಕೆಯನ್ನು ನಿಷೇಧಿಸಲಿಲ್ಲ. ಹೇಗೂ, ಆತನು ಸೂಚಿಸಿದ್ದೇನೆಂದರೆ, ವಿಶ್ವಾಸಿಯು "ನಿರೀಕ್ಷೆಯಿಲ್ಲದಿರುವಿಕೆಯ" ದುಃಖದಿಂದ ಕುಗ್ಗಿ ಹೋಗುವದು ತಾರ್ಕಿಕವಾದದ್ದಲ್ಲ ಎಂಬದೆ. ಅಂಥ ದುಃಖವು ಅವಿಶ್ವಾಸಿಗಳಿಗೆ ಮಾತ್ರವೇ ತಾರ್ಕಿಕವಾಗಿ ಕಾಣಿಸುತ್ತದೆ.

**ವಚನ 14. ಯೇಸು ಮತ್ತು ಜೀವಿತನಾಗಿ ಎದ್ದನೆಂದು ನಾವು ನಂಬಿದ ಮೇಲೆ** ಎಂಬುದು ಯೇಸುವಿನ ಮರಣದ ವಿಷಯದಲ್ಲಾಗಲಿ ಅಥವಾ ಪುನರುತ್ಥಾನದಲ್ಲಾಗಲಿ ಸಂಶಯವನ್ನು

ವ್ಯಕ್ತಪಡಿಸುವದಿಲ್ಲ, ಯಾಕೆಂದರೆ ಇಲ್ಲಿ ಇರುವ ಪ್ರಕಾರ, ಕೆಲವು ಸಾರಿ "ದಾದರೆ" ಎಂಬುದು "ಆದ್ದರಿಂದ" ಎಂಬ ಅರ್ಥವನ್ನು ಕೊಡುವದಾಗಿರುತ್ತದೆ. ಸಾರಭೂತವಾಗಿ, ನಾವು ಕ್ರಿಸ್ತನ ಮರಣ ಹಾಗೂ ಪುನರುತ್ಥಾನಗಳನ್ನು ನಂಬುತ್ತೇವಾದ್ದರಿಂದ, ಈಗ **ಯೇಸುವಿನಲ್ಲಿದ್ದುಕೊಂಡು ನಿದ್ರೆಹೋಗಿರುವವರ** ಪುನರುತ್ಥಾನದಲ್ಲಿ ಸಹ ನಂಬುತ್ತೇವೆ ಎಂದು ಪೌಲನು ಹೇಳುತ್ತಿದ್ದಾನೆ. ಯಾಕೆಂದರೆ ಆತನು ಬೇರೊಂದು ಕಡೆಯಲ್ಲಿ ಕ್ರಿಸ್ತನು ಮಾತ್ರವೇ ಪುನರುತ್ಥಾನವಾದರಲ್ಲಿ "ಪ್ರಥಮಫಲ" ಎಂದು ಹೇಳಿದನು (1 ಕೊರಿಂಥ 15:23). "ಪ್ರಥಮಫಲ" ಎಂಬ ಪದವು ಬೇರೆಯವರು ಸಹ, ಅಂದರೆ "ಕ್ರಿಸ್ತನಲ್ಲಿರುವವರು" ಸಹ ಪುನರುತ್ಥಾನಗೊಳ್ಳುವರು (1 ಕೊರಿಂಥ 15:23).[10]

ಕ್ರಿಸ್ತನು ಪುನರುತ್ಥಾನಗೊಂಡ ರೀತಿಯಲ್ಲಿ ಪುನರುತ್ಥಾನಗೊಳಿಸಲ್ಪಡುವ ಕ್ರೈಸ್ತರು **ದೇವರ** ಕಾರ್ಯಕ್ಕೊಳಗಾಗುವರು, ಆತನು [ಈ ಪುನರುತ್ಥಾನಗೊಂಡ ಕ್ರೈಸ್ತರನ್ನು] **ಆತನೊಡನೆ ಕರೆದುಕೊಂಡು ಬರುವನು.** ಕೆಲವರು ಹೀಗೆ ಕೇಳಬಹುದು, "ಆತನು ಎರಡನೆಯ ಬರೋಣದಲ್ಲಿ *ಭೂಮಿಗೆ ಹಿಂದಿರುಗಿ ಇಳಿದು ಬರುವಾಗ* ಅವರು ಆತನ ಸಂಗಡ ಇರುವರೋ?" ಅಥವಾ "ಆತನು *ಪರಲೋಕಕ್ಕೆ ಹಿಂದಿರುಗಿ ಹೋಗುವಾಗ* ಅವರು ಆತನ ಸಂಗಡ ಇರುವರೋ?" Morris ಮುಕ್ತಾಯಕ್ಕೆ ಬಂದಿದ್ದೇನೆಂದರೆ ಕ್ರಿಸ್ತನು ಭೂಮಿಗೆ ಇಳಿದು ಬರುವಾಗ ಕ್ರೈಸ್ತರು ಆತನೊಂದಿಗಿರುವರು, ಇಲ್ಲವಾದಲ್ಲಿ ಅವರು *parousia*ವನ್ನು ತಪ್ಪಿಸಿಕೊಳ್ಳುವರು ಎಂಬದಾಗಿ ಆತನು ವಾದಿಸುತ್ತಾನೆ.[11]

ಪೌಲನು ಈ ಪ್ರಶ್ನೆಗೆ 1 ಕೊರಿಂಥ 15:22-24ರಲ್ಲಿ ಉತ್ತರಿಸುತ್ತಾನೆ: "ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು. ಆದರೆ ಪ್ರತಿಯೊಬ್ಬನು ತನ್ನ ತನ್ನ ತರಗತಿಯಲ್ಲಿರುವನು. ಕ್ರಿಸ್ತನು ಪ್ರಥಮಫಲ; ತರುವಾಯ ಕ್ರಿಸ್ತನ ಪ್ರತ್ಯಕ್ಷತೆಯಲ್ಲಿ ಆತನವರು ಎದ್ದುಬರುವರು. ಆ ಮೇಲೆ ಆತನು . . . ತಂದೆಯಾಗಿರುವ ದೇವರಿಗೆ ರಾಜ್ಯವನ್ನು ಒಪ್ಪಿಸುವನು."

ಆತನೊಂದಿಗೆ ಎಬ್ಬಿಸಲ್ಪಟ್ಟು "ಆತನೊಂದಿಗೆ" *ಪರಲೋಕಕ್ಕೆ ಹಿಂದಿರುಗಿ ಹೋಗುವದು* *parousia*ದಲ್ಲಿ ಪಾಲುಗಾರರಾಗುವಿಕೆ ಆಗಿದೆ. ಒಬ್ಬನು ಯಾವಾಗ *parousia* ಎಂಬುದು ಇನ್ನು ಮೇಲೆ ಕೇವಲ "ಬರುವದು" ಅಥವಾ "ಆಗಮನ" ಮಾತ್ರವೇ ಆಗಿರುವದಿಲ್ಲ, ಆದರೆ ಆ ಮಹಾ "ದಿನ"ವು ಸಂಭವಿಸುವ ಪುನರುತ್ಥಾನ, ಪರಲೋಕಕ್ಕೆ ಹಿಂದಿರುಗುವಿಕೆ, ಮತ್ತು ಇತ್ಯಾದಿ ಘಟನೆಗಳ ಸಮೂಹವನ್ನೊಳಗೊಂಡಿರುತ್ತದೆ ಎಂಬುದನ್ನು ಗ್ರಹಿಸಿಕೊಂಡಾಗ ಈ ನಿಲುವನ್ನು ಅರ್ಥಮಾಡಿಕೊಳ್ಳುವದು ಸಾಧ್ಯವಾಗುತ್ತದೆ (ನೋಡಿರಿ 5:2). ವಾಸ್ತವಾಂಶದಲ್ಲಿ, *parousia* ಎಂದರೆ ಪುನರುತ್ಥಾನ ಮತ್ತು ನ್ಯಾಯತೀರ್ಪಿನಂತಹ ಕೆಲವೊಂದು ನಂತರ ಸಂಭವಿಸುವ ಪರಿಣಾಮಗಳ "ಪ್ರಸನ್ನತೆ" ಎಂದರ್ಥವಾಗಿರುತ್ತದೆ.[12]

1 ಕೊರಿಂಥವರಿಗೆ ಪತ್ರಿಕೆಯಲ್ಲಿ ಕ್ರಿಸ್ತನವರು "ಆತನ ಪ್ರತ್ಯಕ್ಷತೆಯಲ್ಲಿ ಎದ್ದುಬರುವರು" ಎಂದು ಪೌಲನು ಬರೆಯುತ್ತಾನೆ (1 ಕೊರಿಂಥ 15:22, 23). ಯಾರೊಬ್ಬರೂ ಸಹ "ಆತನೊಂದಿಗೆ" ಭೂಮಿಗೆ ಹಿಂದಿರುಗಿ ಬರುವದಕ್ಕೋಸ್ಕರ "ಆತನ ಪ್ರತ್ಯಕ್ಷತೆಗೆ" ಮುಂಚೆ "ಎದ್ದುಬರುವದಿಲ್ಲ." ಆ ಪ್ರತ್ಯಕ್ಷತೆಯ ನಂತರ ತಕ್ಷಣದಲ್ಲೇ ಎಲ್ಲವುಗಳ "ಸಮಾಪ್ತಿ" ಆಗುವದು, ಆಗ ಕ್ರಿಸ್ತನು ತಂದೆಗೆ ರಾಜ್ಯವನ್ನು ಒಪ್ಪಿಸಿ ಬಿಡುವನು. ಇದೆಲ್ಲವೂ ಸಹ

ಹೇಳುವದೇನೆಂದರೆ ಪುನರುತ್ಥಾನಗೊಂಡ ದೇವಜನರು ಎರಡನೆಯ ಬರೋಣದ ಘಟನೆಯ ಒಂದು ಭಾಗವಾಗಿ ಕ್ರಿಸ್ತನ “ಸಂಗಡ” *ತಿರಿಗಿ ಪರಲೋಕದೊಳಗೆ ಕರಕೊಂಡು* ಬರಲ್ಪಡವರು. ಈ ಮುಕ್ತಾಯ ನಿರ್ಧಾರಕ್ಕೆ ಬರಲು ಅನುಕೂಲವಾಗುವದೇನೆಂದರೆ “ಎತ್ತಲ್ಪಡುವಿಕೆವಾದಿ” ನಿಲುವಿನಲ್ಲಿ ಅಗತ್ಯವಿರುವಂತೆ, ಈ ವಾಕ್ಯಭಾಗದಲ್ಲಿರುವ ವಿರುದ್ಧತೆಯು ಬದುಕಿರುವ ಅವಿಶ್ವಾಸಿಗಳು ಮತ್ತು ವಿಶ್ವಾಸಿಗಳ ನಡುವಿನದ್ದಾಗಿರುವದಿಲ್ಲ. ಬದಲಾಗಿ, ಅದು ಕ್ರಿಸ್ತನ ಬರೋಣಕ್ಕೆ ಮುಂಚೆ ಮರಣಿಸಿದ ವಿಶ್ವಾಸಿಗಳು (“ಯೇಸುವಿನಲ್ಲಿದ್ದುಕೊಂಡು ನಿದ್ರೆಹೋದವರು”) ಮತ್ತು ಥೆಸಲೋನಿಕದಲ್ಲಿ ಇನ್ನೂ ಬದುಕಿದ್ದಂಥ ವಿಶ್ವಾಸಿಗಳ ನಡುವಿನದ್ದಾಗಿತ್ತು.

<table>
<tr><th colspan="5">1 ಥೆಸಲೋನಿಕ 4:14—ದೊಡ್ಡ ಪ್ರಶ್ನೆಯೇನೆಂದರೆ: “ಆತನೊಡನೆ” ಯಾವಾಗ?</th></tr>
<tr><td>↓<br>↓<br>↓<br>↓<br>↓</td><td>A) Rapturists (ಎತ್ತಲ್ಪಡುವಿಕೆವಾದಿಗಳು)—ಒಂದು ಊಹಿಸಲಾಗಿರುವ ರಹಸ್ಯ (ಮುಂಚೆ) ಎತ್ತಲ್ಪಡುವಿಕೆಯ ನಂತರ “ಆತನೊಡನೆ” ಭೂಮಿಗೆ ಹಿಂದಿರುಗುವದು.</td><td>ಅಥವಾ</td><td>↑<br>↑<br>↑<br>↑<br>↑</td><td>B) Edwards (ಮತ್ತು ಇತರು)—ಆತನು ಎರಡನೆಯ ಬರೋಣದಲ್ಲಿ ಬಂದು ಅವರನ್ನು ಪುನರುತ್ಥಾನಗೊಳಿಸಿದ ಮೇಲೆ “ಆತನೊಡನೆ” ಪರಲೋಕಕ್ಕೆ ಹಿಂದಿರುಗಿ ಬರುವದು.</td></tr>
<tr><td colspan="5">ಹಾಗಾದರೆ ಇದು 2 ಕೊರಿಂಥ 4:14ಕ್ಕೆ ಸಮಾನವಾಗುತ್ತದೆ, “ಕರ್ತನಾದ ಯೇಸುವನ್ನು ಎಬ್ಬಿಸಿದಾತನು ನಮ್ಮನ್ನು ಸಹ ಯೇಸುವಿನೊಂದಿಗೆ ಎಬ್ಬಿಸಿ ನಿಮ್ಮ ಜೊತೆಯಲ್ಲಿ ತನ್ನ ಮುಂದೆ ನಿಲ್ಲಿಸುವನೆಂದು ತಿಳಿದವರಾಗಿದ್ದೇವೆ” (ಒತ್ತಿ ಹೇಳಿದ್ದು ನನ್ನದು).<br><br>ಗಮನಿಸಿರಿ: “ಯೇಸುವಿನೊಂದಿಗೆ” ಆದರೆ<br>1) ಏಕ ಕಾಲದಲ್ಲಿ ಅಲ್ಲ (“ಆತನು” ಭೂತಕಾಲ/“ನಾವು” ಭವಿಷ್ಯತ್ಕಾಲ);<br>ಬದಲಾಗಿ,<br>2) ಒಂದೇ ಸ್ಥಿತಿಯೊಳಗೆ (=ಪುನರುತ್ಥಾನಗೊಂಡವರು).<br><br>ಅಲ್ಲದೆ 1 ಕೊರಿಂಥ. 6:14 ರೊಂದಿಗೆ ಸಹ ಹೋಲಿಸಿರಿ.</td></tr>
</table>

*ಈ ವಚನದ ವಿಷಯದಲ್ಲಿ*, J. W. McGarvey ಮತ್ತು Philip Y. Pendleton *ಹೀಗೆ ಬರೆದರು*:

> “ಆತನೊಂದಿಗೆ” ಎಂಬುದು ಇಲ್ಲಿ ಯೇಸುವು ದೇಹದಿಂದ ಬೇರ್ಪಟ್ಟ ಆತ್ಮಗಳನ್ನು *ಪರಲೋಕದಿಂದ* ಕರೆದು ತಂದು ಪುನರುತ್ಥಾನಗೊಳಿಸುವನು ಎಂದರ್ಥವಾಗುವದಿಲ್ಲ, ಆದರೆ ಯೇಸುವನ್ನು *ಸಮಾಧಿಯಿಂದ* ಎಬ್ಬಿಸಿದಾತನಾದ ದೇವರು, ಯೇಸುವಿನ ಸಂಬಂಧದಲ್ಲಿ, ಯೇಸುವಿನೊಂದಿಗೆ ಆತ್ಮೀಕವಾಗಿ ಐಕ್ಯಗೊಂಡವರಾಗಿ ಸಮಾಧಿಯನ್ನು ಪ್ರವೇಶಿಸಿದ ಎಲ್ಲರನ್ನು ಸಹ, *ಸಮಾಧಿಯಿಂದ* ಎಬ್ಬಿಸುವನು ಎಂದರ್ಥವಾಗಿರುತ್ತದೆ (ಒತ್ತಿ ಹೇಳಿದ್ದು ನನ್ನದು).[13]

David J. Williams ಸಹ ಹೀಗೆ ಹೇಳಿದನು, "ಹೀಗೆ ದೇವಜನರ ಪುನರುತ್ಥಾನವು ಒಂದು ಪ್ರತ್ಯೇಕವಾಗಿ ಸಂಭವಿಸುವ ಘಟನೆಯಲ್ಲ, ಆದರೆ ಅವರು ಯೇಸುವಿನ ಪುನರುತ್ಥಾನದಲ್ಲಿ ಭಾಗಿಯಾಗುವರು: ಅವರು 'ಯೇಸುವಿನೊಂದಿಗೆ' ಎಬ್ಬಿಸಲ್ಪಡುವರು."[14] ಈ ವಿಧದಲ್ಲಿ ಅರ್ಥನಿರೂಪಿಸಲ್ಪಡುವದಾದರೆ, ಈ ವಾಕ್ಯಭಾಗವು 2 ಕೊರಿಂಥ 4:14ಕ್ಕೆ ಸಮಾನವಾಗುತ್ತದೆ: "ಕರ್ತನಾದ ಯೇಸುವನ್ನು ಎಬ್ಬಿಸಿದಾತನು ನಮ್ಮನ್ನು ಸಹ *ಯೇಸುನೊಂದಿಗೆ* ಎಬ್ಬಿಸಿ ನಿಮ್ಮ ಜೊತೆಯಲ್ಲಿ ಆತನ ಮುಂದೆ ನಿಲ್ಲಿಸುವನೆಂದು ತಿಳಿದವರಾಗಿದ್ದೇವೆ."

ಆದದರಿಂದ, 14ನೇ ವಚನವು ಲೋಕಾಂತ್ಯಕ್ಕೆ ಮುಂಚೆ ಕೆಲವು ನಂಬಿಗಸ್ತರಾದ ಕ್ರೈಸ್ತರ ಒಂದು ರಹಸ್ಯ ಎತ್ತಲ್ಪಡುವಿಕೆಯನ್ನು (ಒಯ್ಯುವದು ಅಥವಾ ಮೇಲಕ್ಕೆತ್ತಿಕೊಳ್ಳುವದು) ಸೂಚಿಸುವದಿಲ್ಲ, ಆದರೆ ಅದು ಲೋಕಾಂತ್ಯದಲ್ಲಿ ಬಹಿರಂಗವಾಗಿಯೂ ಗೋಚರವಾಗಿಯೂ ಎಲ್ಲಾ ಕ್ರೈಸ್ತರು ಎತ್ತಲ್ಪಡುವ ಒಂದು ಘಟನೆಯಾಗುವದು (ನೋಡಿರಿ ವ. 17).

ವಚನದ ಅಂತ್ಯದಲ್ಲಿರುವ, **ಯೇಸುವಿನಲ್ಲಿದ್ದುಕೊಂಡು** ಎಂಬ ಪದಗುಚ್ಛಕ್ಕೆ ಸಂಬಂಧಿಸಿದಂತೆ, ನಾವು ಯೇಸುವಿ"ನಲ್ಲಿ" ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದೇವೆಂಬುದನ್ನು ಮತ್ತೊಂದಾವರ್ತಿ ಗಮನಕ್ಕೆ ತಂದುಕೊಳ್ಳುವದು ಉತ್ತಮವಾದದ್ದು (ರೋಮಾ 6:3, 4).

**ವಚನ 15. ನಾವು ಕರ್ತನ ಮಾತಿನ ಆಧಾರದಿಂದ ನಿಮಗೆ ಹೇಳುವದೇನಂದರೆ** ಎಂಬುದು ಭೂಮಿಯ ಮೇಲಿರುವ ವೇಳೆ ಯೇಸು ವೈಯಕ್ತಿಕವಾಗಿ ನುಡಿದ ಒಂದು ಸಂಗತಿಯನ್ನು ಸೂಚಿಸುವದಾಗಿರಬಹುದು (1 ಕೊರಿಂಥ 7:10ರೊಂದಿಗೆ ಹೋಲಿಸಿರಿ) ಅಥವಾ, ಹೆಚ್ಚು ಸಂಭಾವ್ಯವಾಗಿ, ಇಲ್ಲಿ ಅದು ಆತನು ತನ್ನ ಪ್ರೇರಿತ ಅಪೊಸ್ತಲರ ಸಂಗಡ ಪರೋಕ್ಷವಾಗಿ ಮಾತಾಡಿದ್ದನ್ನು ಸೂಚಿಸುತ್ತಿರಬಹುದಾಗಿದೆ (2:13ರ ಮೇಲಿನ ಚರ್ಚೆಯನ್ನು ನೋಡಿರಿ). ಇದು ಸುವಾರ್ತೆಗಳಲ್ಲಿ ದಾಖಲಿಸಲ್ಪಡದ ಯೇಸುವಿನ ಯಾವದೋ ಒಂದು ಹೇಳಿಕೆಯನ್ನು ಸೂಚಿಸುತ್ತಿರಬಹುದಾಗಿದೆ ಎಂದು Morris ಮತ್ತು ಇತರರು ಅಭಿಪ್ರಾಯ ಪಡುತ್ತಾರೆ, ಉದಾಹರಣೆಗೆ ಅಪೊಸ್ತಲರ ಕೃತ್ಯಗಳು 20:35.[15]

**ಕರ್ತನು ಪ್ರತ್ಯಕ್ಷನಾಗುವವರೆಗೂ** [*parousia*] ಎಂಬುದು, ಮೇಲ್ಗಡೆಯಲ್ಲಿ ಹೇಳಿದ ಪ್ರಕಾರ, ಅದು ಆತನ ಎರಡನೆಯ ಬರೋಣವನ್ನು ಸೂಚಿಸುತ್ತದೆ (ವಚನಗಳು 16, 17; 1 ಕೊರಿಂಥ 15:22-24). ಪೌಲನು ಚಿಂತಿತರಾಗಿದ್ದ ಥೆಸಲೋನಿಕದ ವಿಶ್ವಾಸಿಗಳಿಗೆ ಕ್ರಿಸ್ತನ "ಬರೋಣ"ದ ತನಕ **ಜೀವದಿಂದಿರುವವರು** ವಿಶ್ವಾಸಿಗಳಾಗಿದ್ದು "ನಿದ್ರೆಹೋಗಿರುವ," ಅಥವಾ ಮರಣಿಸಿರುವ ಅವರ ಪ್ರಿಯರಿಗಿಂತ **ಮುಂದಾಗುವದೇ ಇಲ್ಲ** ಎಂಬ ಭರವಸೆಯನ್ನು ಪೌಲನು ನೀಡುತ್ತಾನೆ. "ಮುಂದಾಗುವ" ಎಂಬುದು "[φθάνω] *phthanō* ಎಂಬುದರ ದ್ವಿತಿಯ ಅನಿಶ್ಚಿತ ಭೂತಕಾಲ ಸಕ್ರಿಯ ಸಂಭಾವನಾರ್ಥಕವಾಗಿದ್ದು" ಇದರ ಅರ್ಥವು, "ಮುಂಚೆ ಬರುವದು, ಎದುರುನೋಡುದು."[16]

"ನಾವು" ಎಂಬುದನ್ನು ಬಳಸುವ ಮೂಲಕ, ಕ್ರಿಸ್ತನ ಎರಡನೆಯ ಬರೋಣದ ವೇಳೆ ತಾನು ಇನ್ನೂ ಜೀವಂತವಾಗಿರುವೆ ಎಂದು ಭಾವಿಸಿದ್ದನು ಎಂಬುದು ಪೌಲನ ಮಾತಿನ

ಅರ್ಥವೋ? ಅದು ಹಾಗಿರಲಿಲ್ಲವೆಂದು ತೋರುತ್ತದೆ. "*parousia*ದ ವೇಳೆ ತಾನು ಬದುಕಿರುವನೆಂದು ನಿರೀಕ್ಷಿಸಿದ್ದನು ಎಂಬದು ಆತನ ಮಾತುಗಳ ಅರ್ಥವಾಗಿರಬೇಕೆಂದು ವಾದಿಸುವ ವೇದ ಪಂಡಿತರು ಆತನ ಮಾತುಗಳನ್ನು ತಪ್ಪಾಗಿ ಅರ್ಥೈಸುವವರಾಗಿದದಾರೆ"[17] ಎಂದು I. Howard Marshall ಸರಿಯಾಗಿಯೇ ಹೇಳಿರುತ್ತಾನೆ. ಬೇರೊಂದು ಕಡೆಯಲ್ಲಿ ದೇವರು "ಎಬ್ಬಿಸುವವರಲ್ಲಿ" ಪೌಲನು ತನ್ನನ್ನ ಸಹ ಸೇರ್ಪಡೆಗೊಳಿಸಿ ಹೇಳಿದ್ದಾನೆ (1 ಕೊರಿಂಥ 6:14; ನೋಡಿರಿ 2 ಕೊರಿಂಥ 4:14). ಹೇಗೂ, ಈ ಎರಡೂ ಸಂದರ್ಭಗಳಲ್ಲಿ ಆತನು ಬಹುಶಃ ತಾನು ಯಾರ ಕುರಿತು ಮಾತಾಡುತ್ತಿದ್ದಾನೋ ಆ ಗುಂಪಿನೊಂದಿಗೆ ಕೇವಲ ತನ್ನನ್ನು ಗುರುತಿಸಿಕೊಳ್ಳುತ್ತಾನೆಂದು ತೋರುತ್ತದೆ, ಯಾಕೆಂದರೆ ಬೇರೊಂದು ವಾಕ್ಯಭಾಗದಲ್ಲಿ ತಾನು ಕ್ರಿಸ್ತನ ಬರೋಣದ ವೇಳೆ "ಎಚ್ಚರವಾಗಿರುತ್ತಾನೋ ಅಥವಾ ನಿದ್ರೆಯಲ್ಲಿರುತ್ತಾನೋ" ಎಂಬುದನ್ನು ಖಚಿತವಾಗಿ ತಿಳಿದವನಂತೆ ಕಾಣಿಸುವದಿಲ್ಲ (1 ಥೆಸಲೋನಿಕ 5:1, 2, 10). 15ನೇ ವಚನದಲ್ಲಿ ಪೌಲನು ಮುಖ್ಯವಾಗಿ ತಿಳಿಸಲಿಚ್ಛಿಸುವ ಅಂಶವೆಂದರೆ ಕ್ರಿಸ್ತನ ಬರೋಣವು ಯಾವಾಗ ಇರುತ್ತದೆ ಎಂಬದರ ಕುರಿತಲ್ಲ; ಬದಲಾಗಿ, ಆತನು ಯಾವಾಗ ಬಂದರೂ ಸರಿಯೇ, ಇನ್ನೂ ಜೀವಿಸುತ್ತಿರುವಂಥ ಕ್ರೈಸ್ತರು ಈಗಾಗಲೇ ಮರಣಿಸಿರುವವರಿಗಿಂತ ಮೇಲ್ಮೆ ಹೊಂದಿರುವದಿಲ್ಲ ಎಂಬದೆ.[18]

**ವಚನ 16.** ಜೀವಿಸುತ್ತಿರುವ ಕ್ರೈಸ್ತರು ಏಕೆ ಈಗಾಗಲೇ ಗತಿಸಿ ಹೋಗಿರುವವರಿಗಿಂತ ಮೇಲ್ಮೆಯನ್ನು ಹೊಂದಿರುವದಿಲ್ಲ? ಏಕೆಂದರೆ ಕರ್ತನು ಬರುವಾಗ, ಆತನು **ಕ್ರಿಸ್ತನಲ್ಲಿರುವ ಸತ್ತವರನ್ನು ಮೊದಲು ಎದ್ದುಬರುವಂತೆ** ಮಾಡುವನು. ಮರಣಿಸಿರುವಂಥ ಕ್ರೈಸ್ತರು **ಕರ್ತನು ತಾನೇ . . . ಆಕಾಶದಿಂದ ಇಳಿದು ಬರುವಾಗ** ತಕ್ಷಣವೇ ಎಬ್ಬಿಸಲ್ಪಡುವರು.

ಆತನ ಬರೋಣದ ಸೂಚನೆಯು ಒಂದು **ಆಜ್ಞಾಘೋಷದೊಡನೆ** (κέλευσμα, *keleusma*), ಅಥವಾ "ಒಂದು ಗಟ್ಟಿಯಾದ ಶಬ್ದದ ಆಜ್ಞೆ" (NIV) ಆಗಿರುವದು.[19] ಈ "ಘೋಷವು" ಬಹುಶಃ ಸಮಾಧಿಯಲ್ಲಿರುವವರಿಗೆ ಕ್ರಿಸ್ತನು ಕೊಡುವ ಕರೆ ಆಗಿರಬಹುದು (ಯೋಹಾನ 5:28ರೊಂದಿಗೆ ಹೋಲಿಸಿರಿ). ಅಷ್ಟುಮಾತ್ರವಲ್ಲದೆ, ಮನುಷ್ಯರು **ಪ್ರಧಾನದೂತನ ಶಬ್ದವನ್ನು** ಸಹ ಕೇಳುವರು. ಈ ದೇವದೂತನು ಬಹುಶಃ ಪ್ರಸಿದ್ಧವಾಗಿ ನಂಬಲ್ಪಟ್ಟಿರುವ ಪ್ರಕಾರ ಗಬ್ರಿಯೇಲನಾಗಿರುವದಿಲ್ಲ, ಆದರೆ ಮಿಕಾಯೇಲನಾಗಿರುವನು, ಆತನೊಬ್ಬನನ್ನೆ ಬೈಬಲ್ "ಪ್ರಧಾನದೂತ" ಎಂದು ಕರೆಯುತ್ತದೆ (ಯೂದನು 9; ಪ್ರಕಟನೆ 12:1-9). ಪ್ರಧಾನದೂತನ ಶಬ್ದವು ಬಹುಶಃ "ಆದುಕೊಂಡವರನ್ನು ಒಟ್ಟುಗೂಡಿಸುವಂತೆ" ಬೇರೆ ದೂತರಿಗೆ ಅಪ್ಪಣೆ ಕೊಡುವಿಕೆಯಾಗಿರಬಹುದು (ಮತ್ತಾಯ 24:31). ಪ್ರಧಾನದೂತನ ಶಬ್ದವಾಗುವ ಅದೇ ಕ್ಷಣದಲ್ಲಿ, **ದೇವರ ತುತೂರಿಯುಧ್ವನಿ**ಯು ಕೇಳಿಸಲ್ಪಡುವದು. ಈ "ತುತೂರಿ" ಯು 1 ಕೊರಿಂಥ 15:52ರಲ್ಲಿ "ಕಡೇ ತುತೂರಿ" ಎಂದು ಕರೆಯಲ್ಪಟ್ಟಿದೆ. ಇದು "ದೇವರ" ತುತೂರಿಯಾಗಿದೆ ಯಾಕೆಂದರೆ ಅದು "ದೇವರ" ಅಥವಾ ದೇವತ್ವವುಳ್ಳವನಾದ ಕ್ರಿಸ್ತನ ಬರುವಿಕೆಯನ್ನು ಘೋಷಿಸುವದಾಗಿರುತ್ತದೆ. ಸಿನಾಯ್ ಪರ್ವತದಲ್ಲಿ ದೇವರನ್ನು ಸಂಧಿಸುವಂತೆ ಇಸ್ರಾಯೇಲ್ಯರನ್ನು ಕರೆದದ್ದು ಇದೇ "ತುತೂರಿ" ಆಗಿರುತ್ತದೆ (ವಿಮೋಚನಕಾಂಡ 19:17-19). ಮಾನವರ ಇತಿಹಾಸದಲ್ಲಿ ಮನುಷ್ಯರನ್ನು

"ಎಚ್ಚರಗೊಳಿಸುವದಕ್ಕೆ" ತುತೂರಿಯು ಆಗಾಗ್ಗೆ ಬಳಸಲ್ಪಟ್ಟಿರುತ್ತದೆ. ಇಲ್ಲಿ, ಇದು ವಿಶ್ವಾಸಿಗಳನ್ನು ಮರಣವೆಂಬ "ನಿದ್ರೆಯಿಂದ" ಎಚ್ಚರಗೊಳಿಸುವದಕ್ಕಾಗಿ ಆಗಿರುತ್ತದೆ.

ಈ ವಾಕ್ಯಭಾಗದಲ್ಲಿ, ಪೌಲನು ಕೇವಲ ವಿಧೇಯರ ಪುನರುತ್ಥಾನದ ಕುರಿತು ಮಾತ್ರವೇ ಚರ್ಚಿಸಿದನು ಯಾಕೆಂದರೆ ಅದನ್ನಷ್ಟೆ ತಿಳಿಸುವದು ಆತನ ಉದ್ದೇಶವಾಗಿತ್ತು. ಹೇಗೂ, ಕ್ರಿಸ್ತನು ಮತ್ತು ಪೌಲ ಇಬ್ಬರೂ ಶಾಸ್ತ್ರದಲ್ಲಿ ಬೇರೆ ಕಡೆಯಲ್ಲಿ ಕಲಿಸಿದ ಪ್ರಕಾರವಾಗಿ, ಅವಿಧೇಯರು ಸಹ ಅದೇ ಸಮಯದಲ್ಲಿಯೇ ಎಬ್ಬಿಸಲ್ಪಡುವರೆಂಬುದು ಸ್ಪಷ್ಟವಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 24:15; ಯೋಹಾನ 5:28, 29). ಥೆಸಲೋನಿಕದವರಿಗಾಗಿ ಪ್ರಮುಖ ಪಾಠವು ಏನಾಗಿತ್ತೆಂದರೆ ದೇವರು ಅವರ ಸತ್ತವರನ್ನು ನಿರ್ಲಕ್ಷಿಸುವದಿಲ್ಲ ಎಂಬದೆ. ಅವರು "ಮೊದಲು" ಎಬ್ಬಿಸಲ್ಪಡತಕ್ಕವರಾಗಿದ್ದಾರೆ.

**ವಚನ 17.** ಕರ್ತನು ಹಿಂದಿರುಗಿ ಬರುವ ವೇಳೆ ಇನ್ನೂ ಜೀವಿಸುತ್ತಿರುವ ವಿಧೇಯತೆಯುಳ್ಳವರಿಗೆ ಸಂಬಂಧಪಟ್ಟಂತೆ, ಜೀವದಿಂದಿರುವ ಅವರು **ಅಂತರಿಕ್ಷದಲ್ಲಿ . . . ಅವರ ಸಂಗಡಲೇ ಮೇಘವಾಹನರಾಗಿ ಫಕ್ಕನೆ ಒಯ್ಯಲ್ಪಡುವರು** [ἁρπάζω, *harpazō*] ಎಂಬದಾಗಿ ಪೌಲನು ಹೇಳಿದನು. ಯಾರೊಂದಿಗೆ ಜೀವದಿಂದಿರುವವರು ಫಕ್ಕನೆ ಒಯ್ಯಲ್ಪಡುವರೋ "ಅವರು" ಎಂಬುವರು, 14ನೇ ವಚನದ ಚರ್ಚೆಯಲ್ಲಿ ತೋರಿಸಲ್ಪಟ್ಟ ಪ್ರಕಾರ, ಅವರ ಪ್ರಿಯರಾಗಿರುತ್ತಾರೆ, ಇವರು ಕ್ರಿಸ್ತನ ಎರಡನೆಯ ಬರೋಣದಲ್ಲಿ ತಕ್ಷಣವೇ ಪುನರುತ್ಥಾನಗೊಳ್ಳುವರು. "ಅವರು" ಮತ್ತು "ನಾವು" ಇಬ್ಬರೂ **ಅಂತರಿಕ್ಷದಲ್ಲಿ ಕರ್ತನನ್ನು ಎದುರುಗೊಳ್ಳುವದಕ್ಕಾಗಿ** ಒಟ್ಟಾಗಿ ಒಯ್ಯಲ್ಪಡುವೆವು. "ಅಂತರಿಕ್ಷದಲ್ಲಿ" ಎಂಬುದು ಬಹುಶಃ, ಪೌಲನು "ವಾಯುಮಂಡಲದಲ್ಲಿ ಅಧಿಕಾರ ನಡಿಸುವ ಅಧಿಪತಿ" (ಎಫೆಸ 2:2) ಎಂದು ಕರೆದ ಸೈತಾನನ ಮೇಲೆ ಯೇಸುವು ಸಾಧಿಸಿರುವ ಸಂಪೂರ್ಣ ಜಯವನ್ನು ಸೂಚಿಸುವದಾಗಿದೆ. ಕ್ರಿಸ್ತನ ಎರಡನೆಯ ಬರೋಣದಲ್ಲಿ, ಆತನ ದೊರೆತನವು "ವಾಯುಮಂಡಲ"ಕ್ಕೆ ಸಹ ವಿಸ್ತರಿಸಲ್ಪಡುವದು, ಅದು ಸೈತಾನನ ಸಂಪೂರ್ಣ ಪರಾಜಯವನ್ನು ಸೂಚಿಸುತ್ತದೆ.

| **ಶಾಸ್ತ್ರಾಧಾರಿತ "ಎತ್ತಲ್ಪಡುವಿಕೆ"-1 ಥೆಸಲೋನಿಕ 4:17: "ಫಕ್ಕನೆ ಒಯ್ಯಲ್ಪಡುವೆವು"** | |
|---|---|
| **ಅಲ್ಲ :** | **ಹೌದು :** |
| ಯೆಸುವಿನ ಬರೋಣದ ವೇಳೆ ಕೆಲವು ವಿಶ್ವಾಸಿಗಳು ಆತನೊಂದಿಗೆ ಹಿಂದಿರುಗು ವಂತಾಗಲು ಅಂತಿಮ ಬರೋಣಕ್ಕೆ ವರ್ಷಗಳ ಮುಂಚೆ ಸಂಭವಿಸುವ ಅದೃಶ್ಯವಾದ ರಹಸ್ಯ ಬರೋಣ. | ಆತನು ಪರಲೋಕಕ್ಕೆ ಹಿಂದಿರುಗಿ ಹೋಗುವ ವೇಳೆ "ಆತನೊಂದಿಗೆ" ಹೋಗುವ ಎಲ್ಲಾ ವಿಶ್ವಾಸಿಗಳು ಲೋಕಾಂತ್ಯದಲ್ಲಿ ಸದೃಶ್ಯವಾಗಿ ಸಂಭವಿಸುವ ಎತ್ತಲ್ಪಡುವಿಕೆ. |

ಈ ವಾಕ್ಯಭಾಗವು ಯೇಸು ಎಂದಾದರೂ ಈ ಭೂಮಿಯ ಮೇಲೆ ಒಂದು ಭೌತಿಕವಾದ ಸಹಸ್ರವರ್ಷದ ಆಳ್ವಿಕೆಯನ್ನು ಸ್ಥಾಪಿಸುವನೆಂಬ ಯೋಚನೆಯನ್ನು ನಾಶಗೊಳಿಸುತ್ತದೆ. ಆತನು ಪುನಃ ಎಂದಾದರೂ ಭೂಮಿಯ ಮೇಲೆ ತನ್ನ ಕಾಲನ್ನಿಡುವನೆಂಬ ಬಗ್ಗೆ ಶಾಸ್ತ್ರವು ಎಲ್ಲಿಯೂ ಸೂಚಿಸುವದಿಲ್ಲ. ಬದಲಾಗಿ, ಆತನು ಭೂಮಿಗೆ "ಬರುವನು," ಆಗ ಆತನು ಭೂಮಿಯ ವಾಯುಮಂಡಲದಲ್ಲಿ ಇರುವವನಾಗಿ ತನ್ನ ನಂಬಿಗಸ್ತರು ಭೂಮಿಯಿಂದ

"ಎತ್ತಲ್ಪಟ್ಟು" ಆತನೊಂದಿಗೆ ಪರಲೋಕದಲ್ಲಿ **ಸದಾಕಾಲವೂ** "ಶಾಶ್ವತವಾಗಿ" (NIV) ಇರುವಂತೆ ಮಾಡುವನು. Morrisನು ಇಲ್ಲಿ ರಹಸ್ಯ ಎತ್ತಲ್ಪಡುವಿಕೆಯನ್ನು ವಿರೋಧಿಸುತ್ತಾ ಹೀಗೆ ಹೇಳುತ್ತಾನೆ, "ಇದನ್ನು ರಹಸ್ಯ ಎತ್ತಲ್ಪಡುವಿಕೆಯೊಂದರಲ್ಲಿ ಹೊಂದಿಸುವದು ಬಹಳ ಕಷ್ಟಕರವಾಗಿರುತ್ತದೆ."[20] ಬೇರೊಂದು ಕಡೆಯಲ್ಲಿ (1 ಕೊರಿಂಥ 15:48-52), "ದೇವರರಾಜ್ಯಕ್ಕೆ ಬಾಧ್ಯರಾಗು"ದಕ್ಕೋಸ್ಕರ, ನಾವು ಒಂದು "ನಿರ್ಲಯತ್ವವುಳ್ಳ," ರಕ್ತಮಾಂಸಗಳಿಲ್ಲದ ದೇಹವಾಗಿ ಮಾರ್ಪಡುವವು ಎಂದು ಪೌಲನು ನಮಗೆ ಹೇಳುತ್ತಾನೆ.

**ವಚನ 18.** ಥೆಸಲೋನಿಕದವರು ತಮ್ಮ ಸತ್ತಿರುವ ಪ್ರಿಯರ ವಿಷಯದಲ್ಲಿ **ಒಬ್ಬರನ್ನೊಬ್ಬರು ಸಂತೈಸುವದಕ್ಕೆ** ಶಕ್ತರಾಗುವಂತೆ ಪೌಲನ **ಮಾತುಗಳು** ಅವರಿಗೆ ಪ್ರಯೋಜನಕರವಾಗಿರಬೇಕು. ಆ ಅಗಲಿದ್ದ ಪ್ರಿಯರು ದೊಡ್ಡ ಎರಡನೆಯ ಬರೋಣದ ಘಟನೆಯನ್ನು ತಪ್ಪಿಸಿಕೊಳ್ಳುವವರಲ್ಲ ಎಂಬುದಾಗಿ ಆತನು ಹೇಳಿದನು. ಪುನಃ, "ಸಂತೈಸಿರಿ" ಎಂಬ ಪದವು *parakaleō* ಎಂಬದರಿಂದ ಬಂದಿದ್ದು, "ಪ್ರೋತ್ಸಾಹಿಸು, ಆದರಣೆ ಹೇಳು, ಸಂತೈಸು" ಎಂದರ್ಥವಾಗಿರುತ್ತದೆ (ನೋಡಿರಿ 3:7).

## ಅನ್ವಯಿಸುವಿಕೆ

ಈ ಹಂತದಲ್ಲಿ ಪೌಲನು ತನ್ನ ಪತ್ರಿಕೆಯ ಅತ್ಯಂಥ ಕಾರ್ಯರೂಪದ ವಿಭಾಗಕ್ಕೆ ತಿರುಗಿಕೊಳ್ಳುತ್ತಾನೆ. ಆತನು ಥೆಸಲೋನಿಕದವರಿಗೆ ಅಗತ್ಯವಿದ್ದ ಸಿದ್ಧಾಂತಿಕ ವಿವರಣೆಗಳನ್ನು ನೀಡಿದ್ದನು, ಮತ್ತು ಇಲ್ಲಿ ಆತನು ಅವರ ಮುಂದೆ ಅವರ ಕರ್ತವ್ಯಗಳನ್ನು ಮುಂದಿಡುತ್ತಾನೆ. ಆತನು ಸಿದ್ಧಾಂತದಿಂದ ಕರ್ತವ್ಯದೆಡೆಗೆ ಹೋಗಿದ್ದನು, ಕಟ್ಟಳೆಯಿಂದ ಆಚರಣೆಯ ಕಡೆಗೆ ಹೋಗಿದ್ದನು.

### ಕ್ರೈಸ್ತರು ಹೇಗೆ "ನಡೆಯತಕ್ಕದ್ದು" (4:1, 2)

1 ಥೆಸಲೋನಿಕದವರಿಗೆ ಬರೆದ ಪತ್ರಿಕೆಯು ಒತ್ತು ಕೊಡುವ ಒಂದು ದೊಡ್ಡ ವಿಯಷವೆಂದರೆ ಯೇಸುವಿನ ಪುನರಾಗಮನ, ಎರಡನೆಯ ಬರೋಣ. ಯೇಸುವು ಸಭೆಯ ಮದಲಿಂಗನಾಗಿದ್ದಾನೆ (2 ಕೊರಿಂಥ 11:2), ಮತ್ತು ಆತನು ಆಕೆಯನ್ನು ತನಗೋಸ್ಕರ ತೆಗೆದುಕೊಳ್ಳುವದಕ್ಕಾಗಿ ಆತನು ಹಿಂದಿರುಗಿ ಬರುತ್ತಿದ್ದಾನೆ (ಯೋಹಾನ 14:3). ಸಭೆಯು ಆತನೊಂದಿಗೆ "ಯಜ್ಞದ ಕುರಿಯಾದಾತನ ವಿವಾಹದ ಔತಣ" ಎಂದು ಕರೆಯುವ ದೊಡ್ಡ ಹಬ್ಬದಲ್ಲಿ ಭಾಗಿಯಾಗುವದು (ಪ್ರಕಟನೆ 19:9). ನಾವು ದೂರವಾಗಿರುವ ವೇಳೆಯಲ್ಲಿ, ಕ್ರಿಸ್ತನು ನಮ್ಮ ಜೀವಿತಗಳಿಗಾಗಿ ಕೊಟ್ಟಿರುವ ಆತನ ಯೋಜನೆಯ ಸಂಕ್ಷಿಪ್ತ ವಿವರಣೆಗಳನ್ನು ಅನುಸರಿಸುತ್ತಿದ್ದೇವೋ?

ಆತನ ಪುನರಾಗಮನದ ತನಕ ನಾವು ಹೇಗೆ ನಡೆಯಬೇಕು ಅಥವಾ ಜೀವಿಸಬೇಕು? 4ನೇ ಅಧ್ಯಾಯದಲ್ಲಿ, ಪೌಲನು ಹೀಗೆ ಹೇಳಿದನು, "ನಾವು . . . ನಿಮಗೆ ಕೊಟ್ಟ ಆಜ್ಞೆಗಳನ್ನು ತಿಳಿದ್ದೀರಷ್ಟೆ. ನೀವು ಹೇಗೆ ನಡೆದು ದೇವರನ್ನು ಮೆಚ್ಚಿಸಬೇಕೋ ಅದನ್ನು ನಮ್ಮಿಂದ ಕಲಿತುಕೊಂಡಿರಿ" (ವಚನಗಳು 1, 2). "ನಡೆಯುವ" ಸಾದೃಶ್ಯವು ಕ್ರೈಸ್ತನ ಜೀವಿತವನ್ನು ಒಂದು ಪವಿತ್ರಯಾತ್ರೆ ಹೋಲಿಸುತ್ತದೆ (ನೋಡಿರಿ 2:12). ಯೇಸು ಅದೇ ರೀತಿಯ

ಸಾದೃಶ್ಯವನ್ನು ಬಳಸುತ್ತಾ ಹೀಗೆ ಹೇಳಿದನು, "ನಿತ್ಯಜೀವಕ್ಕೆ ಹೋಗುವ ದಾರಿಯು ಬಿಕ್ಕಟ್ಟು" (ಮತ್ತಾಯ 7:14).

ಪೌಲನ ಪ್ರಕಾರವಾಗಿ, ಒಬ್ಬ ಕ್ರೈಸ್ತನ ಜೀವಿತವು "ದೇವರಿಗೆ ಮೆಚ್ಚಿಕೆ" ಯಾಗಬೇಕು ಮತ್ತು "ಆಜ್ಞೆಗಳನ್ನು" ಕೈಕೊಂಡು ನಡೆಯಬೇಕು (ವಚನಗಳು 1, 2). ನಾವು ದೇವರ ಸೇವೆಯನ್ನು ಮಾಡಬೇಕು, ನಮ್ಮ ಮದಲಿಂಗನಾಗಿರುವ ಕರ್ತನಾದ ಯೇಸುವಿನ ನಿಬಂಧನೆಗಳಿಗೆ ವಿಧೇಯರಾಗಬೇಕು. EE

## ನಂಬಿಕೆಯಲ್ಲಿ ಮುಂದುವರೆಯುವದು (4:1, 2)

"ಕಡೇ ಮಾತೇನಂದರೆ" ಮತ್ತು "ಹಾಗಾದರೆ" ಎಂಬ ಮಾತುಗಳನ್ನು ಬಳಸುವವನಾಗಿ ತಾನು ತನ್ನ ಪತ್ರಿಕೆಯ ಕಾರ್ಯರೂಪದ ಭಾಗವನ್ನು ಪ್ರವೇಶಿಸುತ್ತಿದ್ದಾನೆಂಬುದನ್ನು ಅಪೊಸ್ತಲನು ಸ್ಪಷ್ಟವಾಗಿ ಸೂಚಿಸುತ್ತಾನೆ, ಅವುಗಳು "ಮುಕ್ತಾಯ" ಎಂಬ ಅರ್ಥವನ್ನು ಕೊಡುವದಿಲ್ಲವಾದರೂ "ಉಳಿದ ವಿಷಯವೇನೆಂದರೆ" ಎಂಬರ್ಥವನ್ನು ನೀಡುತ್ತವೆ. ಆತನು ಕೋಮಲತೆಯೊಂದಿಗೆ ಥೆಸಲೋನಿಕದವರನ್ನು ಸಹೋದರರೇ ಎಂದು ಕರೆಯುತ್ತಾನೆ, ಮತ್ತು ತಾವು ಸ್ವೀಕರಿಸಿಕೊಂಡ ಸಂದೇಶಕ್ಕನುಗುಣವಾಗಿ ಜೀವಿಸಬೇಕೆಂಬುದಾಗಿ ಅವರನ್ನು ಕರ್ತನಲ್ಲಿ ಮತ್ತು ಮೂಲಕವಾಗಿ ಬೇಡಿಕೊಳ್ಳುತ್ತಾನೆ. ಆತನ ಪ್ರಬೋಧನೆಯು ಹೊಸದಾಗಿ ಪರಿವರ್ತನೆಗೊಂಡವರು ಆಗ ಮತ್ತು ಈಗ ಹೇಗೆ ಜೀವಿಸಬೇಕೆಂಬುದನ್ನು ದೃಷ್ಟಾಂತಪಡಿಸುತ್ತದೆ.

*ಅವರು ತಾವು ಪಡೆದುಕೊಂಡ ಸಂದೇಶಕ್ಕೆ ತಕ್ಕಂತೆ ಜೀವಿಸಬೇಕು.* ಪೌಲ, ತಿಮೊಥೆ ಮತ್ತು ಸೀಲರು ಥೆಸಲೋನಿಕದವರಿಗೆ ಸುವಾರ್ತೆಯನ್ನು ಕಲಿಸಿದರು ಮತ್ತು ಜೀವಿತಕ್ಕೆ ಅದರ ಸೂಚ್ಯಾರ್ಥಗಳೇನೆಂಬುದನ್ನು ತಿಳಿಸಿದರು. ಅವರಿಗೆ ಹೇಗೆ ಜೀವಿಸಬೇಕೆಂಬುದು ಕಲಿಸಲ್ಪಟ್ಟಿತ್ತು. "ನಡೆಯಬೇಕು" ಎಂಬುದು ಜೀವಿಸಬೇಕೆಂಬುದರ ಒಂದು ರೂಪಕೋಕ್ತಿಯಾಗಿರುತ್ತದೆ. ಕ್ರೈಸ್ತ ಜೀವನವು ಒಂದು ಹೆಜ್ಜೆ ಆಗಿರುವದಿಲ್ಲ, ಆದರೆ ಒಂದು ನಡೆ ಆಗಿರುತ್ತದೆ. ಅದೊಂದು ಕ್ಲುಪ್ತವಾದ, ನಿರ್ದಿಷ್ಟವಾದ ಘಟನೆಯಲ್ಲ, ಆದರೆ ನಿರಂತರವಾದ, ಅಡಚಣೆಗೊಳಪಡದ ನಂಬಿಕೆಯ ಜೀವನವಾಗಿರುತ್ತದೆ.

*ಅವರು ಕ್ರಿಸ್ತನ ಬೋಧನೆಗಳಲ್ಲಿ ಉನ್ನತಿಯನ್ನು ಸಾಧಿಸಬೇಕು.* ಕ್ರೈಸ್ತನು ಒಂದೇ ಸ್ಥಿರವಾದ ಮಟ್ಟದಲ್ಲಿ ಉಳಿಯುವದಿಲ್ಲ; ಬದಲಾಗಿ ಆತನು ನಂಬಿಕೆಯಲ್ಲಿ ಬೆಳೆಯುತ್ತಾನೆ, ಆತನು ವಯಸ್ಸಾದಂತೆ ಮತ್ತು ಆತ್ಮೀಕವಾಗಿ ಪರಿಪಕ್ವಗೊಂಡ ಹಾಗೆ ಕ್ರಿಸ್ತ ಬೋಧನೆಗಳಂತೆ ಹೆಚ್ಚೆಚ್ಚಾಗಿ ಜೀವಿಸುವವನಾಗುತ್ತಾನೆ.

*ಅವರು ತಾವು ಸ್ವೀಕರಿಸಿಕೊಂಡ ಹೊಣೆಯನ್ನು ಕಾಪಾಡಿಕೊಳ್ಳಬೇಕು.* ಪೌಲನು ಅವರ ನಂಬಿಗಸ್ತ ಹೃದಯಗಳ ಮೇಲೆ ಸುವಾರ್ತೆಯ ಸಂದೇಶವನ್ನಿಡುವ ಮೂಲಕ ಅವರಿಗೆ ಹೊಣೆಯನ್ನು ಒಪ್ಪಿಸಿದ್ದನು. ಅವರು ಥೆಸಲೋನಿಕದಲ್ಲಿ ಕರ್ತನ ಸಭೆಯಾಗಿರುವ ಆದೇಶವನ್ನು ಹೊಂದಿದ್ದರು.

ಆತನು ಈ ಹೊಸದಾಗಿ ಪರಿವರ್ತನೆಗೊಂಡವರಿಗೆ ನೀಡಿದ ಬುದ್ಧಿವಾದವು ಮೂರು ಪದಗಳ ಸುತ್ತ ಕೇಂದ್ರಿಕೃತವಾಗಿರುತ್ತದೆ: "ನಡೆಯಬೇಕು," "ಇನ್ನೂ ಹೆಚ್ಚಾಗಿ," ಮತ್ತು

"ಕಾಪಾಡಿಕೊಳ್ಳಿರಿ." ಆತನು ಕ್ರೈಸ್ತನ ಜವಾಬ್ದಾರಿಯನ್ನು ಒಂದು ಕ್ಲುಪ್ತವಾದ ಆದರೆ ಕಾರ್ಯರೂಪದ ದಾರಿಯಲ್ಲಿ ಸಾರಾಂಶಗೊಳಿಸಿದನು. EC

## ಲೈಂಗಿಕ ಅಶುದ್ಧತೆ (4:3-8)

ಪೌಲನು ಈ ಮಾತುಗಳಲ್ಲಿ ಸಾಮಾನ್ಯ ವಿಷಯಗಳಿಂದ ನಿರ್ದಿಷ್ಟವಾದದ್ದರ ಕಡೆಗೆ ಸಾಗಿದಂತೆ, ಚರ್ಚೆಯಾಂಶವು ಸಿದ್ಧಾಂತಿಕ ಸಂದೇಶದಿಂದ ಕ್ರೈಸ್ತ ಶುದ್ಧತೆಯ ಕಡೆಗೆ ಬದಲಾಯಿತು. ಹಾದರವು ಅನ್ಯಜನರ ಮಧ್ಯದಲ್ಲಿ ಬಹು ವ್ಯಾಪಕವಾಗಿದ್ದಂಥ ಪಾಪಗಳಲ್ಲೊಂದಾಗಿತ್ತು. ಧಾರ್ಮಿಕ ವಿಧಿರೂಪದ ಮತ್ತು ಇಂದ್ರಿಯ ಸುಖದ ಹಾದರ ಎರಡೂ ಅವರ ಹಿಂದಿನ ಜೀವನಶೈಲಿಯ ಭಾಗವಾಗಿದ್ದವು. ಆದುದರಿಂದ, ಹಾದರವು ಏಕೆ ತಪ್ಪು ಮತ್ತು ಒಬ್ಬ ಕ್ರೈಸ್ತನು ಅದರಲ್ಲಿ ಏಕೆ ತೊಡಗಿಸಿಕೊಳ್ಳಬಾರದು ಎಂಬುದಕ್ಕೆ ದೈವಿಕ ಕಾರಣಗಳನ್ನು ಆತನು ಅವರ ಮುಂದಿಡುವದು ಅವಶ್ಯಕವಾಗಿತ್ತು.

*ಹಾದರದಿಂದ ದೂರವಿರಬೇಕು ಎಂಬುದು ದೇವರ ಚಿತ್ತವಾಗಿದೆ* (ವ. 3). ಇದು ಶಾಸ್ತ್ರಗಳಲ್ಲಿ ದೇವರ ಚಿತ್ತದ ಕುರಿತಾಗಿ ಖಡಾಖಂಡಿತವಾದ ಹೇಳಿಕೆಯನ್ನು ನಾವು ಕಾಣಬಹುದಾದ ವಾಕ್ಯಭಾಗಗಳಲ್ಲೊಂದಾಗಿದೆ. ನಾವು "ದೇವರ ಚಿತ್ತವೇನು?" ಎಂದು ಕೇಳುತ್ತೇವೆ. ಸಾರಭೂತವಾಗಿ, ಪೌಲನು ನಮಗೆ ಹೀಗೆ ಹೇಳುತ್ತಾನೆ, "ನಾವು ಹಾದರವನ್ನು ಮಾಡಬೇಕೆಂಬುದನ್ನು ದೇವರು ಬಯಸುವದಿಲ್ಲ ಎಂಬದನ್ನು ನೀವು ಖಚಿತವಾಗಿ ತಿಳಿಯಬಹುದು."

*ಅದು ಬೇರೆಯವರಿಂದ ದೋಚುತ್ತದೆ ಅಥವಾ ವಂಚಿಸುತ್ತದೆ* (ವ. 6). ಹಾದರವು ಪ್ರತಿಯೊಬ್ಬ ಕ್ರೈಸ್ತನು ಹೊಂದಿರತಕ್ಕ ಮೂಲಭೂತ ಪ್ರಾಮಾಣಿಕತೆಯನ್ನು ಧ್ವಂಸಗೊಳಿಸುತ್ತದೆ. ಇದರಲ್ಲಿ ಭಾಗಿಯಾದವರಿಂದ ಅದು ನ್ಯಾಯಯುತವಾಗಿ ಅವನ ಅಥವಾ ಅವಳ ಸಂಗಾತಿಗೆ ಸೇರಿರಬೇಕಾಗಿದ್ದ ಪಾವಿತ್ರ್ಯತೆಯನ್ನು ಕದ್ದುಕೊಳ್ಳುತ್ತದೆ.

*ಅದಕ್ಕೆ ದೇವರಿಂದ ದಂಡನೆಯಾಗುವದು* (ವ. 6). ದೇವರು ಕೆಟ್ಟದ್ದಕ್ಕೆ ಮುಯ್ಯಿ ತೀರಿಸುತ್ತಾನೆ. ಎಲ್ಲಾ ಪಾಪಕ್ಕೂ-ಕೇವಲ ಹಾದರ ಮಾತ್ರವಲ್ಲ-ತಕ್ಕ ಮುಯ್ಯಿ ಆಗುವಂತೆ ನೋಡಿಕೊಳ್ಳುವನು. ಯಾವ ಪಾಪವೂ ಎಲ್ಲವನ್ನೂ ಕಾಣುವ ಆತನ ಕಣ್ಣುಗಳಿಂದ ತಪ್ಪಿಸಿಕೊಳ್ಳಲಾರದು.

*ಹಾದರವು ಪವಿತ್ರಾತ್ಮನ ವಿರುದ್ಧದ ಪಾಪವಾಗಿದೆ* (ವ. 8). ಪೌಲನ ಪ್ರಕಾರವಾಗಿ, ಪ್ರತಿಯೊಬ್ಬ ಕ್ರೈಸ್ತನು ಪವಿತ್ರಾತ್ಮನಿಗೆ ಶಾರೀರಿಕವಾದ ನಿವಾಸಸ್ಥಾನವಾಗಿದ್ದಾನೆ (1 ಕೊರಿಂಥ 6:19, 20). ತತ್ಪರಿಣಾಮವಾಗಿ, ಕ್ರೈಸ್ತನು ದೇವತ್ವದ ಒಂದು ಆಲಯವಾಗಿರುವಾಗ, ಒಬ್ಬನು ದೇವರ ನೀತಿಯ ಪವಿತ್ರಾತ್ಮನು ವಾಸಿಸುವ ನಿವಾಸಸ್ಥಾನವನ್ನು ತೆಗೆದುಕೊಂಡು ಹೋಗಿ ಹಾದರ ಮಾಡುವ ಮೂಲಕ ಅದನ್ನು ಹೊಲೆ ಮಾಡುವದನ್ನು ಊಹಿಸಿಕೊಳ್ಳುವದಕ್ಕೂ ಆಗದು.

ಹಾದರವನ್ನು ಮಾಡುವದಕ್ಕೆ ಸಾಧ್ಯವಿಲ್ಲ ಎಂಬುದರ ಈ ಕಾರಣಗಳನ್ನು ಒಬ್ಬನು ಆಲೋಚಿಸಿಕೊಳ್ಳುವಾಗ, ಹಾದರವು ಎಷ್ಟು ದುರಂತಮಯವಾದದ್ದೆಂಬುದನ್ನು ಕಾಣುವನು. ಯಾವ ಕ್ರೈಸ್ತನೂ ಅದಕ್ಕೆ ಸಮರ್ಥನೆ ನೀಡಬಾರದು, ಅದರಲ್ಲಿ ತೊಡಗಿಸಿಕೊಳ್ಳಬಾರದು,

ಅಥವಾ ಹಂಬಲಿಕೆಯೊಂದಿಗೆ ಅದರ ಕುರಿತು ಧ್ಯಾನಿಸುತ್ತಲೇ ಇರಬಾರದು. EC

## ಶುದ್ಧತೆಯಲ್ಲಿ ನಡೆಯುವದು (4:3-8)

ಪೌಲನು ಹೀಗೆ ಬರೆದನು, "ದೇವರ ಚಿತ್ತವೇನೆಂದರೆ ನೀವು ಶುದ್ಧರಾಗಿ ಇರಬೇಕೆಂಬದೇ" (ವ. 3). ಕ್ರೈಸ್ತರು ತಮ್ಮ ಕ್ರೈಸ್ತ ನಡೆಯ ಆರಂಭದಲ್ಲಿ ತಮ್ಮ ಪಾಪಗಳನ್ನು "ತೊಳೆದುಕೊಂಡಿರುತ್ತಾರೆ" (ಅಪೊಸ್ತಲರ ಕೃತ್ಯಗಳು 22:16), ಮತ್ತು ತಮ್ಮ ಕ್ರೈಸ್ತ ನಡೆಯ ವೇಳೆಯಲ್ಲಿ ಪಶ್ಚಾತ್ತಾಪ ಪಡುವಾಗ ಅವರ ಪಾಪಗಳು "ಕ್ಷಮಿಸಲ್ಪಡುತ್ತವೆ" (1 ಯೋಹಾನ 1:7-10). ಥೆಸಲೋನಿಕದವರು ಲೈಂಗಿಕವಾದ ಶೋಧನೆಗಳ ಬೆಳಕಿನಲ್ಲಿ ಒಂದು ಶುದ್ಧಗೊಂಡ ಜೀವಿತವನ್ನು ನಡೆಸಬೇಕು ಎಂಬುದನ್ನು ಪೌಲನು ಅವರಿಗೆ ವಿವರಿಸುತ್ತಾನೆ.

*"ಲೈಂಗಿಕ ಅನೈತಿಕತೆಯಿಂದ ದೂರವಿರಿ"* (ವ. 3). ಇದು ವಿಗ್ರಹಾರಾಧಕ ಜನಾಂಗದ ಪಟ್ಟಣಗಳಲ್ಲಿ ಯಾವಾಗಲೂ ಇರುತ್ತಿದ್ದಂಥ ಒಂದು ಅಪಾಯವಾಗಿತ್ತು, ಅಲ್ಲಿ ವ್ಯಭಿಚಾರವು ಬಹಳ ಬೆಳೆಯುತ್ತಿತ್ತು.

*"ಶುದ್ಧತೆ ಮತ್ತು ಘನತೆಯಲ್ಲಿ ಪ್ರತಿಯೊಬ್ಬನೂ [ತನ್ನ] ಸ್ವಂತ ಪಾತ್ರೆಯನ್ನು ಸಂಪಾದಿಸಿಕೊಳ್ಳಬೇಕು"* (ವ. 4). "ಪಾತ್ರೆ" ಎಂಬುದರ ಅರ್ಥದ ಕುರಿತು ಚರ್ಚೆಯನ್ನು ಮಾಡಲಾಗಿದೆ. RSVಯು ಇದನ್ನು "ಪತ್ನಿ" ಎಂದು ("ತನಗೆ ಒಬ್ಬ ಪತ್ನಿಯನ್ನು ಸಂಪಾದಿಸಿಕೊಳ್ಳಬೇಕು") ಎಂದು ಅರ್ಥನಿರೂಪನೆ ಮಾಡಿರುತ್ತದೆ. ಆದಾಗ್ಯೂ, ಬೈಬಲಿನಲ್ಲಿ ಬೇರೆ ಎಲ್ಲಿಯೂ ಹೆಂಡತಿಯನ್ನು ಈ ರೀತಿಯಾಗಿ ಕರೆದಿರುವದಿಲ್ಲ. "ಪಾತ್ರೆ" ಎಂಬುದನ್ನು ಹೆಚ್ಚು ಸಂಭಾವ್ಯವಾಗಿ ಅನುವಾದಿಸಬಹುದಾದದ್ದೆಂದರೆ "ದೇಹ" ಎಂಬದಾಗಿ ಆಗಿದೆ (NIV). ಅದನ್ನು ಸಕಾರಾತ್ಮಕವಾಗಿ ಹೇಳಬೇಕೆಂದರೆ, ಕ್ರೈಸ್ತರು "ಶುದ್ಧತೆ ಮತ್ತು ಘನತೆ"ಯಲ್ಲಿ ತಮ್ಮ ಸ್ವಂತ ದೇಹಗಳನ್ನು ನಿಗ್ರಹಿಸಿಕೊಳ್ಳಬೇಕು (ವ. 4; ನೋಡಿರಿ ರೋಮಾ 6:19). ಅದನ್ನು ನಕಾರಾತ್ಮಕವಾಗಿ ಹೇಳುವದಾದರೆ, ಕ್ರೈಸ್ತರು ತಮ್ಮ ದೇಹಗಳನ್ನು "ಕಾಮಾಭಿಲಾಷೆಗಳಲ್ಲಿ" ತೊಡಗಿಸಬಾರದು (ವ. 5).

*ದೇಹವನ್ನು ನಿಗ್ರಹಿಸಿಕೊಳ್ಳುವ ವಿಷಯದಲ್ಲಿ "[ನಿನ್ನ] ಸಹೋದರನನ್ನು ವಂಚಿಸಿ ಕೇಡುಮಾಡಬಾರದು"* (ಅಪಹರಿಸಬಾರದು) (ವ. 6a). ಮತ್ತೊಬ್ಬನ ಹೆಂಡತಿಯೊಂದಿಗೆ ವ್ಯಭಿಚಾರ ಮಾಡುವ ರೂಪದಲ್ಲಿ ಒಬ್ಬನ ಸಹೋದರನು ವಂಚನೆಗೊಳಗಾಗುವಿಕೆಯು ಸಂಭವಿಸಬಹುದು. ಅವಿವಾಹಿತ ವ್ಯಕ್ತಿಯೊಂದಿಗೆ ಅನೈತಿಕವಾಗಿ ಸಂಭೋಗವನ್ನು ನಡಿಸುವ ಮೂಲಕ ಆ ವ್ಯಕ್ತಿಯ ಭಾವಿ ವಿವಾಹ ಸಂಗಾತಿಗೆ ವಂಚನೆಯನ್ನು ಮಾಡುವ ರೂಪದಲ್ಲಿ ಸಹೋದರನಿಗೆ ವಂಚನೆ ಮಾಡುವಿಕೆಯು ಸಂಭವಿಸಬಹುದಾಗಿದೆ.

*"ಇವೆಲ್ಲವುಗಳ ವಿಷಯದಲ್ಲಿ" ಕರ್ತನು ಮುಯ್ಯಿಗೆ ಮುಯ್ಯಿಗೆ ತೀರಿಸುತ್ತಾನೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿರಿ* (ವ. 6b). ಇಲ್ಲಿ ಬಳಸಲ್ಪಟ್ಟಿರುವಂತೆ "ಮುಯ್ಯಿ ತೀರಿಸುವವನು" ಎಂಬುದು, ಆತನು ಪ್ರತೀಕಾರವನ್ನು ಮಾಡುವವನು ಎಂದಲ್ಲ, ಆದರೆ ನ್ಯಾಯವನ್ನು ಜರುಗಿಸುವವನು ಎಂದರ್ಥವಾಗಿದೆ. ಪೌಲನು ಥೆಸಲೋನಿಕದವರ ಸಂಗಡ ಇದ್ದ ವೇಳೆಯಲ್ಲಿ ಈ ವಿಷಯವಾಗಿ ಅವರನ್ನು ಎಚ್ಚರಿಸಿದ್ದನು, ಮತ್ತು ಆತನು ಅದನ್ನು ಒಂದು ಗಂಭೀರವಾದ ವಿಚಾರವೆಂದು ಪರಿಗಣಿಸಿದ್ದನು. "ದೇವರು ನಮ್ಮನ್ನು ಬಂಡತನಕ್ಕೆ

ಕರೆಯದೆ ಶುದ್ಧರಾಗಿರುವದಕ್ಕೆ ಕರೆದನು" (ವ. 7).

*"ಈ ಮಾತನ್ನು [ತತ್ವವನ್ನು] ತಾತ್ಸಾರ ಮಾಡುವವನು ಮನುಷ್ಯನನ್ನು ಅಲ್ಲ . . . ದೇವರನ್ನೇ ತಿರಸ್ಕರಿಸುತ್ತಾನೆ" ಎಂಬುದನ್ನು ನೆನಪಿಟ್ಟುಕೊಳ್ಳಿರಿ* (ವ. 8a). ದೇರು ನಮ್ಮ ಸೃಷ್ಟಿಕರ್ತನು. ಆತನೇ ನಮಗೆ ದೀಕ್ಷಾಸ್ನಾನದ ವೇಳೆಯಲ್ಲಿ ತನ್ನ "ಪವಿತ್ರಾತ್ಮ ವರವನ್ನು" ದಯಪಾಲಿಸಿದನು (ವ. 8b; ನೋಡಿರಿ ಅಪೊಸ್ತಲರ ಕೃತ್ಯಗಳು 2:38; 5:32), ಮತ್ತು ನಮ್ಮೊಳಗೆ ನಿರಂತರವಾಗಿ ವಾಸಿಸುವಂತೆ ತನ್ನ ಪವಿತ್ರಾತ್ಮನಿಗೆ ಅನುಮತಿಸುವವನಾಗಿದ್ದಾನೆ (1 ಕೊರಿಂಥ 6:19, 20). ಒಂದು ಅಶುದ್ಧವಾದ ಜೀವಿತವನ್ನು ಅಪ್ಪಿಕೊಂಡವರಾಗಿ ಅದೇ ವೇಳೆಯಲ್ಲಿ ಪವಿತ್ರಾತ್ಮನನ್ನು ಅಂಗೀಕರಿಸಿಕೊಂಡಿದ್ದೇವೆಂದು ಹೇಳಿಕೊಳ್ಳುವದು ತದ್ವಿರುದ್ಧವಾದದ್ದು. ಅಂಥ ನಡವಳಿಕೆಯು "ಪವಿತ್ರಾತ್ಮನನ್ನು ದುಃಖಿಸುವದಾಗಿದೆ" (ಎಫೆಸ 4:30) ಮತ್ತು ತಂದೆಯನ್ನು ಹಾಗೂ ಮದಲಿಂಗನನ್ನು ಅಸಂತೋಷಪಡಿಸುವದಾಗಿದೆ.

ಕ್ರೈಸ್ತೀಯ ನಡೆಯನ್ನು ನಡೆಯಬೇಕಾದರೆ, ನಾವು ಅಂಥ ಅಶುದ್ಧತೆಗಳಿಂದ ದೂರವಿರಬೇಕು. ನಾವು ಎಲ್ಲಾ ಲೈಂಗಿಕ ಅನೈತಿಕತೆಯಿಂದಲೂ ದೂರವಿರಬೇಕೆಂಬುದು ನಮ್ಮ ಮದಲಿಂಗನ ಬಯಕೆಯಾಗಿದೆ: ವಿವಾಹದ ಹೊರಗಿನ ಸಂಭೋಗ ಮತ್ತು ಅವಿವಾಹಿತ ವ್ಯಕ್ತಿಗಳಲ್ಲಿ ಲೈಂಗಿಕ ಬಯಕೆಯನ್ನು ಎಬ್ಬಿಸುವಂತಹ ಅತಿಯಾದ ಲಲ್ಲೆಗರೆಯುವಿಕೆ. EE

## ನಮ್ಮ ಜೀವಿತಗಳಲ್ಲಿ ದೇವರ ಚಿತ್ತ (4:1-8)

ದೇವರ ವಾಕ್ಯದ ಮೂಲಕವಾಗಿ ದೇವರ ಚಿತ್ತವೇನೆಂಬುದನ್ನು, ಆತನು ಏನು ಯೋಚಿಸುತ್ತಾನೆಂಬುದನ್ನು ತಿಳಿಯುವ ಒಂದು ಅವಕಾಶವು ನಮಗಿರುತ್ತದೆ. ನಮ್ಮ ಜೀವಿತಗಳಿಗೆ ಆತನು ಏನು ಬಯಸುತ್ತಾನೆಂಬುದರ ಕುರಿತು ನಾವು ದೃಷ್ಟಿಕೋನಗಳನ್ನು ಪಡೆದುಕೊಳ್ಳಬಹುದು.

ಈ ಪತ್ರಿಕೆಯ ಆರಂಭಿಕ ಮೂರು ಸಂತೋಷದ ಸುದ್ದಿಯ ಅಧ್ಯಾಯಗಳಲ್ಲಿ, ಪೌಲನು ಥೆಸಲೋನಿಕದಲ್ಲಿ ಸುವಾರ್ತೆಯನ್ನು ಸಾರಿದ್ದರ ಕುರಿತು ಮತ್ತು ಕ್ರೈಸ್ತರಾಗಿ ಮಾರ್ಪಟ್ಟಿದ್ದವರು ಸಂದೇಶವನ್ನು ಸ್ವೀಕರಿಸಿಕೊಂಡ ರೀತಿಯ ಬಗ್ಗೆ ಜ್ಞಾಪಕ ಮಾಡಿಕೊಳ್ಳುತ್ತಾನೆ. ಅದರ ನಂತರ, ಹಿಂಸೆಯ ಮಧ್ಯದಲ್ಲಿಯೂ ಒಂದು ಪ್ರೀತಿ ಹಾಗೂ ಬೆಳೆಯುವ ಸಮಯವು ಇತ್ತು. ಈ ಹೊಸ ಕ್ರೈಸ್ತರ ಪ್ರಗತಿಯು ಅವರ ಬೋಧಕರಿಗೆ ಸಂತೋಷ ಮತ್ತು ಆದರಣೆಯ ಮೂಲವಾಗಿತ್ತು. ಈ ಬೆಳವಣಿಗೆಯ ಸಮಯವನ್ನು ನೆನಪಿಗೆ ತಂದುಕೊಂಡವನಾಗಿ, ಬಳಿಕ ಆ ಪ್ರಗತಿಯಲ್ಲಿ ಮುನ್ನಡೆಯುವಂತೆ ಸಹಾಯ ಮಾಡುವದಕ್ಕಾಗಿ ಆತನು ಕೆಲವು ಪ್ರಾಮುಖ್ಯವಾದ ತತ್ವಗಳು ಮತ್ತು ಆಚಾರಗಳ ಕುರಿತ ಚರ್ಚೆಯನ್ನು ಆರಂಭಿಸುತ್ತಾನೆ.

ಜೀವನದ ಶುದ್ಧತೆಯು ಕ್ರೈಸ್ತ ಬೆಳವಣಿಗೆಯ ಒಂದು ಪ್ರಾಮುಖ್ಯವಾದ ಭಾಗವಾಗಿದೆ ಮತ್ತು ಈ ಕ್ರೈಸ್ತರು ಆರಾಧಿಸುತ್ತಿದ್ದ ದೇವರನ್ನು ಪ್ರತಿಬಿಂಬಿಸುವದಕ್ಕೆ ಶುದ್ಧತೆಯು ಅಗತ್ಯವಾಗಿತ್ತು. ಈ ವಿಗ್ರಹಾರಾಧಕ ಜನಾಂಗದ ಸಮಾಜದಲ್ಲಿ, ಜನರ ಜೀವಿತಗಳು ಅವರು ನಂಬಿಕೆಯಿಟ್ಟಿದ್ದ ಮತ್ತು ಆರಾಧಿಸಿದ ದೇವರುಗಳ ಚಿತ್ತವನ್ನು

ತೋರ್ಪಡಿಸುವವುಗಳಾಗಿದ್ದವು. ಅನ್ಯಜನಾಂಗಗಳ ಸಮುದಾಯವು ಸತ್ಯ ದೇವರ ಕುರಿತು ತಿಳಿಯಬೇಕೆಂದರೆ, ಕ್ರೈಸ್ತರ ಜೀವಿತಗಳು ಅವರಿಗೆ ದೇವರ ಪರಿಶುದ್ಧತೆಯ ಕುರಿತ ಒಂದು ನಿಜವಾದ ಚಿತ್ರಣವನ್ನು ಒದಗಿಸಬೇಕಿತ್ತು.

*ದೇವರ ಪಾತ್ರವನ್ನು ಹುಡುಕು (4:1).* ಪೌಲನು ವಾಚಕರನ್ನು "ಬೇಡಿಕೊಳ್ಳುವದಕ್ಕೆ ಮತ್ತು ಪ್ರಬೋಧಿಸುವದಕ್ಕೆ" ಅಥವಾ ವಿನಂತಿಸಿಕೊಳ್ಳುವದಕ್ಕೆ ಆರಂಭಿಸುತ್ತಾನೆ. ಆ ಮಾತುಗಳು ಒಂದು ವಿಶೇಷವಾದ ಮನವಿಯ ಕಡೆಗೆ ಗಮನವನ್ನು ಸೆಳೆದವು, ಅನೇಕ ಸಾರಿ ಪತ್ರಿಕೆಯ ಪ್ರಮುಖ ಉದ್ದೇಶಗಳಲ್ಲೊಂದನ್ನು ಸೂಚಿಸುವದಾಗಿದೆ.

ಸಭೆಯು ಏನು ಮಾಡಬೇಕೆಂಬದಾಗಿ ಪೌಲನು ಕೇಳಿಕೊಳ್ಳುತ್ತಿದ್ದಾನೆ? ನಡೆಯುವದರಲ್ಲಿ ಮತ್ತು ದೇವರನ್ನು ಮೆಚ್ಚಿಸುವದರಲ್ಲಿ "ಇನ್ನೂ ಹೆಚ್ಚಾಗಿ" ಮಾಡಬೇಕೆಂದು ಬೇಡುತ್ತಿದ್ದಾನೆ. ಅವರು ಉತ್ತಮವಾಗಿ ನಡೆಯುತ್ತಿರಲಿಲ್ಲ ಎಂದು ಇದರ ಅರ್ಥವೋ? ಇಲ್ಲವೇ ಇಲ್ಲ! ಅವರು ಈಗಾಗಲೇ ಉನ್ನತಿಯನ್ನು ಸಾಧಿಸಿದ್ದರು ಎಂಬದಾಗಿ ಈ ವಚನದಲ್ಲಿ ಅವರಿಗೆ ಹೇಳಲಾಗುತ್ತದೆ. ಈ ಪತ್ರಿಕೆಯಲ್ಲಿ ಹಲವಾರು ಸಾರಿ ಪೌಲನು ಅವರಿಗೆ ತಾನು ಈಗಾಗಲೆ ಯಾವುದರಲ್ಲಿ ಉತ್ತಮವಾಗಿ ಮಾಡುತ್ತಿದ್ದಾರೋ ಅದರಲ್ಲಿ ಇನ್ನಷ್ಟು ಉತ್ತಮತೆಯನ್ನು ಸಾಧಿಸಬೇಕೆಂದು ಈ ಕ್ರೈಸ್ತರನ್ನು ಕೇಳಿಕೊಳ್ಳುತ್ತಾನೆ. 4:9, 10ರಲ್ಲಿ, ಪ್ರೀತಿಸುವದಕ್ಕಾಗಿ ಆತನು ಅವರನ್ನು ಶ್ಲಾಘಿಸಿದನು ಆದರೆ ಇನ್ನೂ ಹೆಚ್ಚಾಗಿ ಪ್ರೀತಿಸಬೇಕೆಂದು ಕೇಳಿಕೊಂಡನು; 5:11ರಲ್ಲಿ ಆತನು ಅವರಿಗೆ ಅವು ಈಗಾಗಲೇ ಮಾಡುತ್ತಿರುವ ಪ್ರಕಾರವೇ, ಒಬ್ಬರನ್ನೊಬ್ಬರು ಪ್ರೋತ್ಸಾಹಿಸಿ ಭಕ್ತಿವೃದ್ಧಿಗೊಳಿಸಿರಿ ಎಂದು ಕೇಳಿಕೊಂಡನು.

ಥೆಸಲೋನಿಕದ ಕ್ರೈಸ್ತರಿಗೆ ಕೃತಜ್ಞತೆ ಹೇಳಿ ಶ್ಲಾಘಿಸಿದ ಬಳಿಕ, ದೇವರೊಂದಿಗಿನ ತಮ್ಮ ನಡೆಯಲ್ಲಿ ಅವರು ಇನ್ನಷ್ಟು ಹೆಚ್ಚಾಗಿ ಸೇವೆಯನ್ನು ಮಾಡಬೇಕೆಂದು ಅವರನ್ನು ಪ್ರೋತ್ಸಾಹಿಸುವದಕ್ಕಾಗಿ ಪೌಲನು ಪತ್ರಿಕೆಯ ನಂತರದ ಭಾಗವನ್ನು ಬರೆಯುತ್ತಾನೆ.

ಅವರು ತಮ್ಮ ಜೀವಿತಗಳಲ್ಲಿ ಹೇಗೆ ನಡೆಯಬೇಕಾಗಿತ್ತು? ದೇವರನ್ನು ಮೆಚ್ಚಿಸುವಂತೆ! ಎಫೆಸದ ಸಭೆಗೆ "ಕರ್ತನಿಗೆ ಮೆಚ್ಚಿಕೆಯಾದದ್ದು ಏನೆಂಬುದನ್ನು ಪರಿಶೋಧಿಸಿ ತಿಳುಕೊಳ್ಳಿರಿ" ಎಂದು ಹೇಳಲಾಯಿತು (ಎಫೆಸ 5:10). ಅದು ನಮ್ಮ ಗುರಿಯು ಸಹ ಆಗಿರಬೇಕು.

*ದೇವರ ಆಜ್ಞೆಗಳನ್ನು ನೆನಪಿನಲ್ಲಿಟ್ಟುಕೊಳ್ಳಿರಿ (4:2).* ತಮಗೆ ಈಗಾಗಲೇ ಏನು ಕಲಿಸಲ್ಪಟ್ಟಿತೋ ಅದನ್ನು ನೆನಪಿನಲ್ಲಿಟ್ಟುಕೊಳ್ಳುವಂತೆ ಥೆಸಲೋನಿಕದಲ್ಲಿನ ಕ್ರೈಸ್ತರಿಗೆ ಹೇಳಲಾಯಿತು. ಅದೇನೆಂಬುದನ್ನು ತಿಳಿಯುವದಕ್ಕಾಗಿ ನಾವು ಅಧ್ಯಾಯದಲ್ಲಿನ ಸ್ವಲ್ಪ ಮುಂದಿನ ಭಾಗವನ್ನು ನೋಡಲಿದ್ದೇವೆ, ಆದರೆ ಮುಖ್ಯ ಅಪ್ಪಣೆಯೇನೆಂದರೆ ತಾವು ಈಗಾಗಲೇ ಪಡೆದುಕೊಂಡಿರುವ ಬೋಧನೆಯನ್ನು ಮರೆಯಬಾರದು ಎಂದಾಗಿತ್ತು (4:2).

ಎಷ್ಟೋಂದು ಸಾರಿ ನಾವು ಈಗಾಗಲೇ ನಮಗೆ ತಿಳಿದಿರುವದನ್ನು ಪಕ್ಕಕ್ಕೇ ಎತ್ತಿ ಇಡುತ್ತೇವೆ! ಅದನ್ನು ಮಾಡುವದಕ್ಕೆ ನಮಗೆ ಅನೇಕ ಕಾರಣಗಳಿರಬಹುದು. ಬಹುಶಃ ಬೋಧನೆಯು ಅರ್ಥಮಾಡಿಕೊಳ್ಳಲು ಕಠಿಣವಾಗಿರಬನಹುದು; ಬಹುಶಃ ಅದನ್ನು ಒಪ್ಪಿಕೊಳ್ಳಲು ನಮಗೆ ಮನಸ್ಸಿರುವದಿಲ್ಲ; ಬಹುಶಃ ಅದು ನಮಗೆ ಅಗತ್ಯವಿಲ್ಲವೆಂದು ನಮ್ಮ ಅನಿಸಿಕೆಯಾಗಿರಬಹುದು; ಅಥವಾ ಬಹುಶಃ ನಾವು ಅದನ್ನು ಕ್ರಿಯೆಯಲ್ಲಿ

ಮಾಡುವದಕ್ಕಾಗದಷ್ಟು ಸೋಮಾರಿಗಳು ಆಗಿರಬಹುದಾಗಿದೆ. ಕೆಲವು ಸಾರಿ ನಾವು ಒಂದು ಸತ್ಯವನ್ನು ತಿಳಿಯುವದೆಂದರೆ ಆ ಸತ್ಯವನ್ನು ಸಂಪೂರ್ಣವಾಗಿ ಅನ್ವಯಿಸಿಕೊಳ್ಳುವದು ಎಂದು ಭಾವಿಸುತ್ತೇವೆ.

ಕಾರಣವು ಏನೇ ಆಗಿರಬಹುದು, ದೇವರ ವಾಕ್ಯದಿಂದ ಬೆಲೆಯುಳ್ಳ ಬೋಧನೆಯನ್ನು ಪಡೆದುಕೊಂಡು ಬಳಿಕ ಅದನ್ನು ಪಕ್ಕಕ್ಕೆ ಎತ್ತಿ ಇಡುವದಾದರೆ ಮತ್ತು ಅದನ್ನು ಕೈಕೊಂಡು ನಡೆಯದಿರುವದಾದರೆ ಅದು ಎಷ್ಟು ವ್ಯರ್ಥವಾದದ್ದು! ಅದು ಸಂಭವಿಸುವದಾದಲ್ಲಿ, ಬೋಧಕರು ನಮಗೆ ನಮ್ಮ ಬೋಧನೆಯನ್ನು ನೆನಪಿಸಬೇಕು ಮತ್ತು ಅದರಂತೆಯೇ ನಾವು ಜೀವಿಸಬೇಕೆಂಬುದನ್ನು ನಮಗೆ ಹೇಳಬೇಕು. ನಾವು ನಿರಂತರವಾಗಿ ದೇವರು ಏನು ಹೇಳುತ್ತಾನೆಂಬುದನ್ನು ನೆನಪಿಗೆ ತಂದುಕೊಳ್ಳಬೇಕು-ಮತ್ತು ಅದನ್ನು ಕಾರ್ಯರೂಪದಲ್ಲಿ ಮಾಡಬೇಕು!

*ಅನೈತಿಕತೆಯಿಂದ ದೂರವಿರಿ (4:3).* 3ನೇ ವಚನವು "ಶುದ್ಧೀಕರಣ" ಮತ್ತು "ಲೈಂಗಿಕ ಅನೈತಿಕತೆ" ನಡುವಿನ ವ್ಯಾಪಕವಾದ ವಿರುದ್ಧತೆಯ ಮೇಲೆ ಗಮನವನ್ನು ಹರಿಸುತ್ತದೆ. ಪರಿಶುದ್ಧಗೊಳಿಸಲ್ಪಟ್ಟ ವ್ಯಕ್ತಿಯು ದೇವರ ಬಳಕೆಗಾಗಿ, ದೇವರಿಗೆ ಮೆಚ್ಚಿಕೆಯಾದದ್ದನ್ನು ಮಾಡುವದಕ್ಕಾಗಿ ಕಾಯ್ದಿರಿಸಲ್ಪಟ್ಟವನಾಗಿರುತ್ತಾನೆ. ಲೈಂಗಿಕವಾಗಿ ಅನೈತಿಕನಾದ ವ್ಯಕ್ತಿಯು ತನ್ನ ಲೈಂಗಿಕ ದಾಹವನ್ನು ತಣಿಸಿಕೊಳ್ಳುತ್ತಾನೆ ಯಾಕೆಂದರೆ ಅದು ಆತನಿಗೆ ಮೆಚ್ಚಿಕೆಯಾಗಿರುತ್ತದೆ. ಶುದ್ಧೀಕರಣವನ್ನು ವಿಶೇಷ ಬಳಕೆಗಾಗಿ ಪ್ರತ್ಯೇಕಿಸಲ್ಪಡುವದು ಅಥವಾ ಕಾಯ್ದಿರಿಸಲ್ಪಡುವದು ಎಂದು ಬಣ್ಣಿಸಬಹುದು. ದೇವರಿಗೋಸ್ಕರ ಪ್ರತ್ಯೇಕಿಸಿ ಇಡಲ್ಪಟ್ಟದ್ದನ್ನು ಬೈಬಲಿನಲ್ಲಿ "ಪರಿಶುದ್ಧ" ಎಂದು ಬಣ್ಣಿಸಲಾಗಿರುತ್ತದೆ. ದೇವಜನರು ದೇವರ ದಾರಿಯಲ್ಲಿ ಬಳಸಲ್ಪಡುವದಕ್ಕಾಗಿ ಪ್ರತ್ಯೇಕಿಸಿಡಲ್ಪಟ್ಟಿದ್ದಾರಾದ್ದರಿಂದ, ಅವರು ಪರಿಶುದ್ಧ ಜನರು ಅಥವಾ "ದೇವಜನರು" ಆಗಿದ್ದಾರೆ. ಹೊಸ ಒಡಂಬಡಿಕೆಯಲ್ಲಿನ "ಶುದ್ಧೀಕರಣ," "ದೇವಜನರು," ಮತ್ತು "ಪರಿಶುದ್ಧ" ಎಂಬುದಕ್ಕಿರುವ ಪದಗಳು ಗ್ರೀಕ್‌ನ ಒಂದೇ ಮೂಲಭೂತ ಪದದಿಂದ ಬಂದವುಗಳಾಗಿವೆ ಮತ್ತು ಒಂದೇ ಯೋಚನೆಯನ್ನು ಹೊಂದಿರುವವುಗಳಾಗಿವೆ.

ವಿವಿಧ ಸಾಮಗ್ರಿಗಳನ್ನು ವಿಶೇಷ ಬಳಕೆಗಾಗಿ ಇಟ್ಟುಕೊಳ್ಳುವದು ನಮಗೆ ರೂಢಿಯಾಗಿರುತ್ತದೆ. ಮೇಜಿನ ಮೇಲೆ ಹಾಕುವ ಬಟ್ಟೆಯನ್ನು ಕೇವಲ ಆ ಉದ್ದೇಶಕ್ಕಾಗಿ ಮಾತ್ರವೇ ಕಾಯ್ದಿರಿಸಲ್ಪಟ್ಟಿರುತ್ತದೆ; ನಾವು ಅದನ್ನು ನೆಲವನ್ನು ಶುಚಿಮಾಡುವದಕ್ಕೆ ಅಥವಾ ಶೂಗಳನ್ನು ಒರೆಸುವದಕ್ಕೆ ಬಳಸುವದಿಲ್ಲ. ಅದೇ ರೀತಿಯಲ್ಲಿಯೇ, ದೇವರು ನಿರ್ದಿಷ್ಟವಾಗಿ ಹೇಳಿದ ಪ್ರಕಾರ ನಮ್ಮನ್ನು ವಿಶೇಷ ಬಳಕೆಗೋಸ್ಕರ ಪ್ರತ್ಯೇಕಿಸಿಕೊಳ್ಳಬೇಕೆಂದು ಆತನು ಬಯಸುತ್ತಾನೆ. ನಮ್ಮ ಲೈಂಗಿಕ ಜೀವಿತಗಳು ಸಹ ವಿಶೇಷ ಬಳಕೆಗಾಗಿ-ವಿವಾಹದಲ್ಲಿ-ಕಾಯ್ದಿರಿಸಲ್ಪಟ್ಟಿರುತ್ತವೆ.

ಕೆಲವರು ಲೈಂಗಿಕ ಸಂಬಂಧಗಳೇ ಸ್ವತಃ ತಪ್ಪಾದವುಗಳೆಂದು ಭಾವಿಸಿಕೊಂಡಿರುತ್ತಾರೆ ಮತ್ತು ಆ ಕಾರಣದಿಂದ, ಏಕಾಂಗಿಯಾಗಿ ಉಳಿಯುವದು ಒಂದು ಹೆಚ್ಚು ಪವಿತ್ರವಾದ ಸ್ಥಿತಿಯಾಗಿರುತ್ತದೆಂದು ಕಲಿಸಿರುತ್ತಾರೆ. ಈ ಕಾರಣಕ್ಕಾಗಿ ಅವರು ಕೆಲವರಿಗೆ ಅಥವಾ ಎಲ್ಲರಿಗೂ ವಿವಾಹವನ್ನು ನಿಷಿದ್ಧಗೊಳಿಸಿರುತ್ತಾರೆ. ಜನರು

ನಂಬಿಕೆಯನ್ನು ಬಿಟ್ಟು ಭ್ರಷ್ಟರಾಗುತ್ತಿದ್ದಾರೆಂಬುದಕ್ಕೆ ಒಂದು ಸೂಚನೆಯು ಏನೆಂದರೆ ಜನರು "ಮದುವೆ ಮಾಡಿಕೊಳ್ಳಬಾರದು" ಎಂದು ಹೇಳುವದೇ ಎಂಬದಾಗಿ ದೇವರ ವಾಕ್ಯವು ಕಲಿಸುತ್ತದೆ (1 ತಿಮೊಥೆ 4:1-3). ದೇವರ ಬೋಧನೆಯೇನೆಂದರೆ "ದಾಂಪತ್ಯವು ಮಾನ್ಯವಾದದ್ದೆಂದು ಎಲ್ಲರೂ ಎಣಿಸಬೇಕು; ಗಂಡಹೆಂಡರ ಸಂಬಂಧವು ನಿಷ್ಕಳಂಕವಾಗಿರಬೇಕು. ಜಾರರಿಗೂ ವ್ಯಭಿಚಾರಿಗಳಿಗೂ ದೇವರು ನ್ಯಾಯತೀರಿಸುವನೆಂದು ತಿಳುಕೊಳ್ಳಿರಿ" ಎಂಬದೆ (ಇಬ್ರಿಯ 13:4). ಲೈಂಗಿಕ ಸಂಬಂಧಗಳು ಬೆಲೆಯುಳ್ಳವುಗಳು ಮತ್ತು ವಿವಾಹದಲ್ಲಿ ದೇವರಿಂದ ಮಾನ್ಯ ಮಾಡಲ್ಪಡುತ್ತವೆ. ಲೈಂಗಿಕ ಚಟುವಟಿಕೆಗಳನ್ನು ನಾವು ದಾಂಪತ್ಯದೊಳಗೆ ಇಟ್ಟುಕೊಳ್ಳುವಾಗ, ನಾವು ದೇವರ ಮಾರ್ಗದ ಜೀವಿತಕ್ಕಾಗಿ ಪ್ರತಿಷ್ಠಿಸಲ್ಪಟ್ಟವರಾಗುತ್ತೇವೆ.

*ಪರಿಶುದ್ಧರಾಗಿರುವದಕ್ಕೆ ಕಲಿತುಕೊಳ್ಳಿರಿ (4:4).* ನಮ್ಮ ಸರಿಯಾದ ದಾರಿಯಲ್ಲಿ ಸರಿಯಾದ ಉದ್ದೇಶಕ್ಕೆ ಹೇಗೆ ಬಳಸಿಕೊಳ್ಳಬೇಕೆಂಬುದನ್ನು ಕಲಿತುಕೊಳ್ಳುವದು "ಸ್ವಾಭಾವಿಕ" ಕ್ರಿಯೆಯಾಗಿರುವದಿಲ್ಲ. ಅದನ್ನು ಹೇಗೆ ಮಾಡತಕ್ಕದ್ದೆಂಬುದನ್ನು ನಾವು ಕಲಿತುಕೊಳ್ಳಬೇಕಾದ ಅಗತ್ಯವಿರುತ್ತದೆ (4:4).

ನಾವು ನಮ್ಮ ದೇಹಗಳನ್ನು ದೇವರಿಗೆ ಘನವನ್ನುಂಟು ಮಾಡುವಂಥ ಒಂದು ಬಳಕೆಗಾಗಿ ಪ್ರತ್ಯೇಕಿಸಿಟ್ಟುಕೊಳ್ಳಲು ಬಯಸುವದಾದರೆ, ದೇವರು ನಮ್ಮಿಂದ ಬಯಸುವದನ್ನು ನಾವು ಮಾಡತಕ್ಕದ್ದಾಗಿರುತ್ತದೆ. ಕೆಲವು ಜನರು ತಾವು ಏನು ಇಚ್ಛಿಸುತ್ತಾರೆಂಬುದರ ಪ್ರಕಾರವಾಗಿ, ಬೇರೆಯವರು ಏನು ಮಾಡುತ್ತಿದ್ದಾರೆಂಬುದರ ಪ್ರಕಾರವಾಗಿ, ಅಥವಾ ಸಮುದಾಯದಲ್ಲಿನ ಮನೋಭಾವಗಳಿಂದ ತಮ್ಮ ಲೈಂಗಿಕ ಚಟುವಟಿಕೆಯು ಮಾರ್ಗದರ್ಶಿಸಲ್ಪಡುವಂತೆ ಅನುಮತಿಸುತ್ತಾರೆ. ನಾವು ಕೇವಲ ನಮಗೆ ಮಾಡಬೇಕು ಅನ್ನಿಸುವ ರೀತಿಯಲ್ಲಿ ಮಾಡುವದಾದರೆ ಅಥವಾ ಬೇರೆಯವರ ಮಾದರಿಗಳನ್ನು ಅನುಸರಿಸುವದಾದರೆ, ನಾವು ಕ್ರಮೇಣದಲ್ಲಿ ದೇವರ ದಾರಿಗೆ ವಿರುದ್ಧವಾಗಿ ಸಾಗುತ್ತೇವೆ. ದೇವರು ಏನು ಬಯಸುತ್ತಾನೋ ಅದನ್ನೇ ನಾವು ಅನುಸರಿಸಬೇಕು, ನಾವು ನಮ್ಮ ಇಚ್ಛೆಗಳನ್ನು ನಿಗ್ರಹಿಸಿಕೊಳ್ಳಬೇಕಾಗಿ ಅಥವಾ ಬದಲಾಯಿಸಿಕೊಳ್ಳಬೇಕಾಗಿ ಬಂದಾಗ್ಯೂ, ಮತ್ತು ಅದು ಬೇರೆಯವರು ಮಾಡುತ್ತಿರುವದಕ್ಕೆ ಅಥವಾ ಅಂಗೀಕರಿಸಿಕೊಂಡಿರುವಂಥದ್ದಕ್ಕೆ ವಿರುದ್ಧವಾಗಿದ್ದಾಗ್ಯೂ ನಾವು ದೇವರು ಬಯಸುವದನ್ನೇ ಮಾಡಬೇಕು.

*ಕಾಮಾಭಿಲಾಷೆಯಿಂದ ದೂರವಿರಿ (4:5).* ಜನರನ್ನು ಭಕ್ತಿಹೀನವಾದ ಲೈಂಗಿಕ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವಂಥದ್ದು ಯಾವದು? ಅದು ಬೈಬಲ್ "ಕಾಮಾಭೀಲಾಷೆ" ಎಂದು ಕರೆಯುವ ಬಯಕೆಯೇ ಆಗಿದೆ. ಇದು ಉತ್ಕಟವಾದ ಲೈಂಗಿಕ ಆಸೆಗಳನ್ನು ಸೂಚಿಸುತ್ತದೆ. ಇವುಗಳು ಒಬ್ಬ ವ್ಯಕ್ತಿಯ ಕ್ರಿಯೆಗಳಿಗೆ ಪ್ರೇರಕಶಕ್ತಿಯಾಗುವದಾದರೆ, ಆತನು ಈ ಇಚ್ಛೆಗಳನ್ನು ಅನುಸರಿಸುವವನಾಗುವನೇ ಹೊರತು ದೇವರ ಚಿತ್ತವನ್ನಲ್ಲ (4:5). ಅನ್ಯಜನರು ತಮ್ಮ ಕಾಮಾಭಿಲಾಷೆಯನ್ನು ತೃಪ್ತಿಪಡಿಸಿಕೊಳ್ಳುವದಕ್ಕೆ ಲೈಂಗಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಅವರು ಈ ಚಟುವಟಿಕೆಗಳನ್ನು ತಮ್ಮ ಆರಾಧನೆಯ ಭಾಗವನ್ನಾಗಿ ಸಹ ಮಾಡಿದರು ಮತ್ತು

ದೇವದಾಸಿಯರನ್ನು (ದೇವಸ್ಥಾನದಲ್ಲಿನ ವ್ಯಭಿಚಾರಿಗಳು) ಹೊಂದಿದ್ದರು. ಈ ವಿಗ್ರಹಾರಾಧಕ ಜನರು ತಮ್ಮ ದೇವರುಗಳನ್ನು ಅವರಂತೆಯೇ ಇರುವವರೆಂದು ಭಾವಿಸಿಕೊಂಡಿದ್ದರು; ಅವರು ಅವುಗಳನ್ನು ಜಗಳವನ್ನು ಮಾಡುವ, ಪ್ರೇಮದಲ್ಲಿ ಬಿದ್ದ, ಮತ್ತು ಮಾನವರ ರೀತಿಯಲ್ಲಿಯೇ ಒಬ್ಬರೊಬ್ಬರಿಗೆ ವಂಚನೆ ಮಾಡಿದಂಥ ಒಂದು ಗುಂಪು ಜೀವಿಗಳೆಂದು ಭಾವಿಸಿಕೊಂಡಿದ್ದರು. ದೇವರುಗಳ ಚಟುವಟಿಕೆಗಳನ್ನು ಅನುಕರಣ ಮಾಡುವ ಮೂಲಕ ತಾವು ಅವುಗಳನ್ನು ಮೆಚ್ಚಿಸುತ್ತಿದ್ದೇವೆಂದು ಅವರು ಎಣಿಸಿಕೊಂಡಿದ್ದರು.

ಈ ಥೆಸಲೋನಿಕದವರು “ವಿಗ್ರಹಗಳನ್ನು ಬಿಟ್ಟುಬಿಟ್ಟು . . . ಜೀವವುಳ್ಳ ಸತ್ಯದೇವರ” ಕಡೆಗೆ ತಿರುಗಿಕೊಂಡಾಗ (1:9), ದೇವರು ಏನು ಬಯಸುತ್ತಾನೆಂಬುದನ್ನು ತಿಳುಕೊಳ್ಳಬೇಕಿತ್ತು ಮತ್ತು ಅದಕ್ಕನುಗುಣವಾಗಿ ತಮ್ಮ ಲೈಂಗಿಕ ಇಚ್ಛೆಗಳನ್ನು ನಿಯಂತ್ರಿಸಿಕೊಳ್ಳಲು ಕಲಿತುಕೊಳ್ಳಬೇಕಿತ್ತು. ನಾವು ದೇವರ-ಆರಾಧಕರಾಗಿರಲು ಬಯಸುವದಾದರೆ, ನಮ್ಮ ಜೀವಿತಗಳಿಗೆ ದೇವರ ಚಿತ್ತವೇನೆಂಬುದನ್ನು ನಾವು ಕೈಕೊಂಡು ನಡೆಯಬೇಕಾಗಿರುತ್ತದೆ.

ಲೈಂಗಿಕ ಬಯಕೆಗಳನ್ನು ಹೇಗೆ ನಿಗ್ರಹಿಸಿಕೊಳ್ಳಬಹುದು? ಪೌಲನು ಯುವ ಪ್ರಸಂಗಿಯಾದ ತಿಮೊಥೆಯನಿಗೆ ಒಬ್ಬ ವ್ಯಕ್ತಿಯು “ಉತ್ತಮವಾದ ಬಳಕೆಗೆ ಯೋಗ್ಯನಾಗಿರುವನು; ಅವನು ದೇವರ ಸೇವೆಗೆ ಪ್ರತಿಷ್ಠಿತನಾಗಿಯೂ ಯಜಮಾನನಿಗೆ ಉಪಯುಕ್ತನಾಗಿಯೂ ಸಕಲ ಸತ್ಕ್ರಿಯೆಗಳನ್ನು ಮಾಡುವದಕ್ಕೆ ಸಿದ್ಧನಾಗಿಯೂ” ಇರಬಲ್ಲನು ಎಂದು ಹೇಳಿದನು (2 ತಿಮೊಥೆ 2:21). ಆತನು ಅವನನ್ನು “ನೀನು ಯೌವನದ ಇಚ್ಛೆಗಳಿಗೆ ದೂರವಾಗಿರು; ನೀತಿ ವಿಶ್ವಾಸ ಪ್ರೀತಿ ಮತ್ತು ಸಮಾಧಾನವನ್ನು ಸಂಪಾದಿಸಿಕೊಳ್ಳುವದಕ್ಕೆ ಶುದ್ಧ ಹೃದಯವುಳ್ಳವರಾಗಿ ಕರ್ತನನ್ನು ಬೇಡಿಕೊಳ್ಳುವವರ ಸಂಗಡ ಪ್ರಯಾಸ ಪಡು” ಎಂದು ಬೇಡಿಕೊಂಡನು (2 ತಿಮೊಥೆ 2:22).

ಈ ವಚನಗಳು ಭಕ್ತಿಹೀನವಾದ ಲೈಂಗಿಕ ಬಲೆಗಳಿಂದ ತಪ್ಪಿಸಿಕೊಳ್ಳಲು ಕೆಲವು ಉಪಾಯಗಳನ್ನು ಹೊಂದಿರುತ್ತವೆ: (1) ನಾವು ಯೋಗ್ಯರಾಗಿ, ಪ್ರತಿಷ್ಠಿತರಾಗಿ ಮತ್ತು ದೇವರ ಸೇವೆಗೆ ಉಪಯುಕ್ತರಾಗಿ ಇರಬಲ್ಲೆವು ಮತ್ತು ಆ ವಿಧವಾದ ಜೀವಿತವನ್ನು ಜೀವಿಸುವದಕ್ಕೆ ನಿಷ್ಕರ್ಷೆ ಮಾಡಿಕೊಳ್ಳಬಲ್ಲೆವು ಎಂಬುದನ್ನು ನಾವು ಒಪ್ಪಿಕೊಳ್ಳತಕ್ಕದ್ದು. (2) ನಾವು ಯೌವನದ ಇಚ್ಛೆಗಳ ನಿಯಂತ್ರಣಕ್ಕೊಳಪಡಬಹುದಾದ ಪರಿಸ್ಥಿತಿಗಳನ್ನು ಬಿಟ್ಟು ನಾವು “ದೂರವಿರಬೇಕು.” (3) ನಾವು ನೀತಿ, ಪ್ರೀತಿ, ಮತ್ತು ಸಮಾಧಾನಗಳನ್ನು ಅಭಿವೃದ್ಧಿ ಪಡಿಸುವ ಚಟುವಟಿಕೆಗಳಲ್ಲಿ ಭಾಗಿಯಾಗಿರಬೇಕು. (4) ದೇವರನ್ನು ಪ್ರಾಮಾಣಿಕವಾಗಿಯೂ ಶುದ್ಧ ಹೃದಯಗಳಿಂದಲೂ ಸೇವಿಸುವದಕ್ಕೆ ಬಯಸುವವರ ಸಂಗಡ ಈ ಸಮಗ್ರವಾದ ಚಟುವಟಿಕೆಗಳಲ್ಲಿ ನಮ್ಮನ್ನು ತೊಡಗಿಸಿಕೊಳ್ಳಬೇಕು.

*ಬೇರೆಯವರದ್ದನ್ನು ವಂಚಿಸಿ ಅಪಹರಿಸಬೇಡಿರಿ (4:6).* ಒಬ್ಬನು ತನ್ನನ್ನು ಲೈಂಗಿಕ ಅನೈತಿಕತೆಯಲ್ಲಿ ತೊಡಗಿಸಿಕೊಳ್ಳುವಾಗ, ಆತನು ದೇವರ ಚಿತ್ತಕ್ಕೆ ವಿರುದ್ಧವಾಗಿ ಹೋಗುವವನಾಗಿದ್ದಾನೆ-ಆದರೆ ಆತನು ಬೇರೆ ವ್ಯಕ್ತಿಯನ್ನು ವಂಚಿಸಿ ಅಪಹರಿಸುವವನು ಸಹ ಆಗಿರುತ್ತಾನೆ (ವ. 6). ಆತನು ಬೇರೆಯವರನ್ನು ಅನ್ಯಾಯವಾಗಿ ದುರ್ಬಳಕೆ ಮಾಡಿಕೊಳ್ಳುತ್ತಾನೆ. ಸಮ್ಮತಿಯನ್ನು ವ್ಯಕ್ತಪಡಿಸುವ ಇಬ್ಬರು ಪ್ರಾಯಸ್ಥರ ನಡುವಿನ

ಲೈಂಗಿಕ ಆಚಾರಗಳು-ಈ ಆಚಾರಗಳನ್ನು ಬೈಬಲ್ ಹಾದರ, ವ್ಯಭಿಚಾರ, ಅಥವಾ ಸಲಿಂಗಕಾಮ ಎಂದು ಕರೆಯುತ್ತದೆ-ಸರಿಯಾದವುಗಳು, ಯಾಕೆಂದರೆ ಕೊಲೆ ಅಥವಾ ಕಳ್ಳತನದಂತಲ್ಲದೆ, ಅವುಗಳು ಯಾವದೇ ವ್ಯಕ್ತಿಯ ಚಿತ್ತಕ್ಕೆ ವಿರುದ್ಧವಾಗಿ ಮಾಡಿದವುಗಳಾಗರುವದಿಲ್ಲ ಎಂದು ಕೆಲವರು ವಾದಿಸುತ್ತಾರೆ.

ದೇವರ ವಾಕ್ಯದ ಪ್ರಕಾರವಾಗಿ, ಈ ಪಾಪಗಳ ನಿಮಿತ್ತವಾಗಿ ಬೇರೆಯವರು ಬಾಧೆಯನ್ನನುಭವಿಸುತ್ತಾರೆ. ಅವುಗಳು ಸ್ಪಷ್ಟವಾಗಿ ಒಬ್ಬನ ಮನಸ್ಸಾಕ್ಷಿಗೆ ಹಾನಿಯನ್ನುಂಟು ಮಾಡಬಲ್ಲವು, ಆತನ ಕುಟುಂಬದೊಂಗಿರುವ ಅವನ ಸಂಬಂಧವನ್ನು ಕೇಡಿಸಬಲ್ಲವು, ಮತ್ತು ದೇವರೊಂದಿಗೆ ಆತನಿಗಿರುವ ಸಂಬಂಧಕ್ಕೆ ಹಾನಿಯನ್ನುಂಟು ಮಾಡಬಲ್ಲವು. ಈ ಕೆಟ್ಟ ಪರಿಣಾಮಗಳು ಬಹಳ ಗಂಭೀರವಾಗಿರಬಲ್ಲವು ಮತ್ತು ಬಹಳ ವರ್ಷಗಳ ಕಾಲ-ಬಹುಶಃ ಒಂದು ಜೀವಿತಕಾಲವೆಲ್ಲಾ-ಉಳಿಯಬಲ್ಲವು.

ವಿವಾಹಕ್ಕೆ ಮುನ್ನ ಒಂದು ಪರೀಕ್ಷಿಸಿ ನೋಡುವ ಕಾಲವಾಗಿ ಇಬ್ಬರು ಲೈಂಗಿಕ ಸಂಗಾತಿಗಳಾಗಿ ಒಟ್ಟಿಗೆ ಜೀವಿಸುವದರಿಂದ ಅವರು ಒಬ್ಬರೊಂದಿಗೊಬ್ಬರು ಹೊಂದಿಕೊಳ್ಳುವರೋ ಎಂಬುದನ್ನು ತಿಳುಕೊಳ್ಳಲು ಸಹಾಯಕವಾಗುತ್ತದೆಂದು ಕೆಲವರು ಭಾವಿಸುತ್ತಾರೆ. ಅದು ವಾಸ್ತವದಲ್ಲಿ ಸಮರ್ಪಣೆಯಿಲ್ಲದೆ-ದೇವರಿಗೆ ಅಥವಾ ಒಬ್ಬನ ಸಂಗಾತಿಗೆ-ಲೈಂಗಿಕತೆಯಲ್ಲಿ ತೊಡಗಿಸಿಕೊಳ್ಳುವದನ್ನು ಮನ್ನಿಸುವದಾಗಿದೆ ಮತ್ತು ಹೀಗೆ ಸಂಬಂಧವನ್ನು ಅಸ್ಥಿರಗೊಳಿಸುತ್ತದೆ. ಇದು ಒಂದು ಸ್ಥಿರವಾದ, ಸಮರ್ಪಣೆಯುಳ್ಳ, ದೇವರಿಂದ ಅನುಮೋದಿಸಲ್ಪಟ್ಟ ಸಂಬಂಧಕ್ಕೆ ಹೋಲಿಸಿದರೆ ತೀಕ್ಷ್ಣವಾಗಿ ವಿರುದ್ಧವಾದದ್ದಾಗಿರುತ್ತದೆ. ಪಾಪವು ಯಾವಾಗಲೂ ಬೇರೆಯವರಿಗೆ ಹಾನಿಯನ್ನುಂಟು ಮಾಡುತ್ತದೆ. ಈ ವಿಧದಲ್ಲಿ ನಾವು ಬೇರೆಯವರ ಜೀವಿತಗಳನ್ನು ಕೇಡಿಸುವದಾದರೆ ದೇವರು ನಮ್ಮನ್ನು ಹೊಣೆಯಾಗಿಸುತ್ತಾನೆಂಬದಾಗಿ 6ನೇ ವಚನವು ಕಲಿಸುತ್ತದೆ.

ವಿವಾಹದಿಂದ ಗಂಡ ಮತ್ತು ಹೆಂಡತಿಯ ನಡುವೆ ಸಮಸ್ಯೆಗಳನ್ನು ತರುತ್ತದೆ, ಆದ್ದರಿಂದ ವಿವಾಹದ ಸಮರ್ಪಣೆಯನ್ನು ಮಾಡದಿರುವದೇ ಉತ್ತಮವೆಂದು ಕೆಲವರು ಹೇಳಿಕೊಳ್ಳುತ್ತಾರೆ. ಥೆಸಲೋನಿಕದಲ್ಲಿನ ಜನರು ಕ್ರೈಸ್ತರಾಗುವ ಬಗ್ಗೆ ಯೋಚಿಸುತ್ತಿರುವಾಗ, ಸುವಾರ್ತೆಗೆ ವಿರೋಧವು ಉಂಟಾದ ರೀತಿಯಲ್ಲಿಯೇ, ತಾವು ಪರಿವರ್ತನೆಗೊಳ್ಳುವಾಗ ಸಹ ವಿರೋಧವು ಉಂಟಾಗುವದೆಂಬುದನ್ನು ತಿಳಿದವರಾಗಿ ಇದೇ ರೀತಿಯ ವಾದವನ್ನು ಅವರು ಬಳಸಿರಬಹುದಾಗಿದೆ (1:6; 2:14-16).

ಹಾಗಾದರೆ ಪ್ರಶ್ನೆಯು, “ಈ ಕ್ರಿಯೆಯು ಕೆಲವು ಸಮಸ್ಯೆಗಳನ್ನು ಮತ್ತು ತೊಂದರೆಗಳನ್ನು ತರುವದೋ?” ಎಂಬುದಾಗಿರುವದಿಲ್ಲ ಆದರೆ “ಇದು ದೇವರು ಬಯಸುವಂತಹ ಕ್ರಿಯೆಯಾಗಿರುತ್ತದೋ?” ಎಂಬದೇ. ಅದು ದೇವರು ಬಯಸುವಂತಹ ಕಾರ್ಯವಾಗಿದ್ದಲ್ಲಿ, ನಾವು ಅದನ್ನು ಮಾಡತಕ್ಕದ್ದು-ಫಲಿತವು ಏನೇ ಆಗಿದ್ದರೂ ಸರಿಯೇ-ಪರಿಣಾಮಗಳನ್ನು ಜಯಿಸುವಂತೆ ಅಥವಾ ಸಹಿಸಿಕೊಳ್ಳುವಂತೆ ದೇವರು ನಮಗೆ ಸಹಾಯ ಮಾಡುವನೆಂದು ತಿಳಿದವರಾಗಿ ಅದನ್ನು ಮಾಡಬೇಕು. ದೇವರು “ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುವಂತೆ” ಮಾಡುತ್ತಾನೆಂದು ಬಲ್ಲೆವು (ರೋಮಾ 8:28).

*ದೇವರ ಪಕ್ಷದಲ್ಲಿರುವದಕ್ಕೆ ತೀರ್ಮಾನಿಸಿಕೊಳ್ಳಿರಿ (4:7, 8).* ದೇವರು ನಮ್ಮನ್ನು ಒಂದು ಕಾರಣಕ್ಕಾಗಿ ಕರೆದಿದ್ದಾನೆ. ದೇವರು ನಮ್ಮನ್ನು ಹೇಗೆ ಕರೆಯುತ್ತಾನೆ? ಯೇಸುವಿನ ಕುರಿತ ಶುಭವರ್ತಮಾನ, ಸುವಾರ್ತೆಯ ಮೂಲಕವಾಗಿ ಕರೆಯುತ್ತಾನೆ. ಪೌಲನು ಹೀಗೆ ಬರೆದನು, "ನೀವು ಹೀಗೆ ರಕ್ಷಿಸಲ್ಪಟ್ಟು ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರಭಾವವನ್ನು ಸಂಪಾದಿಸಿಕೊಳ್ಳಬೇಕೆಂದು ದೇವರು . . . ಸುವಾರ್ತೆಯ ಮೂಲಕವಾಗಿ ನಿಮ್ಮನ್ನು ಕರೆದನು" (2 ಥೆಸಲೋನಿಕ 2:14). ಸುವಾರ್ತೆಯು ಸಾರಲ್ಪಡುವಾಗ, ದೇವರು ಜನರನ್ನು ತನ್ನ ಬಳಿಗೆ ಕರೆಯುವವನಾಗಿದ್ದಾನೆ, ಯಾಕೆಂದರೆ ಆತನು ಕ್ರಿಸ್ತನಲ್ಲಿ ತನ್ನ ಪ್ರಭಾವವನ್ನು ಅವರೊಂದಿಗೆ ಹಂಚಿಕೊಳ್ಳಲು ಬಯಸುತ್ತಾನೆ. ದೇವರು ಜನರನ್ನು ಸುವಾರ್ತೆಯ ಮೂಲಕ ಕರೆಯುತ್ತಾನಾದ್ದರಿಂದ, ಆತನು ಅವರನ್ನು ಶಕುನಗಳ, ದರ್ಶನಗಳ, ಅಥವಾ ಸೂಚನೆಗಳ ಮೂಲಕ ಕರೆಯುವದಿಲ್ಲ ಎಂಬುದನ್ನು ನಾವು ಬಲ್ಲವರಾಗಿದ್ದೇವೆ. ಸುವಾರ್ತೆಗೆ ಪರ್ಯಾಯವಾದದ್ದು ಯಾವದೂ ಇಲ್ಲ.

ದೇವರು ನಮ್ಮನ್ನು ನಮ್ಮ ಪ್ರಯೋಜನಕ್ಕಾಗಿ ಕರೆದಿದ್ದಾನೆ. ದೇವರು ಎಲ್ಲಾ ಯೋಜನೆಯನ್ನು ಮಾಡಿಟ್ಟುಕೊಂಡಿದ್ದಾನೆಂದು ನಾವು ಯೋಚಿಸಬಹುದು, ಮತ್ತು ಅದರಲ್ಲಿ ಹೇಗಾದರೂ ಸರಿಹೊಂದಿಕೊಳ್ಳುವದಕ್ಕೆ ಪ್ರಯತ್ನಿಸಬಹುದು-ಅದು ನಮಗೆ ಒಳ್ಳೇದಾಗಿದ್ದರೂ ಸರಿಯೆ ಅಥವಾ ಅಲ್ಲದಿದ್ದರೂ ಸರಿಯೇ. ವಿಗ್ರಹಾರಾಧಕ ಜನರು ತಮ್ಮ ದೇವರುಗಳನ್ನು ಬಲಿಷ್ಠ ಜೀವಿಗಳೆಂದೂ ತಾವು ಅವುಗಳನ್ನು ಮೆಚ್ಚಿಸುವದಾದರೆ ಯಾವದೋ ಆಶೀರ್ವಾದವನ್ನು ದಯಪಾಲಿಸುವವೆಂದು ನಂಬಿದ್ದರು.

ದೇವರು ಯೋಜನೆಗಳನ್ನು ಹೊಂದಿದ್ದಾನೆಂಬುದು ನಿಜವೇ ಆದರೂ, ಆತನು ಅವುಗಳನ್ನು ನಮ್ಮ ಪ್ರಯೋಜನಕ್ಕೋಸ್ಕರ ಮಾಡಿದನು ಯಾಕೆಂದರೆ ಆತನು ನಮಗೆ ಅತ್ಯುತ್ತಮವಾದದ್ದನ್ನೇ ಬಯಸುವವನಾಗಿದ್ದಾನೆ. ನಾವು ದೇವರಿಗೆ ಪ್ರತ್ಯುತ್ತರವನ್ನು ತೋರುವದಕ್ಕೆ ಮುನ್ನವೇ ಆತನು ನಮಗೆ ಅನೇಕ ಆಶೀರ್ವಾದಗಳನ್ನು ಅನುಗ್ರಹಿಸಿದನು, ಮತ್ತು ನಾವು ಸದಾಕಾಲವೂ ಆತನ ಮಿತ್ರರಾಗಿರಬೇಕೆಂದು ಆತನು ಬಯಸುತ್ತಾನೆ. "ಸ್ವಂತ ಮಗನನ್ನು ಉಳಿಸಿಕೊಳ್ಳದೆ ಆತನನ್ನು ನಮ್ಮೆಲ್ಲರಿಗೋಸ್ಕರ ಒಪ್ಪಿಸಿ ಕೊಟ್ಟನಲ್ಲಾ; ಮಗನನ್ನು ಕೊಟ್ಟ ಮೇಲೆ ಸಮಸ್ತವನ್ನೂ ನಮಗೆ ದಯಪಾಲಿಸದೆ ಇರುವನೇ?" (ರೋಮಾ 8:32). ನಾವು ಸೇವಿಸುವ ದೇವರು ಒಬ್ಬ ದಾರಾಳ ಮನಸ್ಸಿನವನು! ಆತನು ನಮ್ಮಿಂದ ಮಾಡಬೇಕೆಂದು ಕೇಳುವಂಥದ್ದು ನಮ್ಮ ಪ್ರಯೋಜನಾರ್ಥವಾಗಿಯೇ ಇರುತ್ತದೆಂದು ಖಚಿತವಾಗಿ ತಿಳಿಯಬಹುದು; ಆತನು ನಮಗಾಗಿ ಬಯಸುವಂಥದ್ದು ಅತ್ಯಂಥ ಉತ್ತಮವಾದದ್ದೇ ಆಗಿರುವದು.

ಶುದ್ಧೀಕರಣವು ನಮಗೋಸ್ಕರ ದೇವರ ಚಿತ್ತವಾಗಿದೆ (4:7, 8). ಆತನು ನಮ್ಮನ್ನು ಶುದ್ಧೀಕರಿಸಲು ಬಯಸುತ್ತಾನೆ, ಅಂದರೆ ಆತನು ನಮ್ಮನ್ನು ಒಂದು ವಿಶೇಷ ಉದ್ದೇಶಕ್ಕಾಗಿ ಪ್ರತ್ಯೇಕಿಸಿಡಲು, ಅಥವಾ ಪರಿಶುದ್ಧವಾಗಿರಲು ಬಯಸುತ್ತಾನೆ. ಒಂದಯ ಥೇಟರಿನಲ್ಲಿ ವಿಶೇಷವಾದ ಆಸನಗಳು ಪ್ರಾಮುಖ್ಯರಾದ ಜನರಿಗೋಸ್ಕರ "ಮೀಸಲಾಗಿ" ಇಡಲ್ಪಟ್ಟಿರುತ್ತವೆ. ಕ್ರೈಸ್ತರು ಅತ್ಯಂಥ ಪ್ರಾಮುಖ್ಯ ವ್ಯಕ್ತಿಗೋಸ್ಕರ-ಸ್ವತಃ ದೇವರಿಗಾಗಿ- "ಮೀಸಲಾಗಿ" ಇಡಲ್ಪಟ್ಟವರು!

ದೇವರು ನಮ್ಮನ್ನ ಕ್ರಿಸ್ತನಲ್ಲಿ ಶುದ್ಧೀಕರಿಸುವಾಗ, ನಾವು ದೇವರ ಪರಿಶುದ್ಧತೆಯಲ್ಲಿ ಪಾಲುಗಾರರಾಗುತ್ತೇವೆ ಮತ್ತು ಆತನೊಂದಿಗೆ ಅನ್ಯೋನ್ಯತೆಯನ್ನು ಹೊಂದಿಕೊಳ್ಳಬಲ್ಲೆವು. "ನಿಮ್ಮನ್ನು ಕರೆದಾತನು ಪರಿಶುದ್ಧನಾಗಿರುವ ಪ್ರಕಾರವೇ ನೀವೂ ವಿಧೇಯರಿಗೆ ತಕ್ಕಂತೆ ನಿಮ್ಮ ಎಲ್ಲಾ ನಡವಳಿಕೆಯಲ್ಲಿ ಪರಿಶುದ್ಧರಾಗಿರಿ. ನಾನು ಪರಿಶುದ್ಧನಾಗಿರುವದರಿಂದ ನೀವೂ ಪರಿಶುದ್ಧರಾಗಿರಬೇಕು ಎಂದು ಬರೆದದೆಯಲ್ಲಾ" (1 ಪೇತ್ರ 1:15, 16).

ನಾವು ದೇವರ ಸಂಗಡ ಅನ್ಯೋನ್ಯತೆಯನ್ನು ಇಟ್ಟುಕೊಳ್ಳುವಾಗ, ನಾವು ಆ ಸಂಬಂಧದ ಪ್ರಯೋಜನಗಳನ್ನು ಹಂಚಿಕೊಳ್ಳಬಲ್ಲೆವು. ನಾವು ಕ್ರೈಸ್ತರಾಗುವಾಗ, ದೇವರು ತನಗೆ "ವಿಧೇಯರಾಗುವವರಿಗೆ ಕೊಡುವಂಥ" ಪವಿತ್ರಾತ್ಮನನ್ನು ನಮಗೆ ದಯಪಾಲಿಸಿದನು (ಅಪೊಸ್ತಲರ ಕೃತ್ಯಗಳು 5:32). ಈ ಪವಿತ್ರಾತ್ಮನನ್ನು "ನಮ್ಮ ಬಾಧ್ಯತೆಗೆ ಸಂಚಕಾರವಾಗಿ" ಕೊಡಲ್ಪಟ್ಟಿರುತ್ತಾನೆ (ಎಫೆಸ 1:14). ಖರೀದಿ ಮಾಡುವಾಗ ಕೊಡುವ ಒಂದು ಠೇವಣಿ ಅಥವಾ ಮುಂಗಡ ಹಣವು ಅನಂತರದಲ್ಲಿ ನಾವು ಪೂರ್ಣ ಹಣ ಸಂದಾಯ ಮಾಡುವ ಉದ್ದೇಶ ಹೊಂದಿದ್ದೇವೆಂಬುದನ್ನು ಸೂಚಿಸುವ ಒಂದು ಕರಾರು ಆಗಿ ಕಾರ್ಯಮಾಡುತ್ತದೋ ಹಾಗೆಯೇ, ದೇವರು ನಮ್ಮನ್ನು ನಿತ್ಯವಾಗಿ ಆಶೀರ್ವದಿಸುವದಕ್ಕೆ ಉದ್ದೇಶಿಸಿಸುತ್ತಾನೆಂಬುದನ್ನು ಸೂಚಿಸುವದಕ್ಕೆ ಪವಿತ್ರಾತ್ಮನು ನಮಗೆ ಅನುಗ್ರಹಿ ಸಲ್ಪಟ್ಟಿರುತ್ತಾನೆ.

ನಾವು ಪೂರ್ತಿಯಾಗಿ ಹಣ ಸಂದಾಯ ಮಾಡುತ್ತೇವೆಂಬುದನ್ನು ಯಾರಾದರೊಬ್ಬರು ಸಂಶಯಿಸುವದಾದರೆ, ಆತನು ನಮ್ಮ ಮುಂಗಡ ಹಣವನ್ನು ತಿರಸ್ಕರಿಸುವನು. ಅದೇ ರೀತಿಯಲ್ಲಿಯೇ, ಬಲಹೀನ ಕ್ರೈಸ್ತನೊಬ್ಬನು ತನ್ನೊಳಗಿರುವ ದೇವರ ಪವಿತ್ರಾತ್ಮನ ಪರಿಶುದ್ಧತೆಯನ್ನು ತಿರಸ್ಕರಿಸುವನೋ ಎಂಬ ರೀತಿಯಲ್ಲಿ ಜೀವಿಸುವಾಗ, ಭವಿಷ್ಯದಲ್ಲಿ ತನ್ನನ್ನು ಆಶೀರ್ವದಿಸುವನೆಂದು ದೇವರಲ್ಲಿ ವಿಶ್ವಾಸವನ್ನು ಹೊಂದಿಲ್ಲ ಎಂದು ಸೂಚಿಸಿದಂತಾಗುತ್ತದೆ. ಒಬ್ಬನು ತನ್ನನ್ನು ಲೈಂಗಿಕ ಅನೈತಿಕತೆಯಲ್ಲಿ ತೊಡಗಿಸಿಕೊಳ್ಳಲು ನಿರ್ಧರಿಸಿಕೊಳ್ಳುವಾಗ, ತತ್ಪರಿಣಾಮವಾಗಿ, ಆತನು ದೇವರಿಗೆ "ನೀನು ನನಗೆ ನಿತ್ಯವಾಗಿ ನಿನ್ನ ಆಶೀರ್ವಾದಗಳನ್ನು ಕೊಡುವಿಯೆಂದು ನಾನು ನಿನ್ನನ್ನು ವಿಶ್ವಾಸಿಸುವದಿಲ್ಲ" ಎಂದು ಹೇಳುವವನಂತಿರುತ್ತಾನೆ. ಆತನು ಪರೋಕ್ಷವಾಗಿ ದೇವರ ಇಂಗಿತಗಳು ಸುಳ್ಳಾದವುಗಳೆಂದು ಸೂಚಿಸುವವನಾಗಿದ್ದಾನೆ.

ನಮಗಿರುವ ಪಾಠವೆಂದರೆ ದೇವರು ತನ್ನ ಆತ್ಮನನ್ನು ನಮ್ಮೊಂದಿಗೆ ಹಂಚಿಕೊಂಡಿದ್ದಕ್ಕಾಗಿ ನಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸುವದು ಮತ್ತು ನಮ್ಮನ್ನು ಆಶೀರ್ವದಿಸಬೇಕೆಂದು ಆತನಿಗಿರುವ ಇಂಗಿತಗಳನ್ನು ವಿಶ್ವಾಸಿಸುತ್ತೇವೆಂಬುದನ್ನು ತೋರಿಸುವದು ಆಗಿರುತ್ತದೆ. ಇದನ್ನು ಮಾಡಬೇಕೆಂದರೆ ನಾವು ಲೈಂಗಿಕ ಅನೈತಿಕತೆಯಿಂದ "ದೂರವಿರಬೇಕು" (ಓಡಿ ಹೋಗಬೇಕು) (2 ತಿಮೊಥೆ 2:22) ಮತ್ತು "ಪರಿಶುದ್ಧತೆಯನ್ನು ಹೊಂದುವದಕ್ಕೆ ಪ್ರಯತ್ನ ಮಾಡಬೇಕು," ನಮಗಾಗಿರುವ ದೇವರ ಪಾತ್ರವನ್ನು ಅಂಗೀಕರಿಸಿಕೊಂಡು "ಕರ್ತನನ್ನು ಕಾಣುವದಕ್ಕೆ" ಸಿದ್ಧತೆಯನ್ನು ಮಾಡಿಕೊಳ್ಳಬೇಕು (ಇಬ್ರಿಯ 12:14). ಥೆಸಲೋನಿಕದವರು ಯೇಸುವನ್ನು ನೋಡಬೇಕೆಂದು ಮತ್ತು ಆತನ ಬರೋಣದಲ್ಲಿ ಆತನೊಂದಿಗೆ ಐಕ್ಯಗೊಳ್ಳಬೇಕೆಂದು ಇಚ್ಛಿಸುವವರಾಗಿದ್ದರು

(1:10). ಈ ಇಚ್ಛೆಯು ಅವರಿಗೆ ತಮ್ಮ ಜೀವಿತಗಳಿಗೆ ದೇವರು ಇಟ್ಟಿರುವ ಯೋಜನೆಗಳ ಪ್ರಕಾರವಾಗಿ ಬದುಕುವಂತೆ ಸಹಾಯವನ್ನು ಒದಗಿಸಿತ್ತು. ಇದು ನಮಗೆ ಸಹ ಸಹಾಯವನ್ನು ಮಾಡುವದು.

*ಮುಕ್ತಾಯ.* ದೇವರಂತಿರುವದು ಒಂದು ದೊಡ್ಡ ಕೆಲಸವಾಗಿದ್ದು ಅದರಲ್ಲಿ ನಾವೆಲ್ಲರೂ ವಿಫಲರಾಗುವೆವು. ಕ್ರಿಸ್ತನಲ್ಲಿದ್ದವರು ಪಶ್ಚಾತ್ತಾಪ ಪಟ್ಟು ಕ್ಷಮಾಪಣೆಯನ್ನು ಕೇಳಿದ ಹಾಗೆ ದೇವರು ಅವರ ತಪ್ಪುಗಳನ್ನು ಕ್ಷಮಿಸುತ್ತಾನೆ, ಅದೇ ವೇಳೆಯಲ್ಲಿ ಆತನ ಗುಣಸ್ವಭಾವವನ್ನು ಪ್ರತಿಬಿಂಬಿಸುವ ಭಕ್ತಿಯುಳ್ಳ ಮನೋಭಾವಗಳನ್ನು ಮತ್ತು ಕ್ರಿಯೆಗಳನ್ನು ಅಳವಡಿಸಿಕೊಳ್ಳುವಂತೆ ನಿರಂತರವಾಗಿ ಬೇಡಿಕೊಳ್ಳುವವನಾಗಿದ್ದಾನೆ ಮತ್ತು ಆತನ ಲೋಕದಲ್ಲಿ ಅತ್ಯಂಥ ಉಪಯುಕ್ತರಾಗಿರುವಂತೆ ನಮಗೆ ಸಹಾಯವನ್ನು ಮಾಡುತ್ತಾನೆ. ನಮ್ಮನ್ನು ದೇವರ ಪರಿಶುದ್ಧ ಜೀವನ ಮಾರ್ಗದಿಂದ ದಾರಿತಪ್ಪಿಸುವದಕ್ಕೆ ಅನೈತಿಕತೆಯು ಸೈತಾನನು ಅನೇಕ ಸಾರಿ ಬಳಸುವ ಅತ್ಯಂಥ ಬಲವಾದ ಶೋಧನೆಯಾಗಿರುತ್ತದೆ. ನಾವು ಅನೈತಿಕತೆಯ ಅಪಾಯದ ಕುರಿತು ಜಾಗ್ರತೆಯುಳ್ಳವರಾಗಿರೋಣ ಮತ್ತು ನಮ್ಮನ್ನು ದೇವರ ಶುದ್ಧರಾದ ಸೇವಕರನ್ನಾಗಿ ಮೀಸಲಿಟ್ಟುಕೊಳ್ಳುವದಕ್ಕೆ ಯೋಜನೆಯನ್ನು ಮಾಡಿಕೊಳ್ಳೋಣ. ನಾವು ದೇವರಿಗಾಗಿರುವ ವಿಶೇಷ ಜನರಾಗಿರತಕ್ಕದ್ದು, ಆತನು ನಮ್ಮನ್ನು ತನಗೆ ಸೇವೆ ಮಾಡಬೇಕೆಂದು ಆರಿಸಿಕೊಂಡಿರುತ್ತಾನೆ. ಆ ಕೆಲಸದಲ್ಲಿ ಯಶಸ್ಸಿಗೊಳ್ಳುವಂತೆ ಆತನು ನಮಗೆ ಸಹಾಯ ಮಾಡುವನು! TP

## ಶುದ್ಧೀಕರಣ ಮತ್ತು ನೈತಿಕತೆ (4:1-8)

ಈ ಅಧ್ಯಾಯದ ಮೊದಲ ಎಂಟು ವಚನಗಳಲ್ಲಿ ಪೌಲನು ಕರಾರುವಾಕ್ಕಾಗಿ ಲೈಂಗಿಕ ನೈತಿಕತೆಯ ಕುರಿತಾಗಿ ಮಾತಾಡುತ್ತಾನೆ. ನಾವು ಈ ವಚನಗಳನ್ನು ಪರೀಕ್ಷಿಸುವ ವೇಳೆ, ವಾಕ್ಯಭಾಗಕ್ಕೆ ನಿಷ್ಠೆಯಿಂದಿರಬೇಕೆಂದರೆ ನಾವು ಒಂದು ಸಿದ್ಧಾಂತಕ್ಕೆ ಆಧಾರವಾಗಿರುವ ತತ್ವ, ಒಂದು ದೊಡ್ಡ ಮೂಲಭೂತ ಭಾವನೆಯನ್ನು ಒತ್ತಿ ಹೇಳಬೇಕಾದ ಅಗತ್ಯವಿರುತ್ತದೆ, ಅದು ಒಂದೇ ಮಾತಿನಲ್ಲಿ ಸಾರಾಂಶಗೊಳಿಸಲ್ಪಡಬಹುದಾಗಿದ್ದು 3 ಮತ್ತು 7 ವಚನಗಳಿಂದ ಬರುವಂತದ್ದಾಗಿದೆ: "ಶುದ್ಧೀಕರಣ." ಆಧಾರಗೊಳಿಸುವಿಕೆಯು ಒಂದು ಬಹು ಸ್ಪಷ್ಟವಾದ ನೈತಿಕ ಬೋಧನೆಯಾಗಿದೆ ಮತ್ತು ಪ್ರಬೋಧನೆಯು ಈ ದೊಡ್ಡ, ವಿಸ್ತಾರವಾದ, ಸಾಮಾನ್ಯ ಸತ್ಯವೇ ಆಗಿದೆ.

*ಸಿದ್ಧಾಂತಿಕ ಆಧಾರವಾದ ತತ್ವ (4:3, 7).* 3ನೇ ವಚನವು ಹೀಗೆ ಹೇಳುತ್ತದೆ, "ದೇವರ ಚಿತ್ತವೇನಂದರೆ ನೀವು ಶುದ್ಧರಾಗಿ ಇರಬೇಕೆಂಬದೇ." 7ನೇ ವಚನವು ಹೀಗೆ ಹೇಳುತ್ತದೆ, "ದೇವರು ನಮ್ಮನ್ನು ಬಂಡತನಕ್ಕೆ ಕರೆಯದೆ ಶುದ್ಧರಾಗಿರುವದಕ್ಕೆ ಕರೆದನು."

"ಶುದ್ಧರಾಗಿರುವದು" (ಶುದ್ಧೀಕರಣ) ಎಂಬ ಪದವು ನಿಜವಾದ ಅರ್ಥವೇನು? ಅದು "ಪರಿಶುದ್ಧನು" ಎಂಬ ಪದದೊಂದಿಗೆ ನಂಟಸ್ತಿಕೆಯುಳ್ಳದ್ದಾಗಿದೆ. ಈ ಪದಗಳು *hagios* ಎಂಬ ಮೂಲಭೂತ ಪದದಿಂದ ಬಂದವುಗಳಾಗಿರುತ್ತವೆ, ಅದು ಹೃದಯಭಾಗದಲ್ಲಿ "ಭಿನ್ನ" ಎಂಬ ಯೋಚನೆಯನ್ನೊಳಗೊಂಡಿರುತ್ತದೆ.

ಹಳೆಯ ಒಡಂಬಡಿಕೆಯ ಕಾಲಗಳಲ್ಲಿ ಯಾಜಕನು ಅದರಲ್ಲಿ ಒಂದು ಚಿನ್ನದ

ತಟ್ಟೆಯನ್ನು ಹೊಂದಿರುತ್ತಿದ್ದ ಮುಂಡಾಸು ಅಥವಾ ಸೀಳು ಕುಲಾವಿಯೊಂದನ್ನು ಧರಿಸಿಕೊಳ್ಳುತ್ತಿದ್ದನು. ಆ ತಟ್ಟೆಯ ಮೇಲೆ "ಕರ್ತನಿಗೋಸ್ಕರ ಪರಿಶುದ್ಧನು" ಎಂಬ ಪದಗಳು ಕೆತ್ತಲ್ಪಟ್ಟಿರುತ್ತಿದ್ದವು. ಇದರರ್ಥವು, ಬೇರೆ ಎಲ್ಲವುಗಳೊಳಗೆ, ಈ ಲೇವಿ ಕುಲಕ್ಕೆ ಸೇರಿದ ನಿರ್ದಿಷ್ಟವಾದ ಯಾಜಕನು ದೇವರ ಉದ್ದೇಶಗಳಿಗೋಸ್ಕರ ಪ್ರತ್ಯೇಕಿಸಿಡಲ್ಪಟ್ಟವನಾಗಿದ್ದನು ಎಂಬದೆ.

ನಾವು "ಪರಿಶುದ್ಧನು," "ಶುದ್ಧೀಕರಣ," ಮತ್ತು "ಪರಿಶುದ್ಧ," ಎಂಬ ಮಾತುಗಳನ್ನು ಕೇಳಿಸಿಕೊಳ್ಳುವಾಗ, ನಾವು ಅನೇಕ ಸಾರಿ ಇತರ ಲೋಕ-ರೀತಿಯ ಮನೋಭಾವ, ಒಂದು ಲೇಪಿತ ಧ್ವನಿ, ಕೃತಕ ಕಾರ್ಯಗಳಲ್ಲಿ ಪ್ರತಿಬಿಂಬಿತಗೊಳ್ಳುವ ಒಂದು ಸಿಹಿಯಾದ ಧರ್ಮನಿಷ್ಠೆ ಇವುಗಳನ್ನು ಯೋಚನೆಗಳನ್ನು ಹೊಂದುತ್ತೇವೆ. "ಶುದ್ಧೀಕರಣ" ಎಂಬ ಯೋಚನೆಯು ಪ್ರಮುಖವಾಗಿ, ಮೂಲಭೂತವಾಗಿ ದೇವರಿಗೆ ಮತ್ತು ಆತನ ಉದ್ದೇಶಗಳಿಗೆ ಸೇರಿರುವದು ಎಂದಾಗಿರುತ್ತದೆ. ಅದು ಒಂದು ಸಕಾರಾತ್ಮಕ ಮತ್ತು ನಕಾರಾತ್ಮಕ ಎರಡೂ ಒತ್ತಡಗಳನ್ನು ಹೊಂದಿರುತ್ತದೆ. ನಾವು ಸೇವೆಗೋಸ್ಕರ ಪಾಪದಿಂದ ಪ್ರತ್ಯೇಕಿಸಲ್ಪಟ್ಟಿದ್ದೇವೆ.

ಒಬ್ಬನು ಯಾವಾಗ ಪ್ರತ್ಯೇಕಿಸಲ್ಪಡುತ್ತಾನೆ? ಒಬ್ಬನು ಯಾವಾಗ ಶುದ್ಧೀಕರಣಗೊಳಿಸಲ್ಪಡುತ್ತಾನೆ? ಒಬ್ಬನು ಯಾವಾಗ ಒಬ್ಬ ಪರಿಶುದ್ಧನು ಆಗುತ್ತಾನೆ? ಈ ಪ್ರಶ್ನೆಗೆ ಮೊದಲನೆಯ ಕೊರಿಂಥ 6:9-11 ಉತ್ತರಿಸುತ್ತದೆ: ". . . ಮೋಸಹೋಗಬೇಡಿರಿ, ಜಾರರು ವಿಗ್ರಹಾರಾಧಕರು ವ್ಯಭಿಚಾರಿಗಳು ವಿಟರು ಪುರುಷಗಾಮಿಗಳು ಕಳ್ಳರು ಲೋಭಿಗಳು ಕುಡಿಕರು ಬೈಯುವವರು ಸುಲುಕೊಳ್ಳುವವರು ಇವರೊಳಗೆ ಒಬ್ಬರಾದರೂ ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲ. ನಿಮ್ಮಲ್ಲಿ ಕೆಲವರು ಅಂಥವರಾಗಿದ್ದಿರಿ; ಆದರೂ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿಯೂ ನಮ್ಮ ದೇವರ ಆತ್ಮದಲ್ಲಿಯೂ ತೊಳೆದುಕೊಂಡಿರಿ, ದೇವರಜನರಾದಿರಿ, ನೀತಿವಂತರೆಂಬ ನಿರ್ಣಯವನ್ನು ಹೊಂದಿದಿರಿ." ನಾವು ಯಾವಾಗ ತೊಳೆಯಲ್ಪಡುತ್ತೇವೋ, ನಾವು ಯಾವಾಗ ನೀತಿವಂತರೆಂದು ನಿರ್ಣಯಿಸಲ್ಪಡುತ್ತೇವೋ ನಾವು ಪರಿಶುದ್ಧಗೊಳಿಸಲ್ಪಡುತ್ತೇವೆ ಎಂಬುದನ್ನು 11ನೇ ವಚನವು ತೋರಿಸುತ್ತದೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ನಾವು ಸುವಾರ್ತೆಗೆ ವಿಧೇಯರಾಗುವಾಗ ಶುದ್ಧೀಕರಣವು ನಡೆಯುತ್ತದೆ. ಪೌಲನು 1 ಥೆಸಲೋನಿಕ 4ರಲ್ಲಿ ಹೀಗೆ ಹೇಳಿದನು, "ದೇವರು ನಮ್ಮನ್ನು ಬಂಡತನಕ್ಕೆ ಕರೆಯದೆ ಶುದ್ಧರಾಗಿರುವದಕ್ಕೆ ಕರೆದನು" (ವ. 7). ಆತನು ನಮ್ಮನ್ನು ಸುವಾರ್ತೆಯ ಮೂಲಕ ಕರೆದನು (2 ಥೆಸಲೋನಿಕ 2:14).

ಪರಿವರ್ತನೆಯಾಗುವ ವೇಳೆಯಲ್ಲಿ ಶುದ್ಧೀಕರಣವು ಸಂಭವಿಸುತ್ತದೆ; ಆದರೆ ಅದೇ ಸಮಯದಲ್ಲಿ, ಶುದ್ಧೀಕರಣದಲ್ಲಿ ಒಂದು ಪ್ರಕ್ರಿಯೆಯು ಇರುತ್ತದೆ. ಇಬ್ರಿಯ 12:14ರಲ್ಲಿ, ನಮಗೆ "ಎಲ್ಲರ ಸಂಗಡ ಸಮಾಧಾನದಿಂದಿರುವದಕ್ಕೂ ಪರಿಶುದ್ಧತೆಯನ್ನು ಹೊಂದುವ ದಕ್ಕೂ ಪ್ರಯತ್ನ ಮಾಡಿರಿ; ಪರಿಶುದ್ಧತೆಯಿಲ್ಲದೆ ಯಾವನೂ ಕರ್ತನನ್ನು ಕಾಣುವದಿಲ್ಲ" ಎಂದು ಬೇಡಿಕೊಳ್ಳಲಾಗಿರುತ್ತದೆ. ಯಾರೋ ಒಬ್ಬನಿಗೆ ಹೀಗೆ ಕೇಳಲಾಯಿತು, "ಒಬ್ಬ ಕ್ರೈಸ್ತನಾಗುವದಕ್ಕೆ ಎಷ್ಟು ಕಾಲ ಹಿಡಿಯುತ್ತದೆ?" ಒಬ್ಬನು ಮುಂದಿಟ್ಟ ಉತ್ತರವು ಹೀಗಿತ್ತು, "ಒಂದು ಕ್ಷಣ ಮತ್ತು ಜೀವಿತಕಾಲವೆಲ್ಲಾ." ನೀವು ಪರಿವರ್ತನೆಗೊಳ್ಳುವ ಹೊತ್ತಿನಲ್ಲಿ, ನೀವು ಬೈಬಲಾಧಾರಿತವಾದ ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಸಮಯದಲ್ಲಿ, ನೀವು

ಪ್ರತ್ಯೇಕಿಸಲ್ಪಡುವಿರಿ. ಹೇಗೂ, ಅದಾದ ಬಳಿಕ ಜೀವಿತಕಾಲವೆಲ್ಲಾ ಸಮಾಧಾನ, ಪರಿಶುದ್ಧತೆ ಮತ್ತು ಶುದ್ಧೀಕರಣವನ್ನು ಅನುಸರಿಸುವದು ಇರುತ್ತದೆ. ಇದು ಆ ಕ್ಷಣದಲ್ಲಿ ನಡೆಯುವ ಕ್ರಿಯೆ ಮತ್ತು ಒಂದು ಜೀವಿತ ಕಾಲದ ಪ್ರಕ್ರಿಯೆಯ ಎರಡನ್ನೂ ಒಳಗೊಂಡಿರುತ್ತದೆ. ಆ ವಿಧದಲ್ಲಿ ಪರಿಶುದ್ಧತೆಯನ್ನು ಹೊಂದುವದಕ್ಕೆ ಪ್ರಯತ್ನವನ್ನು ಮಾಡುವ ಹೊರತು, ನಾವು ಕರ್ತನನ್ನು ಕಾಣುವದಕ್ಕಾಗುವದಿಲ್ಲ. ನಾವು ಸುವಾರ್ತೆಗೆ ವಿಧೇಯರಾಗುತ್ತೇವೆ ಆದರೆ ಶುದ್ಧೀಕರಣ ಮತ್ತು ಪರಿಶುದ್ಧತೆಯನ್ನು ಅನುಸರಿಸದಿದ್ದಲ್ಲಿ, ನಾವು ಕರ್ತನನ್ನು ಕಾಣುವದಕ್ಕಾಗುವದಿಲ್ಲ.

*ನಿಷೇಧ (4:1-5).* ದೊಡ್ಡ, ವಿಸ್ತಾರವಾದ, ಸಾಮಾನ್ಯ ತತ್ವವು ಅನೇಕ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸುವದು. ಪೌಲನು ಮೊದಲ ಶತಮಾನದ ರೋಮನ್ ಸಾಮ್ರಾಜ್ಯದಲ್ಲಿನ ಪ್ರಾಚೀನ ಗ್ರೀಕ್ ಪಟ್ಟಣಗಳಲ್ಲಿಯೂ ಇಂದು ನಮ್ಮ ಜಗತ್ತಿನಲ್ಲಿಯೂ ಅತ್ಯಂಥ ಸರ್ವಸಾಧಾರಣವಾದ ಒಂದಿ ನಿರ್ದಿಷ್ಟವಾದ ದುಷ್ಟತ್ವವನ್ನು ಮನಸ್ಸುನಲ್ಲಿಟ್ಟುಕೊಂಡು ಮಾತಾಡುತ್ತಾನೆ. ಆತನು ಸಾಮಾನ್ಯ ತತ್ವವನ್ನು ಆ ಹಾದರವೆಂಬ ನಿರ್ದಿಷ್ಟವಾದ ಪಾಪದೊಂದಿಗೆ ಸಂಬಂಧಪಡಿಸುತ್ತಾನೆ.

ನೀವು ಕೆಲಸವು ಸಾರಿ ಅರಸನ ಹಿಂಬಾಲಕರೆಂದು ಹೇಳಿಕೊಳ್ಳುವವರ ತುಟಿಗಳಿಂದ ಬರುವಂಥ ಅಶುದ್ಧ, ಹೊಲಸಾದ, ಹೊಲೆಯಾದ, ಕೀಳಾದ, ಹೇಸಿಕೆ ತರುವಂಥ, ಮತ್ತು ಅಶ್ಲೀಲವಾದ ಮಾತುಗಳನ್ನು ಯೇಸುವು ಹೇಳುವದನ್ನು ನೀವು ಕಲ್ಪನೆಯನ್ನು ಮಾಡಿಕೊಳ್ಳಬಲ್ಲಿರಾ?

ಶುದ್ಧೀಕರಣವು ನಮ್ಮ ಜೀವಿತಗಳಿಗೆ ವ್ಯಾಪಕವಾಗಿ ಅನ್ವಯವಾಗುವ ಒಂದು ತತ್ವವಾಗಿದೆ. ಅದು ವ್ಯಾಪಾರದ ನೈತಿಕತೆಗಳಿಗೆ ಸಂಬಂಧ ಹೊಂದಿರಬೇಕು ಮತ್ತು ನಮ್ಮ ಜೀವಿತಗಳ ಪ್ರತಿಯೊಂದು ಕ್ಷೇತ್ರಕ್ಕೂ ಅನ್ವಯವಾಗಬೇಕು. ಈ ವಾಕ್ಯಭಾಗದಲ್ಲಿ, ಪೌಲನು ಅದನ್ನು ಒಂದು ನಿರ್ದಿಷ್ಟವಾದ ಕ್ಷೇತ್ರಕ್ಕೆ ಸಂಬಂಧಗೊಳಿಸುತ್ತಾನೆ, ಹಾಗಾದರೆ ಈಗ ನಾವು ತತ್ವದಿಂದ ನಿಷೇಧಕ್ಕೆ ಸಾಗುತ್ತೇವೆ.

“ದೇವರ ಚಿತ್ತವೇನಂದರೆ ನೀವು ಶುದ್ಧರಾಗಿರಬೇಕೆಂಬದೇ”-ಅದು ಸಾಮಾನ್ಯ ತತ್ವವಾಗಿದೆ. “ಆದದರಿಂದ ನೀವು ಹಾದರಕ್ಕೆ (ಲೈಂಗಿಕ ಅನೈತಿಕತೆಗೆ) ದೂರವಾಗಿರಬೇಕು”-ಅದು ನಿರ್ದಿಷ್ಟವಾದ ಅನ್ವಯಿಕೆಯಾಗಿರುತ್ತದೆ. ಆತನು ಒಂದು ನಿಷೇಧವನ್ನು, ಒಂದು ನಕಾರಾತ್ಮಕವನ್ನು, ದೂರವಾಗಿರಬೇಕಾದ ಒಂದು ಸಂಗತಿಯನ್ನು ತಿಳಿಸುತ್ತಾನೆ. ಆತನು “ನೀವು ಹಾದರಕ್ಕೆ (ಲೈಂಗಿಕ ಅನೈತಿಕತೆಗೆ) ದೂರವಾಗಿರಬೇಕು. ದೇವರನ್ನರಿಯದ ಅನ್ಯಜನಗಳಂತೆ ಕಾಮಾಭಿಲಾಷೆಗೆ ಒಳಪಡದೆ ನಿಮ್ಮಲ್ಲಿ ಪ್ರತಿಯೊಬ್ಬನು ಪವಿತ್ರವಾದ ಮನಸ್ಸಿನಿಂದಲೂ ಘನತೆಯಿಂದಲೂ ಧರ್ಮಪತ್ನಿಯನ್ನು ಸಂಪಾದಿಸಿಕೊಳ್ಳಲು ತಿಳಿಯಬೇಕು” ಎಂದು ಹೇಳಿದನು.

ಪೌಲನು “ಲೈಂಗಿಕ ಅನೈತಿಕತೆಗೆ ದೂರವಾಗಿರಬೇಕು” ಎಂದು ಹೇಳಿದನು. “ಹಾದರ” ಎಂಬುದು *porneia* ಎಂಬ ಪದದಿಂದ ಬಂದದ್ದು, ಮತ್ತು ಕೆಲವೊಂದು ಹೊಲಸು ಆಂಗ್ಲ ಪದಗಳು ಆ ಪದದೊಂದಿಗೆ ನೆಂಟಸ್ತಿಕೆ ಹೊಂದಿರುತ್ತವೆ-“pornographic,” (ಕಾಮಪ್ರಚೋದಕ) “pornography,” (ಕಾಮ ಪ್ರಚೋದಕ ಸಾಹಿತ್ಯ, ಸಿನಿಮಾ

ಮುಂತಾದವುಗಳು) ಇತ್ಯಾದಿ. *Porneia* ಯು ಎಲ್ಲಾ ಲೈಂಗಿಕ ಅನೈತಿಕತೆಯನ್ನು ಸೂಚಿಸುವ ಗ್ರೀಕ್ ಪದವಾಗಿದೆ.

ನಾವು "ಕರ್ತನಿಗೋಸ್ಕರ ಪರಿಶುದ್ಧನು" ಎಂದು ಬರೆದಿರುವ ಮುಂಡಾಸನ್ನು ಧರಿಸಿರುವದಿಲ್ಲ, ಆದರೆ ನಾವು ಈಗಲೂ ರಾಜವಂಶಸ್ಥರಾದ ಯಾಜಕರ ಒಂದು ಭಾಗವಾಗಿದ್ದೇವೆ. ನಾವು ಒಂದು ಮೀಸಲಾದ ಜನ, ಒಂದು ವಿಶಿಷ್ಟ ಜನ, ದೇವರ ಸ್ವಕೀಯ ಪ್ರಜೆ ಆಗಿದ್ದೇವೆ (1 ಪೇತ್ರ 2:9).

ಒಬ್ಬನು ತನ್ನ ದೇಹವನ್ನು ಹೇಗೆ "ಸಂಪಾದಿಸಿಕೊಳ್ಳುವನು"? ಈ ಪದದ ಅರ್ಥವು ಸ್ವಾಧೀನಪಡಿಸಿಕೋ ಎಂದಾಗಿರುತ್ತದೋ? ನಮಗೆ ಈಗಾಗಲೇ ನಮ್ಮ ದೇಹಗಳಿರುತ್ತವೆ. ಅದು ಒಬ್ಬ ಹೆಂಡತಿಯನ್ನು ಸಂಪಾದಿಸಿಕೊಳ್ಳಬೇಕೆಂದು ಅರ್ಥವಾಗಬಹುದೆಂದು ನನಗೆ ತಿಳಿಯುತ್ತದೆ, ಆದರೆ ಇದು ಹೇಗೆ ದೇಹಕ್ಕೆ ಅನ್ವಯವಾಗುತ್ತದೆ? ಪೌಲನು "ನಿಮ್ಮಲ್ಲಿ ಪ್ರತಿಯೊಬ್ಬನು ತನ್ನ ಸ್ವಂತ ದೇಹವನ್ನು ಸಂಪಾದಿಸಿಕೊಳ್ಳಲು ತಿಳಿಯಬೇಕು" ಎಂದು ಪೌಲನು ಬರೆದಾಗ, ನಮ್ಮ ಆಂಗ್ಲ ಭಾಷೆಯಲ್ಲಿ ಮಾತುಗಳಲ್ಲಿ "ಒಂದರ ಮೇಲೆ ಆಧಿಪತ್ಯವನ್ನು ಸಾಧಿಸಿಕೋ" ಅಥವಾ ಸಂಪಾದಿಸಿಕೋ ಎಂದು ಸ್ಪಷ್ಟವಾದ ಅರ್ಥವನ್ನು ಕೊಡಬಹುದು, ಮೊದಲು ಅದನ್ನು ಪಡೆದುಕೊಳ್ಳಬೇಕು ಎಂದರ್ಥದಲ್ಲಿ ಅಲ್ಲ (ಯಾಕೆಂದರೆ ನೀವು ಅದನ್ನು ಮೊದಲೇ ಹೊಂದಿದ್ದೀರಿ), ಆದರೆ "ಅದರ ಮೇಲೆ ಆಧಿಪತ್ಯವನ್ನು ಸಂಪಾದಿಸು" ಎಂದಾಗಿರುತ್ತದೆ. ಉಳಿದ ವಾಕ್ಯಭಾಗವು ಈಗಾಗಲೇ ಅಭಿಪ್ರಾಯಪಟ್ಟಿದ್ದರೆ ಕುರಿತು ವಾದವನ್ನು ಮಾಡುವದಾಗಿದೆ.

*ಶಿಕ್ಷೆ (4:6-8).* ಅನ್ಯಜನರು ದೇವರನ್ನು ಅರಿಯದ ಕಾರಣದಿಂದ ಆ ವಿಧದಲ್ಲಿ ಜೀವಿಸುತ್ತಿದ್ದರು. ವಿಗ್ರಹಾರಾಧಕ ಧರ್ಮಗಳು ಅನೈತಿಕತೆಯನ್ನು ತಮ್ಮ ಧಾರ್ಮಿಕ ವಿಧಿಗಳ, ವಿಶೇಷವಾಗಿ ಫಲವಂತಿಕೆ ಕುಪಂಥದ ಒಂದು ಭಾಗವಾಗಿ ಸಹ ಆಚರಿಸಲ್ಪಟ್ಟಿರುತ್ತವೆ.

"ಇವೆಲ್ಲವುಗಳ ವಿಷಯದಲ್ಲಿ ಕರ್ತನು ಮುಯ್ಯಿಗೆ ಮುಯ್ಯಿ ತೀರಿಸುವನು" ಎಂಬದಾಗಿ ಪೌಲನು ಹೇಳಿದನು (ವ. 6). ಇದು ನಾವು ಇಂದು ಎಲ್ಲಿಯೂ ಕೇಳಿಸಿಕೊಳ್ಳದ ಒಂದು ಪ್ರೇರಣೆಯಾಗಿರುತ್ತದೆ. ನಾವು ನರಕ, ಅಗ್ನಿ, ಮತ್ತು ಗಂಧಕಗಳೇ ಇಲ್ಲವೆಂದು ತೀರ್ಮಾನಿಸಿ ಬಿಟ್ಟಿರುತ್ತೇವೆ. ಪೌಲನು *gehenna* (ಗೆಹೆನ್ನಾ-ನರಕ) ಎಂಬ ಪದವನ್ನು ಬಳಸಲಿಲ್ಲವಾದರೂ, ಸುವಾರ್ತೆಗಳಲ್ಲಿ ಯೇಸುವಿನ ಪ್ರಸಂಗಗಳಲ್ಲಿ ಅದು ಕಂಡುಬರುತ್ತದೆ. ಹೇಗೂ, ಆತನು ದೇವರ ಕೋಪದ ಕುರಿತಾಗಿ ಬಹಳಷ್ಟನ್ನು ಹೇಳಿರುತ್ತಾನೆ. ಪಶ್ಚಾತ್ತಾಪವಿಲ್ಲದ ಮೊಂಡುತನವು ದೈವಿಕ ಕೋಪದಲ್ಲಿ ಹೂಡಿಕೆಯನ್ನು ಮಾಡಿದಂತೆ ಎಂಬದರ ಬಗ್ಗೆ ಆತನು ಬಹಳಷ್ಟನ್ನು ಹೇಳಿರುತ್ತಾನೆ.

ಈ ವಾಕ್ಯಭಾಗದಲ್ಲಿ ಇನ್ನೊಂದು ದೊಡ್ಡ ಪ್ರೇರಣೆಯು ಬರುವದಾಗಿದ್ದು ಅದನ್ನು ಈಗಾಗಲೇ ನಾವು 7ನೇ ವಚನದಲ್ಲಿ ಪ್ರಸ್ತಾಪಿಸಿರುತ್ತೇವೆ: "ದೇವರು ನಮ್ಮನ್ನು ಬಂಡತನಕ್ಕೆ ಕರೆಯದೆ ಶುದ್ಧರಾಗಿರುದಕ್ಕೆ ಕರೆದನು." ನೀವು ಪರಿವರ್ತನೆಗೊಂಡದ್ದರ ಬಗ್ಗೆ ಯೋಚಿಸಿರಿ. ಪಾಪದ ಪಾಲಿಗೆ ಸತ್ತದ್ದನ್ನು ಕುರಿತು ಯೋಚಿಸಿರಿ. ನೀವು ತೊಳೆಯಲ್ಪಟ್ಟು ನೀತಿವಂತರೆಂದು ನಿರ್ಣಯಿಸಲ್ಪಟ್ಟ ಗಳಿಯ ಬಗ್ಗೆ ಯೋಚಿಸಿರಿ. ಅದೇ ಗಳಿಗೆಯಲ್ಲಿಯೇ

ನೀವು ಶುದ್ಧೀಕರಣಗೊಳಿಸಲ್ಪಟ್ಟಿರೆಂಬುದನ್ನು ನೀವು ಗ್ರಹಿಸುತ್ತೀರೋ? ಆತನು ನಿಮ್ಮನ್ನು ಅಶುದ್ಧತೆಗೆ ಕರೆಯಲಿಲ್ಲ. ಆತನು ಒಂದು ವಿಶಿಷ್ಟ ಜನವನ್ನು, ಸತ್ಕಾರ್ಯಗಳಲ್ಲಿ ಆಸಕ್ತರಾದ, ಒಂದು ನಿರ್ಮಲ, ಪರಿಶುದ್ಧವಾದ, ಮತ್ತು ರಾಜವಂಶಸ್ಥರಾದ ಯಾಜಕರನ್ನು ಕರೆದನು. ಆ ಕರೆಯು ನಿಮಗೆ ನೆನಪಿದೆಯೋ? ಪರಿವರ್ತನೆಯು ನಿಮಗೆ ನೆನಪಿದೆಯೋ? ತೊಳೆಯಲ್ಪಟ್ಟದ್ದು, ನೀತಿವಂತರೆಂದು ನಿರ್ಣಯಿಸಲ್ಪಟ್ಟದ್ದು, ಮತ್ತು ಶುದ್ಧೀಕರಣಗೊಂಡದ್ದು ನಿಮಗೆ ನೆನಪಿದೆಯೋ?

ಬೇರೆ ಇನ್ನೇನ್ನಾದರೂ ಜ್ಞಾಪಕ ಮಾಡಿಕೊಳ್ಳುವಿರೋ: "ಈ ಮಾತನ್ನು ತಾತ್ಸಾರ ಮಾಡುವವನು ಮನುಷ್ಯನನ್ನು ತಿರಸ್ಕರಿಸುವದು ಮಾತ್ರವಲ್ಲದೆ . . . ದೇವರನ್ನೇ ತಿರಸ್ಕರಿಸುತ್ತಾನೆ" (ವ. 8). ಅನ್ಯಜನಗಳು ದೊಂಬಿ ಏಳಲಿ ಮತ್ತು ಜನರು ವ್ಯರ್ಥ ಕಾರ್ಯಗಳನ್ನು ಕಲ್ಪಿಸಿಕೊಳ್ಳಲಿ. ಇವುಗಳು ಜೀವನದ ಶೋಭಾಯಮಾನತೆಯನ್ನು ದೋಚಿಕೊಳ್ಳುವದಕ್ಕಾಗಿ ದೇವರಿಂದ ಕೊಡಲ್ಪಟ್ಟಿರುವ ನಿರಂಕುಶ ಮಾರ್ಗಸೂಚಿಗಳಾಗಿರುವದಿಲ್ಲ. ಭಕ್ತಿಯು ಈಗಿನ ಮತ್ತು ಮುಂದೆ ಬರಲಿರುವ ಜೀವನದ ವಾಗ್ದಾನವನ್ನು ಹೊಂದಿರುತ್ತದೆ. ಇಲ್ಲಿರುವ ಮತ್ತು ಇದಾದ ನಂತರದ ಅತಿ ಶ್ರೀಮಂತವಾದ, ಅತಿ ಸಮೃದ್ಧವಾದ, ಅತಿ ಅಂದವಾದ, ಅತ್ಯುತ್ತಮ ಜೀವನವು ಕ್ರಿಸ್ತನ ವಾಕ್ಯದ ಮತ್ತು ವಾಕ್ಯದ ಕ್ರಿಸ್ತನ ವ್ಯಾಪ್ತಿಯೊಳಗೆ ಸಿಕ್ಕುತ್ತದೆ. ಎಫೆಸ 5:11ರ ಪರಿಭಾಷೆಯಲ್ಲಿ, "ಕತ್ತಲೆಗೆ ಸಂಬಂಧವಾದ ಕೃತ್ಯಗಳಿಂದ ಯಾವ ಪ್ರಯೋಜನೂ ಬರಲಾರದು; ಅವುಗಳಲ್ಲಿ ಪಾಲುಗಾರರಾಗದೆ ಅವುಗಳನ್ನು ಬೈಲಿಗೆ ತಂದು ಖಂಡಿಸಿರಿ."

*ಮುಕ್ತಾಯ.* ಆತನು ನಿಮಗೋಸ್ಕರ ಮರಣಿಸಿದನೆಂಬುದನ್ನು ಜ್ಞಾಪಿಸಿಕೊಳ್ಳಿರಿ! ಆತನು ಸತ್ಕ್ರಿಯೆಗಳಲ್ಲಿ ಆಸಕ್ತರಾದ, ವ್ಯತ್ಯಾಸವಾಗಿರುವವರಾದ ಜನವೊಂದನ್ನು, ವಕ್ರಬುದ್ಧಿಯುಳ್ಳ ಭ್ರಷ್ಟ ಸಂತತಿಯರೊಳಗೆ ಹೊಳೆಯುವ ಜ್ಯೋತಿರ್ಮಂಡಲಗಳಂತಿರುವ ಜನಾಂಗವೊಂದನ್ನು ತನಗೋಸ್ಕರ ಪರಿಶುದ್ಧ ಮಾಡಿಕೊಳ್ಳುವದಕ್ಕಾಗಿ ಮರಣಿಸಿದನು. ನಾವು ಶುದ್ಧೀಕರಣಗೊಂಡ ಜನರಂತೆ ಜೀವಿಸೋಣ, ಯಾಕೆಂದರೆ ನಾವು ನಿಜವಾಗಿಯೂ ಅಂಥವರೇ ಆಗಿದ್ದೇವೆ. AM

### "ಸಹೋದರ ಪ್ರೀತಿ"ಯಲ್ಲಿ ನಡೆಯಿರಿ (4:9, 10)

ನಾವು 9ನೇ ವಚನದಲ್ಲಿ "ಸಹೋದರ ಪ್ರೀತಿ"ಯನ್ನು ಕಾಣುತ್ತೇವೆ. ಈ ಪ್ರೀತಿಯು ಸ್ವಯಂಪ್ರೇರಿತವಾದದ್ದು, ಒಬ್ಬ ವ್ಯಕ್ತಿಯು ಅವನ ಅಥವಾ ಅವಳ ಕುಟುಂಬ ಕಡೆಗೆ ಸ್ವಾಭಾವಿಕ ಹೊಂದಿರುವ ಭಾವ ಆಗಿರುತ್ತದೆ. ಇದು ಪ್ರೀತಿ ಪಾತ್ರರೆಡೆಗೆ ನಿಷ್ಠೆ ತೋರುವದನ್ನು ಸೂಚಿಸುತ್ತದೆ (ನೋಡಿರಿ ರೋಮಾ 12:10).

ಥೆಸಲೋನಿಕದವರು "ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬ ಉಪದೇಶವನ್ನು ದೇವರಿಂದ ಹೊಂದಿದ್ದರು" (ವ. 9b). ಇದರರ್ಥವು ದೇವರು ಅವರಿಗೆ ನೇರವಾದ ಪ್ರಕಟನೆಯನ್ನು ಕೊಟ್ಟನೆಂಬುದಲ್ಲ. ಬದಲಾಗಿ, ಅದರರ್ಥವು ಪೌಲನು ಅಲ್ಲಿದ್ದ ವೇಳೆಯಲ್ಲಿ ದೇವರು ಅವರಿಗೆ ಪೌಲನ ಮೂಲಕ ಪರೋಕ್ಷವಾಗಿ ಉಪದೇಶಿಸಿದನು ಎಂಬದೆ (ಅಪೊಸ್ತಲರ ಕೃತ್ಯಗಳು 17:2). ಪೌಲನು ಒಂದು ಸಾಧನವಾಗಿದ್ದನಾದರೂ, ಸಂದೇಶವು

ದೇವರದ್ದೇ ಆಗಿತ್ತು (2:13).

ಥೆಸಲೋನಿಕದವರು ಮಕೆದೋನ್ಯದ ಸಹೋದರರೆಡೆಗೆ ದಯೆಯುಳ್ಳವರಾಗಿರುವ ಮೂಲಕ ಪರಸ್ಪರರ ಮೇಲಿನ ಪ್ರೀತಿಯನ್ನು ತೋರ್ಪಡಿಸಿದ್ದರು (ವ. 10a). ಅವರ ಪ್ರೀತಿಯ ಕುರಿತಾಗಿ ಪೌಲನು ತಿಮೊಥೆಯನ ಮೂಲಕ ತಿಳುಕೊಂಡಿದ್ದನು (3:6), ಮತ್ತು ಅವರ ದಯೆಯು ಅವರ ಸ್ವಂತ ಸಭೆಯನ್ನು ದಾಟಿ ತಲುಪಿತ್ತು. ಅವರು ಶ್ರೀಮಂತರು, ಬಡವರು, ಪುರುಷರು, ಸ್ತ್ರೀಯರು, ವಿದ್ಯಾವಂತರು, ಅವಿದ್ಯಾವಂತರು, ಸ್ವತಂತ್ರರು, ಮತ್ತು ದಾಸರು ಸೇರಿದಂತೆ ಎಲ್ಲಾ ಸಹೋದರರನ್ನು ಪ್ರೀತಿಸುತ್ತಿದ್ದರು.

ಅವರು ಈಗಾಗಲೇ ತೋರಿಸಿದ್ದ ಪ್ರೀತಿಯ ಹೊರತಾಗಿಯೂ, "ಇನ್ನೂ ಹೆಚ್ಚುತ್ತಾ ಬರಬೇಕೆಂದು" ಪೌಲನು ಅವರನ್ನು ಬೇಡಿಕೊಳ್ಳುತ್ತಾನೆ (ವ. 10b). ಅವರು ಅವರು ಆಶೀರ್ವಾದವಾಗಿರುವದಕ್ಕೆ, ಬೇರೆಯವರ ಕಡೆಗಿನ ತಮ್ಮ ಪ್ರೀತಿಯಲ್ಲಿ ಬೆಳೆಯುವದಕ್ಕೆ ಇನ್ನಷ್ಟು ದಾರಿಗಳನ್ನು ಕಂಡುಕೊಳ್ಳಬೇಕಿತ್ತು. EE

## ಜೀವನದ ಶಾಂತತೆಯಲ್ಲಿ ನಡೆಯಿರಿ (4:11)

ಪೌಲನು ಥೆಸಲೋನಿಕದವರನ್ನು "ಸುಮ್ಮಗಿದ್ದು ಸ್ವಂತ ಕಾರ್ಯವನ್ನೇ ನಡಿಸಿಕೊಂಡು . . .ಮಾನವೆಂದೆಣಿಸಿರಿ" ಎಂದು ಪ್ರೋತ್ಸಾಹಿಸಿದನು (ವ. 11), ಅದೊಂದು ವಿಚಿತ್ರವಾದ ಆಕಾಂಕ್ಷೆಯಂತೆ ಕಾಣಬಹುದು. "ಸುಮ್ಮಗಿದ್ದು" ಎಂಬುದರ ಅರ್ಥವೇನು? ಈ ಕಳಕಳಿಯು ಅವರಲ್ಲಿ ಕೆಲವರು ಕ್ರಿಸ್ತನ ಎರಡನೆಯ ಬರೋಣವನ್ನು ಎದುರು ನೋಡುವದಕ್ಕಾಗಿ ತಮ್ಮ ಉದ್ಯೋಗಗಳನ್ನು ವ್ಯಜಿಸಿದ್ದರು ಎಂಬ ಸಮಸ್ಯೆಯನ್ನು ಪ್ರತಿಬಿಂಬಿಸುತ್ತದೆ (2 ಥೆಸಲೋನಿಕ 3:1-15). 11ನೇ ವಚನದಲ್ಲಿ, ಪೌಲನು ಅವರಿಗೆ ಏಕಚಿತ್ತವುಳ್ಳವರಾಗಿ ರುವಂತೆ ಪ್ರೋತ್ಸಾಹಿಸುವದಕ್ಕೆ ಮೂರು ಬುದ್ಧಿವಾದಗಳನ್ನು ಕೊಡುತ್ತಾನೆ.

*"ಸುಮ್ಮಗಿದ್ದು" ಜೀವನ ನಡಿಸಿರಿ.* NEBಯಲ್ಲಿ ತಳಮಳಗೊಳ್ಳುವ ಬದಲಾಗಿ "ಶಾಂತರಾಗಿರುವದಕ್ಕೆ ಪರಿಶ್ರಮ ಪಡಿರಿ" ಎಂದು ಇರುತ್ತದೆ. ನಾವು ಶಾಂತರಾಗಿರಬೇಕು, ಆ ಮೂಲಕ ಶಾಂತತೆಯನ್ನು ಉಂಟು ಮಾಡಬೇಕು.

*"ಸ್ವಂತ ಕಾರ್ಯವನ್ನೇ ನಡಿಸಿಕೊಂಡು" ಹೋಗಿರಿ.* ಒಂದು ಅರ್ಥದಲ್ಲಿ ನಾವು "ಪರರ ಹಿತವನ್ನು . . . ನೋಡಬೇಕು" (ಫಿಲಿಪ್ಪಿ 2:4). ಹೇಗೂ, ನಾವು ಮತ್ತೊಬ್ಬರ ವ್ಯವಹಾರಗಳಲ್ಲಿ ಮೂಗುವ ತೂರಿಸುವವರಾಗಿರಬಾರದು. ಪೇತ್ರನು ಹೀಗೆ ಬರೆದನು, "ನಿಮ್ಮಲ್ಲಿ ಯಾವನಾದರೂ ಕೊಲೆಗಾರನು ಕಳ್ಳನು ದುಷ್ಟನು ಪರಕಾರ್ಯಗಳಲ್ಲಿ ತಲೆಹಾಕುವವನು ಆಗಿದ್ದು ಶಿಕ್ಷಾಪಾತ್ರನಾಗಬಾರದು" (1 ಪೇತ್ರ 4:15). ಬೇರೆಯವರ ವಿಷಯಗಳಲ್ಲಿ ತಲೆ ಹಾಕದೆ ದೂರವಿರುವದಕ್ಕೆ ಉತ್ತಮ ದಾರಿಯೆಂದರೆ ನಿಮ್ಮ ಕೆಲಸವನ್ನು ನೀವು ನೋಡಿಕೊಳ್ಳುವದು. ನಾವು ನಮ್ಮ ಜವಾಬ್ದಾರಿಗಳನ್ನು ತಿಳಿದಿರತಕ್ಕದ್ದು, ಅವುಗಳನ್ನು ಸ್ವೀಕರಿಸಿಕೊಳ್ಳತಕ್ಕದ್ದು, ಮತ್ತು ಅವುಗಳನ್ನು ನೆರವೇರಿಸಬೇಕು.

*ನಿಮ್ಮ "ಕೈಯಾರೆ ಕೆಲಸ ಮಾಡಿರಿ."* ನಮಗೆ "ಯಾವದಕ್ಕೂ ಕೊರತೆಯಿರದ" ಹಾಗೆ ನಾವು ಕೆಲಸವನ್ನು ಮಾಡಬೇಕು (ವ. 12b). ನಮಗೆ ಕೆಲಸ ಮಾಡುವದಕ್ಕೆ ಶಕ್ತಿಯಿರುವಾಗ ಬೇರೆಯರನ್ನು ಅವಲಂಭಿಸುವದು ತಪ್ಪಾದದ್ದು. ಪೌಲನು ಅನಂತರ

2 ಥೆಸಲೋನಿಕದವರಿಗೆ ಬರೆದ ಪತ್ರಿಕೆಯಲ್ಲಿ ಹೀಗೆ ಬರೆದನು, "ಕೆಲಸ ಮಾಡಲೊಲ್ಲದವನು ಊಟಮಾಡಬಾರದು" (3:10). ಇದರರ್ಥವು ಒಬ್ಬನು ಅಂಗವಿಕಲನಾಗಿದ್ದರೆ ಅಥವಾ ಕೆಲಸವನ್ನು ಕಂಡುಕೊಳ್ಳಲು ಆಗಿದ್ದರೆ ಅಂಥವನಿಗೆ ಸಹಾಯ ಮಾಡಬಾರದೆಂದು ಆಗಿರುವದಿಲ್ಲ (ನೋಡಿರಿ ಎಫೆಸ 4:28; ಯಾಕೋಬ 2:14-16). ಬದಲಾಗಿ, ಪೌಲನು ಮಾತುಗಳು ಥೆಸಲೋನಿಕದಲ್ಲಿ ಕೆಲಸವನ್ನು ಮಾಡದೆ ಸಭೆಯ ಹೆಸರನ್ನು ಹಾಳು ಮಾಡುತ್ತಿದ್ದ ಗಲಭೆಕೋರರಿಗೆ ಹೇಳಿದವುಗಳಾಗಿದ್ದವು. ಪೌಲನು ಒಂದು ಒಳ್ಳೇ ಮಾದರಿಯನ್ನು ತೋರಿಸಬೇಕೆಂದು ಸಭೆಯನ್ನು ಬೇಡಿಕೊಂಡನು, ಹೀಗೆ "[ಅವರು] ಹೊರಗಿನವರ ಮುಂದೆ ಸಜ್ಜನರಾಗಿ ನಡೆದುಕೊಳ್ಳುವರು ಮತ್ತು . . . ಯಾವದಕ್ಕೂ ಕೊರತೆಯಿರುವದಿಲ್ಲ" (ವ. 12).

ನಮ್ಮ ಸಭೆಗಳಲ್ಲಿ ನಾವು ಎಂದಾದರೂ ಅಂಥ ಜನರನ್ನು ಹೊಂದಿರುತ್ತೇವೊ? ಪೌಲನು "ಹೋಗಿ ಕೆಲಸ ಮಾಡಿರಿ" ಎಂದು ಹೇಳಿದನು. ನಾವು ಕರ್ತನ ಸಭೆಯನ್ನು ಮುರಿಯುವದರ ಬದಲಾಗಿ ಅದನ್ನು ಕಟ್ಟುವಂತ ಪ್ರಯತ್ನಗಳ ಮೇಲೆ ಮುಖ್ಯ ಗಮನವನ್ನು ಹರಿಸುವಂತೆ ಒಬ್ಬರನೊಬ್ಬರು ಪ್ರೋತ್ಸಾಹಿಸುವ ಅಗತ್ಯವಿರುತ್ತದೆ. EE

## ಪ್ರೀತಿಸುವದು ಮತ್ತು ಜೀವಿಸುವದು (4:9-12)

ಕ್ರೈಸ್ತರಲ್ಲಿ ಬೆಳೆಯುವದಕ್ಕೆ ಯಾವಾಗಲೂ ಅವಕಾಶವಿರುತ್ತದೆ. ಹೊಸ ಒಡಂಬಡಿಕೆಯ ಇತರ ಪತ್ರಿಕೆಗಳ ಹಾಗೆಯೇ, 1 ಥೆಸಲೋನಿಕದವರಿಗೆ ಬರೆದ ಪತ್ರಿಕೆಯು ಉತ್ತಮ ನಡವಳಿಕೆಯಲ್ಲಿ ಬೆಳೆಯುವದನ್ನು ಪ್ರೋತ್ಸಾಹಿಸುತ್ತದೆ. ಈ ಪತ್ರಿಕೆಯು ಯಾರಿಗೆ ಬರೆಯಲ್ಪಟ್ಟಿತೋ ಆ ಯುವ, ನಂಬಿಗಸ್ತ, ಮತ್ತು ಪ್ರೀತಿಸುತ್ತಿದ್ದ ಕ್ರೈಸ್ತರಿಗೆ ಅನೈತಿಕತೆಯಿಂದ ದೂರವಾಗಿದ್ದು ಪರಿಶುದ್ಧತೆಗಾಗಿ ಪರಿಶ್ರಮ ಪಡಬೇಕು ಎಂದು ಬೋಧಿಸಲಾಯಿತು, ಆದರೆ ಅವರಿಗೆ ಜೀವನದಲ್ಲಿ ಎರಡು ಸಕಾರಾತ್ಮಕ ಮನೋಭಾವಗಳನ್ನು ಬೆಳೆಸಿಕೊಳ್ಳುವಂತೆ ಸಹ ಪ್ರೋತ್ಸಾಹಿಸಲಾಯಿತು: ಹುಮ್ಮಸ್ಸಿನಿಂದ ಪ್ರೀತಿಸುವದು ಮತ್ತು ಶಾಂತವಾದ ಜೀವನ ನಡಿಸುವದು. ಈ ಗುಣಗಳು ಅವರ ಸುತ್ತಲಿದ್ದ, ಅವರ ಜೊತೆಯ ಕ್ರೈಸ್ತರು ಮತ್ತು ಕರ್ತನ ಸಭೆಯ ಹೊರಗಿದ್ದವರು ಇಬ್ಬರ ಮೇಲೆಯೂ ಒಂದು ಒಳ್ಳೇ ಪ್ರಭಾವವನ್ನು ಉಂಟುಮಾಡುವವುಗಳಾಗಿದ್ದವು. ದೇವರ ದೃಷ್ಟಿಯಲ್ಲಿ ಸರಿಯಾದ ರೀತಿಯ ಮನೋಭಾವವನ್ನು ಹೊಂದಿರುವದೇ ಅವರ ಸುತ್ತಲಿನ ಮೇಲೆ ಒಂದು ಸಕಾರಾತ್ಮಕ ಮತ್ತು ಸಹಾಯಕರವಾದ ಪ್ರಭಾವವನ್ನು ಬೀರುವದಕ್ಕೆ ಸಾಧ್ಯವಾದ ಉತ್ತಮ ದಾರಿಯಾಗಿರುತ್ತದೆ. ಅವರ ಜೀವಿತಗಳಲ್ಲಿ ಸುವಾರ್ತೆಯು ತೋರ್ಪಡಿಸಲ್ಪಡುವದು.

ದೇವರ ದಾರಿಯಲ್ಲಿ ಪ್ರೀತಿಸುವದು ಮತ್ತು ಜೀವಿಸುವದು ಕ್ರೈಸ್ತ ಬೆಳವಣಿಗೆ ಭಾಗವಾಗಿ ನಾವು ಅಭಿವೃದ್ಧಿಪಡಿಸಿಕೊಳ್ಳುವ ಗುಣಸ್ವಭಾವಗಳಲ್ಲೊಂದಾಗಿದೆ. ಕ್ರೈಸ್ತ ಪರಿಪಕ್ವತೆಯಲ್ಲಿ ನಾವು ನಮ್ಮ ಸುತ್ತಲಿನವರೊಂದಿಗೆ ಹೇಗೆ ನಡೆದುಕೊಳ್ಳುತ್ತೇವೆ ಎಂಬುದು ಮಾತ್ರವಲ್ಲದೆ ನಮ್ಮ ದೈನಂದಿನ ಜೀವಿತಗಳಲ್ಲಿ ಹೇಗೆ ಕಾರ್ಯನಿರ್ವಹಿಸುತ್ತೇವೆಂಬುದು ಸಹ ಸೇರಿರುತ್ತದೆ.

*ಪ್ರೀತಿಸುವದರಲ್ಲಿ ಬೆಳೆಯಿರಿ (4:9, 10).* ನಾವು ಪ್ರೀತಿಯಲ್ಲಿ ಬೆಳೆಯುತ್ತಿದ್ದೇವೋ? ಈ

ಪ್ರಶ್ನೆಯನ್ನು ಕೇಳಲ್ಪಡುವದು ಮುಜಗರವನ್ನುಂಟು ಮಾಡುವದಾಗಿದೆ. ಕೆಲವು ಸಾರಿ ಮುಜಗರಕ್ಕೊಳಗಾಗುತ್ತೇವೆ ಯಾಕೆಂದರೆ ನಾವು ಪ್ರೀತಿಯಲ್ಲಿ ಪರಿಪಕ್ವತೆಯನ್ನು ಹೊಂದುವದಕ್ಕೆ ಪ್ರಯತ್ನಿಸದವರಾಗಿರುತ್ತೇವೆ. ಕೆಲವು ಸಾರಿ ಹಾಗೆ ಕೇಳುವದು ನಮಗೆ ಕಸಿವಿಸಿಯನ್ನುಂಟು ಮಾಡುತ್ತದೆ ಯಾಕೆಂದರೆ ಪ್ರೀತಿಸುವದು ನಮ್ಮ ಸ್ವಭಾವವಲ್ಲ ಎಂದು ಭಾವಿಸಿಕೊಳ್ಳುತ್ತೇವೆ. ಹಾಗೆ ಕೇಳಲ್ಪಡುವದು ಕೆಲವು ಸಾರಿ ನಮಗೆ ಬೇಸರವನ್ನು ಸಹ ತರಬಲ್ಲದು ಯಾಕೆಂದರೆ ನಾವು ಈಗಾಗಲೇ ಜನರನ್ನು ಪ್ರೀತಿಸುತ್ತಿದ್ದೇವೆಂದು ನಂಬಿರುತ್ತೇವೆ.

ಅಪೊಸ್ತಲನು ಸುವಾರ್ತೆಯನ್ನು ಸಾರುವದಕ್ಕಾಗಿ ಥೆಸಲೋನಿಕಕ್ಕೆ ಬಂದಿದ್ದನು (2:2), ಈ ಜನರು ಪರಿವರ್ತನೆಗೊಂಡಿದ್ದರು ಮತ್ತು ಅದನ್ನು ದೇವರ ವಾಕ್ಯವೆಂದು ಸ್ವೀಕರಿಸಿಕೊಂಡಿದ್ದರು (2:13). ಅವರ ಉಪದೇಶದಲ್ಲಿ ದೇವರ ಪ್ರೀತಿಯ ಕುರಿತಾದ ಸಂದೇಶವನ್ನು ಒಳಗೊಂಡಿತ್ತೆಂಬುದರಲ್ಲಿ ಸಂಶಯವಿಲ್ಲ (1:4). ಅಲ್ಲದೆ ಬೋಧಕರು ತಮ್ಮ ಕ್ರಿಯೆಗಳಲ್ಲಿ ಸಹ ಥೆಸಲೋನಿಕದವರ ಕಡೆಗೆ ಈ ಪ್ರೀತಿಯನ್ನು ತೋರ್ಪಡಿಸಿದ್ದರು (2:7, 8). ಹೊಸದಾಗಿ ಕ್ರೈಸ್ತರಾದವರು ತಮಗೆ ಕಲಿಸಲ್ಪಡುವದನ್ನು ಕೇಳಿ ಮತ್ತು ಈ ಸಂಚಾರಿ ಬೋಧಕರಿಂದ ಅನುಭವ ಮಾಡಿದ್ದ ಆ ಪ್ರೀತಿಯನ್ನು ಅನುಸರಿಸಿದ್ದರು (3:6). ಅವರಿಗೆ ಪ್ರೀತಿಯ ಕುರಿತು ಹೇಳಬೇಕಾದ ಅಗತ್ಯವಿರಲಿಲ್ಲ ಯಾಕೆಂದರೆ ಅವರು ಈಗಾಗಲೇ ಆ ಆಜ್ಞೆಯನ್ನು ಕೇಳಿದ್ದರು, ಅನುಭವಿಸಿದ್ದರು, ಮತ್ತು ಅನುಸರಿಸಿದ್ದರು.

ಈ ಪ್ರಕ್ರಿಯೆಯ ಕುರಿತಾಗಿಯೇ ಅದು ದೇವ ಜನರೊಳಗೆ ಸುವಾರ್ತೆಯ ಪುರಾವೆಯಾಗುವದೆಂದು ಯೇಸು ಮುಂತಿಳಿಸುವವನಾಗಿ ಹೀಗೆ ಹೇಳಿದ್ದನು, “ನಾನು ನಿಮಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ; ಏನಂದರೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು; ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಸಹ ಒಬ್ಬರನ್ನೊಬ್ಬರು ಪ್ರೀತಿಸಬೇಕು ಎಂಬದೆ. ನಿಮ್ಮೊಳಗೆ ಒಬ್ಬರ ಮೇಲೊಬ್ಬರಿಗೆ ಪ್ರೀತಿಯಿದ್ದರೆ ಎಲ್ಲರೂ ನಿಮ್ಮನ್ನು ನನ್ನ ಶಿಷ್ಯರೆಂದು ತಿಳುಕೊಳ್ಳುವರು” (ಯೋಹಾನ 13:34, 35). ತಾನು ಎಳೆಯ ಸಭೆಗೆ ಬರೆದ ತನ್ನ ಪತ್ರಿಕೆಯಲ್ಲಿ, ಪೌಲನು ಈ ಪ್ರಕ್ರಿಯೆಯು ಮುಂದುವರೆಯಬೇಕು ಮತ್ತು ಅವರ ಜೀವಿತಗಳಲ್ಲಿ ವಿಸ್ತಾರಗೊಳ್ಳಬೇಕೆಂಬುದು ದೇವರ ಯೋಜನೆಯಾಗಿದೆ ಎಂಬದಾಗಿ ಹೇಳುತ್ತಾನೆ.

ಈ ಕ್ರೈಸ್ತರು ಅವರ ಸಭೆಯಲ್ಲಿದ್ದರ ಮೇಲೆಯೂ ಆ ಪ್ರಾಂತ್ಯದಲ್ಲಿದ್ದ ಬೆರೋಯ ಮತ್ತು ಫಿಲಿಪ್ಪಿಯದಲ್ಲಿನ ಸಭೆಗಳವರ ಮೇಲೆಯೂ ಹೊಂದಿದ್ದ ಪ್ರೀತಿಗಾಗಿ ಶ್ಲಾಘಿಸಲ್ಪಟ್ಟರು. ಪತ್ರಿಕೆಯ ಆರಂಭದಲ್ಲಿ ಅವರಿಗೆ ಪ್ರೋತ್ಸಾಹವನ್ನು ಮಾಡಿದ ಪ್ರಕಾರವೇ (3:12), ಪ್ರೀತಿಯಲ್ಲಿ ಬೆಳೆಯುವಂತೆ ಪ್ರೋತ್ಸಾಹಿಸಲಾಯಿತು. ಈ ಪತ್ರಿಕೆಯನ್ನು ಸ್ವೀಕರಿಸಿಕೊಂಡವರನ್ನು ಪ್ರೀತಿಯಿಲ್ಲದವರೆಂದು ಟೀಕಿಸುತ್ತಿಲ್ಲ, ಆದರೆ ಅವರಿಗೆ ತಮಗೆ ಸಾಧ್ಯವಾದಷ್ಟರ ಮಟ್ಟಿಗೆ ಹೆಚ್ಚುತ್ತಾ ಬರಬೇಕೆಂದು ಪ್ರೋತ್ಸಾಹಿಸಲಾಗುತ್ತಿದೆ (4:9, 10).

ಈ ಪ್ರೀತಿಸುತ್ತಿದ್ದಂತ ಸಭೆಗೆ ಇನ್ನೂ ಹೆಚ್ಚಾಗಿ ಪ್ರೀತಿಸುವವರಾಗಬೇಕೆಂದು ಏಕೆ ಪದೇ ಪದೇ ಬೇಡಿಕೊಳ್ಳಲಾಯಿತು? ಅವರ ಪಾಲಿಗೆ ಪ್ರೀತಿಯು ಕ್ರೈಸ್ತತ್ವದ ಒಂದು ಪ್ರಾಮುಖ್ಯವಾದ ಅಂಶವಾಗಿರಬಹುದಾಗಿದೆ. ಅದು ಅವರಿಗೆ ಪ್ರಾಮುಖ್ಯವಾಗಿದ್ದಿದ್ದರೆ, ಅದು

ನಮಗೆ ಸಹ ಪ್ರಾಮುಖ್ಯವಾಗಿರಬೇಕಷ್ಟೆ. ನಮ್ಮ ಪ್ರೀತಿಸುವಿಕೆಯ ವಿಷಯವೇನು? ನಮ್ಮ ಪ್ರೀತಿಯ ಕುರಿತಾಗಿ ನಮ್ಮ ಸಭೆಗಳಲ್ಲಿ ಮತ್ತು ನಮ್ಮ ಸಮುದಾಯಗಳಲ್ಲಿ ಜನರಿಗೆ ತಿಳಿದದೆಯೋ? ಯೇಸುವಿನನ ಈ ಹೊಸ ಶಿಷ್ಯರಂತೆಯೇ ಪ್ರೀತಿಸುವವರು ಎಂಬ ಖ್ಯಾತಿಯನ್ನು ಹೊಂದಿದ್ದೇವೋ?

ಪ್ರೀತಿಸುವದರಲ್ಲಿ ನಾವು ಹೇಗೆ ಉನ್ನತಿಯನ್ನು ಸಾಧಿಸಬಲ್ಲೆವು? ಇನ್ನೂ ಹೆಚ್ಚಾಗಿ ಪ್ರೀತಿಸುವವರಾಗಿರುವಂತೆ ನಾವು ಬೇರೆಯವರಿಗೆ ಹೇಗೆ ಸಹಾಯ ಮಾಡಬಲ್ಲೆವು? ಯೇಸುವಿನ ಪ್ರೀತಿಯನ್ನು ಅರ್ಥಮಾಡಿಕೊಳ್ಳುವದರಿಂದ ಮತ್ತು ಪ್ರತಿಬಿಂಬಿಸುವದ ರಿಂದಲೇ ಆಗಿದೆ. ಯೇಸುವು ತನ್ನ ಶಿಷ್ಯರನ್ನು "ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ" ಒಬ್ಬರನ್ನೊಬ್ಬರು ಪ್ರೀತಿಸಬೇಕೆಂದು ಕೇಳಿಕೊಂಡನು (ಯೋಹಾನ 13:34; 15:12). ಮೊದಲನೆಯದಾಗಿ, ಆತನ ಪ್ರೀತಿಯು ಹೇಗಿರುತ್ತದೆಂಬುದನ್ನ ನಾವು ಅರ್ಥಮಾಡಿಕೊಳ್ಳಬೇಕು.

ನಮಗೆ ಯೇಸುವಿನಿಂದ ತೋರ್ಪಡಿಸಲ್ಪಟ್ಟ ದೇವರ ಪ್ರೀತಿಯ ಕುರಿತು ಪಾಠಗಳ ಅಗತ್ಯವಿರುತ್ತದೆ. ನಮಗೆ ಯೇಸುವನ್ನು ಹಿಂಬಾಲಿಸುವ ಕುರಿತು, ಆತನ ನಿಜವಾದ ಶಿಷ್ಯರಾಗಿರುವ ಮತ್ತು ಆತನ ಹೆಜ್ಜೆಯ ಜಾಡುಗಳಲ್ಲಿ ನಡೆಯುವ ಕುರಿತು ಪಾಠಗಳ ಅಗತ್ಯವಿರುತ್ತದೆ. ನಮಗೆ ಪ್ರೀತಿಯ ಆಲೋಚನೆಗಳು, ನುಡಿಗಳು, ಮತ್ತು ಕ್ರಿಯೆಗಳ ಕುರಿತು ಪಾಠಗಳ ಅಗತ್ಯವಿರುತ್ತದೆ. ನಾವು ಒಂದೊಂದು ಸಾರಿ ಒಬ್ಬೊಬ್ಬನಿಗೆ ಪ್ರೀತಿಯನ್ನು ತೋರಿಸುವ ಮೂಲಕ ಕ್ರಿಸ್ತನ ರೀತಿಯ ಪ್ರೀತಿಯನ್ನು ಸರಳವಾದ ದಾರಿಗಳಲ್ಲಿ ಅಭ್ಯಾಸಿಸುವದನ್ನು ಕಲಿತುಕೊಳ್ಳಲಾರಂಭಿಸಬಹುದು. ಈ ಬೋಧಕರು ಹೊಸ ಕ್ರೈಸ್ತರೆಡೆಗೆ ತೋರಿದ ಕ್ರಿಯೆಗಳನ್ನು ಅಭ್ಯಾಸ ಮಾಡಿಕೊಳ್ಳುವ ಹಾಗೆ ದೇವರ ಪ್ರೀತಿಯು ನಮ್ಮನ್ನು ಸ್ಫೂರ್ತಿಗೊಳಿಸುವಂತೆ ನಾವು ಅನುಸರಿಸುವದಾದಲ್ಲಿ, ನಾವು ಬೇರೆಯವರಿಗೆ ಬೆಳೆಯುವಂತೆ ಪ್ರೀತಿಯಿಂದ ಸಹಾಯ ಮಾಡುವವರಾಗುತ್ತೇವೆ.

*ಜೀವಿಸುವದರಲ್ಲಿ ಬೆಳೆಯಿರಿ (4:11).* ಥೆಸಲೋನಿಕದಲ್ಲಿದ್ದ ಕ್ರೈಸ್ತರಿಗೆ ಸ್ವಂತ ಕೆಲಸವನ್ನು ಮಾಡುವದು ಅವರ "ಆಕಾಂಕ್ಷೆ" ಆಗಿರಬೇಕೆಂದು ಹೇಳಲಾಯಿತು (4:11). ಅವರ ಸ್ವಂತ ಕೆಲಸದಲ್ಲಿ ಉತ್ತಮತೆಯನ್ನು ಸಾಧಿಸಬೇಕೆಂದು ದೇವರ ಬಯಕೆಯಾಗಿತ್ತು. ಈ ಸಭೆಗೆ ಬರೆದ ಎರಡನೆಯ ಪತ್ರಿಕೆಯಲ್ಲಿ, ದೇವರು ಅವರಿಗೆ ಬೇರೆಯವರ ಕೆಲಸದಲ್ಲಿ ತಲೆಹಾಕುವದರ ಅಪಾಯದ ಕುರಿತಾಗಿ ಕಲಿಸಲಿರುವನು. ಕೆಲಸವು ಪ್ರಾಮುಖ್ಯವಾದದ್ದೆಂಬುದನ್ನು 11ನೇ ವಚನವು ಒತ್ತಿ ಹೇಳುತ್ತದೆ. ಅದು ದೇವರಿಗೆ ಪ್ರಾಮುಖ್ಯವಾದದ್ದು, ಮತ್ತು ಅದು ಅವರಿಗೆ ಸಹ ಪ್ರಾಮುಖ್ಯವಾಗಿರಬೇಕೆಂಬುದು ಆತನ ಬಯಕೆಯಾಗಿತ್ತು.

ದೇವರು ಕೇವಲ ಪ್ರಸಂಗಗಳನ್ನು ಸಾರುವವರ ಮತ್ತು ಬೈಬಲ್ ತರಗತಿಗಳನ್ನು ಬೋಧಿಸುವವರ ಕೆಲಸದಲ್ಲಿ ಮಾತ್ರವೇ ಆಸಕ್ತನಾಗಿದ್ದಾನೆ ಎಂಬದಾಗಿ ಕೆಲವು ಸಾರಿ ನಾವು ಯೋಚಿಸುತ್ತೇವೆ. ನಿಮ್ಮ "ಕೈಯಾರೆ ಕೆಲಸ ನಡಿಸುವದು" ಆತನಿಗೆ ಪ್ರಾಮುಖ್ಯವಾಗಿರುತ್ತದೆಂಬುದನ್ನು ಥೆಸಲೋನಿಕದ ಸಭೆಯು-ಮತ್ತು ನಾವು- ತಿಳುಕೊಳ್ಳಬೇಕೆಂದು ಆತನ ಬಯಕೆಯಾಗಿತ್ತು. ಆ ವಿಧದಲ್ಲಿ ಕೆಲಸ ಮಾಡುವಂತೆ ಈ

ಸಹೋದರರು ದೇವರಿಂದ ಆಜ್ಞೆಯನ್ನು ಹೊಂದಿದ್ದರು, ಆದರೆ ಅವರು ಬೇರೆಯವರಿಗೆ ಭಾರವಾಗಬಾರದೆಂದು ಹಗಲಿರುಳು ದುಡಿಯುವವರಾಗಿ ಸುವಾರ್ತೆಯನ್ನು ಸಾರುವದಕ್ಕೆ ಕಠಿಣ ಪರಿಶ್ರಮವನ್ನು ಪಡುವದಕ್ಕೆ ಸಿದ್ಧರಾಗಿದ್ದಂಥ ಜನರ ಶ್ರೇಷ್ಠ ಮಾದರಿಗಳನ್ನು ಸಹ ಕಂಡಿದ್ದರು (2:8, 9).

ಈ ಕ್ರೈಸ್ತರಿಗೆ ಈ ಮಾದರಿಯನ್ನು ಅನುಸರಿಸುವಂತೆ ಕೇಳಲಾಯಿತು. ಕೊಲೊಸ್ಸೆಯಲ್ಲಿನ ದಾಸರು ಮತ್ತು ಯಜಮಾನರ ಹಾಗೆಯೇ, ಅವರು ದೇವರೇ ನಮ್ಮ ಯಜಮಾನನೆಂದು, ಆತನ ಮಾರ್ಗದರ್ಶನದಡಿಯಲ್ಲಿ ಕೆಲಸ ಮಾಡುವದು ಆತನ ಕೆಲಸವನ್ನೇ ಮಾಡಿದಂತೆ ಎಂಬುದನ್ನು ಗ್ರಹಿಸಿಕೊಳ್ಳುವ ಅಗತ್ಯವಿತ್ತು. ಕೊಲೊಸ್ಸೆಯಲ್ಲಿರುವವರಿಗೆ ಹೀಗೆ ಹೇಳಲಾಯಿತು, "ನೀವು ಯಾವ ಕೆಲಸವನ್ನು ಮಾಡಿದರೂ ಅದನ್ನು ಮನುಷ್ಯರಿಗೋಸ್ಕರವೆಂದು ಮಾಡದೆ ಕರ್ತನಿಗೋಸ್ಕರವೇ ಎಂದು ಮನಃಪೂರ್ವಕವಾಗಿ ಮಾಡಿರಿ" (ಕೊಲೊಸ್ಸೆ 3:23). ಅವರು ಲೋಕದಲ್ಲಿಯೇ ಅತ್ಯಂಥ ಶ್ರೇಷ್ಠ ಯಜಮಾನನನ್ನು ಹೊಂದಿದ್ದರು! ಆತನು ನಮ್ಮ ಯಜಮಾನನು ಸಹ ಹೌದು! ಕರ್ತನಿಗೋಸ್ಕರ ಕೆಲಸ ಮಾಡಿರಿ!

ನಾವು ಆಕಾಂಕ್ಷಿಗಳಾಗಿರಬೇಕೆಂಬದು ದೇವರ ಬಯಕೆಯಾಗಿದೆ. ನಾವು ನಮ್ಮ ಆಕಾಂಕ್ಷೆಗಳನ್ನ ಭಕ್ತಿಹೀನವಾದ ದಾರಿಗಳಲ್ಲಿ ಸಾಧಿಸಿಕೊಳ್ಳುವದು ಆತನ ಬಯಕೆಯಲ್ಲ, ಆದರೆ ನಮ್ಮ ಸ್ವಂತ ಕೆಲಸದಲ್ಲಿ ಸಾಧ್ಯವಾದಷ್ಟು ಉತ್ತಮ ಪ್ರಯತ್ನವನ್ನು ಮಾಡುವ ಮೂಲಕವೇ ಸಾಧಿಸಬೇಕೆಂಬದು ಆತನ ಬಯಕೆಯಾಗಿದೆ. ಆತನಿಗೆ ನಮ್ಮ ಸಾಮರ್ಥ್ಯಗಳು ಮತ್ತು ಇತಿಮಿತಿಗಳು ಗೊತ್ತಿವೆ. ಆತನು ಯಾವಾಗಲೂ ನಮಗೆ ಅತ್ಯುತ್ತಮವಾದದ್ದನ್ನೇ ಬಯಸುತ್ತಾನೆ. ಕೆಲಸವು ನಮಗೆ ಉತ್ತಮವಾದದ್ದು ಮತ್ತು ಅದನ್ನು ಮಾಡುವದರಿಂದ ನಮಗೂ ಬೇರೆಯವರಿಗೂ ಪ್ರಯೋಜನಗಳಾಗುವವು ಎಂಬುದನ್ನು ಆತನು ಬಲ್ಲವನಾಗಿದ್ದಾನೆ. ನಮ್ಮ ಕೆಲಸವು ದೇವರಿಗೆ ಪ್ರಾಮುಖ್ಯವಾಗಿರುತ್ತದೆ.

ನಾವು ದೇವರಿಗಾಗಿ ಕೆಲಸ ಮಾಡುತ್ತಿದ್ದೇವೆ ಎಂಬುದನ್ನು ಗ್ರಹಿಸಿಕೊಂಡು, ಬಳಿಕ ಅದರಂತೆಯೇ ನಮ್ಮ ಕೆಲಸವನ್ನು ಮಾಡುವದು ದೇವರಿಗೆ ಮೆಚ್ಚಿಕೆಯನ್ನುಂಟು ಮಾಡುತ್ತದೆ.

*ಹೊರಗಿನವರ ಮೇಲೆ ಛಾಪು ಮೂಡಿಸಿರಿ (4:12).* ನಿಮ್ಮ ಉದ್ಯೋಗದಲ್ಲಿ ದೇವರಿಗೋಸ್ಕರ ಶಾಂತರಾಗಿದ್ದು ಕೆಲಸ ಮಾಡುವದರ ಫಲಿತಗಳೇನು? 4:12ರಲ್ಲಿ ಎರಡು ಫಲಿತಗಳು ಪ್ರಸ್ತಾಪಿಸಲ್ಪಟ್ಟಿವೆ: ಸಭೆಯ ಹೊರಗಿನವರ ಮೇಲೆ ಪ್ರಭಾವ ಬೀರಲ್ಪಡುತ್ತದೆ ಮತ್ತು ನಿಮ್ಮ ಅಗತ್ಯತೆಗಳ ಮೇಲೆ ಪ್ರಭಾವ ಬೀರಲ್ಪಡುತ್ತದೆ.

ಸಭೆಯ ವಿಷಯದಲ್ಲಿ ಹೊರಗಿನವರು ಏನು ಯೋಚಿಸುತ್ತಾರೆ? ಥೆಸಲೋನಿಕದಲ್ಲಿ ಕೆಲವರು ಸುವಾರ್ತೆಯು ಸಾರಲ್ಪಡುವದನ್ನು ಮತ್ತು ಸಂದೇಶವನ್ನು ಅನುಸರಿಸಿದವರನ್ನು ವಿರೋಧಿಸಿದರು. ಸುವಾರ್ತೆ ಸಾರುವವರನ್ನು ಮತ್ತು ಸಂದೇಶಕ್ಕೆ ಸ್ಪಂದಿಸಿದವರನ್ನು ಹಿಂಸಿಸುವದರಲ್ಲಿ ಕೆಲವು ಯೆಹೂದ್ಯರು ತೋರಿದ ಹುಮ್ಮಸ್ಸನ್ನು ಅಪೊಸ್ತಲರ ಕೃತ್ಯಗಳು 17ನೇ ಅಧ್ಯಾಯವು ವರ್ಣಿಸುತ್ತದೆ. ಹೊರಗಿನವರು ಸಭೆಯ ಕಡೆಗೆ ಹೇಗೆ ಪ್ರತಿಕ್ರಿಯಿಸುವರು? ಅವರು ಅದನ್ನು ಪ್ರೀತಿಸುವರೋ ಅಥವಾ ದ್ವೇಷಿಸುವರೋ? ಅದು

ಅವರ ಇಷ್ಟಕ್ಕೆ ಬಿಟ್ಟದ್ದು. ನಾವು ನಮ್ಮ ನೆರೆಯವರ ದೃಷ್ಟಿಯಲ್ಲಿ ಕ್ರೈಸ್ತರಾಗಿ ಹೇಗೆ ನಡಕೊಳ್ಳುತ್ತೇವೆ ಎಂಬುದರ ಬಗ್ಗೆ ಮಾತ್ರವೇ ದೇವರು ಕಳಕಳಿಯನ್ನು ಹೊಂದಿದ್ದಾನೆ. ಹಿಂಸೆಯ ಸಮಯಗಳಲ್ಲಿ ಸಹ, ಥೆಸಲೋನಿಕದಲ್ಲಿನ ಕ್ರೈಸ್ತರು ಸಜ್ಜನಿಕೆಯಿಂದ ನಡೆದುಕೊಳ್ಳಬೇಕಿತ್ತು. ಚದುರಿಸಲ್ಪಟ್ಟಿದ್ದ ಕ್ರೈಸ್ತರಿಗೆ ಹೀಗೆ ಹೇಳಲಾಯಿತು, "ನಿಮ್ಮ ನಡವಳಿಕೆಯು ಅನ್ಯಜನರ ಮಧ್ಯದಲ್ಲಿ ಯೋಗ್ಯವಾಗಿರಲಿ; ಆಗ ಅವರು ಯಾವ ವಿಷಯದಲ್ಲಿ ನಿಮ್ಮನ್ನು ಅಕ್ರಮಗಾರರೆಂದು ನಿಂದಿಸುತ್ತಾರೋ ಆ ವಿಷಯದಲ್ಲಿಯೇ ನಿಮ್ಮ ಸತ್ಕ್ರಿಯೆಗಳನ್ನು ಕಣ್ಣಾರೆ ಕಂಡು ವಿಚಾರಣೆಯ ದಿನದಲ್ಲಿ ದೇವರನ್ನು ಕೊಂಡಾಡುವರು" (1 ಪೇತ್ರ 2:12).

ಕ್ರಿಸ್ತನಿಂದ ಹೊರಗಿರುವವರ ಸಂಗಡ ಸಂಪರ್ಕವನ್ನು ಹೊಂದಿರುವದರಲ್ಲಿ, ಕೆಟ್ಟದ್ದರಿಂದ ದೂರವಾಗಿರುವ ಪ್ರಾಮುಖ್ಯವಾಗಿರುತ್ತದೆಂಬುದು ಮಾತ್ರವಲ್ಲದೆ, ಅವರು ನಮ್ಮ ಜೀವಿತಗಳಲ್ಲಿ ಒಳ್ಳೇದನ್ನು ಕಾಣುವಂತೆ ಮಾಡುವದು ಸಹ ಪ್ರಾಮುಖ್ಯವಾಗಿರುತ್ತದೆ. "ಸಮಯವನ್ನು ಸುಮ್ಮನೆ ಕಳಕೊಳ್ಳದೆ ಅದನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿ ಹೊರಗಿನವರ ಮುಂದೆ ಜ್ಞಾನವುಳ್ಳವರಾಗಿ ನಡೆದುಕೊಳ್ಳಿರಿ" (ಕೊಲೊಸ್ಸೆ 4:5). ಹೊರಗಿನವರೊಂದಿಗೆ ನಾವು ಹೊಂದಿರುವ ಒಡನಾಟವನ್ನು ದೇವರು ಅವರಿಗೆ ನಾವು ದೇವರ ದಾರಿಯನ್ನು ತೋರಿಸುವದಕ್ಕಾಗಿ ಇರುವ ಬೆಲೆಯುಳ್ಳ ಅವಕಾಶವೆಂಬಂತೆ ಕಾಣುತ್ತಾನೆ. ಇದಕ್ಕೆ ಅವರು ಹೇಗೆ ಪ್ರತಿಕ್ರಿಯಿಸುತ್ತಾರೆಂಬುದು ಅವರಿಷ್ಟಕ್ಕೆ ಬಿಟ್ಟಿದ್ದು. ಅವರ ಪ್ರತಿಕ್ರಿಯೆಗಳಿಗೆ ನಾವು ಜವಾಬ್ದಾರರಲ್ಲ, ಆದರೆ ನಮಗೆ ನಮ್ಮ ಜೀವಿತಗಳ ಮೂಲಕ ಕಲಿಸುವದಕ್ಕೆ ಒಂದು ಅವಕಾಶವು ಇರುತ್ತದೆ, ಮತ್ತು ಅವರ ಜೀವಿತಗಳಲ್ಲಿ ದೇವರು ಏನು ಮಾಡಲಿಚ್ಛಿಸುತ್ತಾನೆಂಬುದನ್ನು ತಿಳುಕೊಳ್ಳುವದಕ್ಕೆ ಅವರಿಗೂ ಒಂದು ಸಮರ್ಥ ಅವಕಾಶವು ಇರುತ್ತದೆ. ನಾವು ಅವರಿಗೆ ನಮ್ಮ ಜೀವಿತಗಳಲ್ಲಿ ದೇವರ ವಾಕ್ಯವು ಕ್ರಿಯೆಯಲ್ಲಿ ತೊಡಗಿರುವದನ್ನು ನೋಡುವಂತೆ ಅವರ ಮೊದಲ ಮತ್ತು ಏಕೈಕ ಸಂದರ್ಭವನ್ನು ಒದಗಿಸುವವರಾಗಬಹುದು!

ದೇವರನ್ನು ಮತ್ತು ಆತನ ಸಂದೇಶವನ್ನು ತಿಳಿಯದವರ ಮಧ್ಯದಲ್ಲಿ ಕ್ರೈಸ್ತರಾಗಿ ನಾವು ದೇವರ ದಾರಿಯನ್ನು ಅನುಸಿಸುವಾಗ, ನಮ್ಮ ಕ್ರಿಯೆಗಳಿಗೆ ಕಾರಣವೇನೆಂಬುದಾಗಿ ಹೊರಗಿನವರು ಚಕಿತರಾಗಬಹುದು. ದೇವರು ಬಯಸುವದನ್ನು ಮಾಡುವದಕ್ಕೆ ನಾವು ಪ್ರಯತ್ನಿಸುತ್ತಿದ್ದೇವೆಂಬುದಾಗಿ ಅವರಿಗೆ ಹೇಳುವದಕ್ಕೆ ಇದೊಂದು ನಮಗೆ ಉತ್ತಮ ಸಂದರ್ಭವಾಗುವದು. ನಾವು "ನನ್ನ ತಾಯಿಯು ಅದನ್ನೇ ನನಗೆ ಕಲಿಸಿದ್ದಾಳೆ," ಅಥವಾ "ಅದೇ ಸರಿಯೆಂದು ನನಗನ್ನಿಸುತ್ತದೆ" ಎಂಬದಾಗಿ ಹೇಳಬೇಕೆನ್ನುವ ಶೋಧನೆಯನ್ನು ನೀವು ಎದುರಿಸಿ ನಿಲ್ಲಬೇಕು. ಈ ಹೇಳಿಕೆಗಳು ಸತ್ಯವಾಗಿರಬಹುದಾರೂ, ಅವುಗಳು ದೇವರಿಗೆ ಮಹಿಮೆಯನ್ನು ಸಲ್ಲಿಸುವದಿಲ್ಲ. ಬದಲಾಗಿ, ಅವುಗಳ ನಮ್ಮ ಮೇಲೆಯೇ ಮುಖ್ಯ ಗಮನ ನೀಡುತ್ತವೆ. ನಾವು ಏನೇ ಮಾಡಿದರೂ ಅದಕ್ಕೆ ಕಾರಣವು ದೇವರು ಅದನ್ನು ಬಯಸುತ್ತಾನೆ ಎಂಬುದೇ ಆಗಿರಬೇಕು. ಹಾಗಾದರೆ, ನಾವು ದೇವರಿಗೆ ಮನ್ನಣೆ ಮತ್ತು ಗೌರವವನ್ನು ತರುವಂತೆ ಮಾಡುವಂಥ ಒಂದು ಉತ್ತರವನ್ನು ಕೊಡುವದು ನಮಗೆ ಉತ್ತಮವಾಗಿರುತ್ತದೆ. ಬಹುಶಃ ನಾವು ಹೀಗೆ ಹೇಳಬಹುದು "ದೇವರು ಅದನ್ನೇ ಬಯಸುತ್ತಾನೆ"; "ಅದೇ

ಕಾರ್ಯಮಾಡುವದಕ್ಕೆ ಉತ್ತಮ ದಾರಿಯೆಂಬುದಾಗಿ ದೇವರ ವಾಕ್ಯವು ನಮಗೆ ತಿಳಿಸುತ್ತದೆ"; ಅಥವಾ "ಈ ವಿಧವಾಗಿ ಜೀವನ ನಡಿಸುವದು ಹೆಚ್ಚಾದ ಪ್ರಯೋಜನಗಳನ್ನುಂಟು ಮಾಡುತ್ತದೆಂದು ದೇವರಿಗೆ ಗೊತ್ತಿದೆ."

ನಾವು ನಮ್ಮ ಸ್ವಂತ ಕೆಲಸವನ್ನು ಉತ್ತಮವಾಗಿ ಮಾಡಬೇಕೆಂಬುದಕ್ಕೆ 12ನೇ ವಚನದಲ್ಲಿ ಕೊಡಲ್ಪಟ್ಟಿರುವ ಇನ್ನೊಂದು ಕಾರಣವೇನೆಂದರೆ ನಮಗೆ ಕೊರತೆಯು ಉಂಟಾಗುವದಿಲ್ಲ ಎಂಬದೆ. ದೇವರು ನಮಗೆ ಏನೇ ಮಾಡಬೇಕೆಂದು ಹೇಳಿದರೂ ಅದು ನಮ್ಮ ಪ್ರಯೋಜನಗಳಿಗೆ ಆಗಿರುತ್ತದೆ. ಕೆಲಸವು ಹೊರಗಿನವರ ಮೇಲೆ ಒಳ್ಳೇ ಪ್ರಭಾವವನ್ನು ಬೀರುವದಷ್ಟೇ ಅಲ್ಲ, ಆದರೆ ಅದು ನಮ್ಮ ದೈನಂದಿನ ಅಗತ್ಯತೆಗಳನ್ನು ಸಹ ಸಂಧಿಸುತ್ತದೆ. ಎಫೆಸದಲ್ಲಿರುವ ಕ್ರೈಸ್ತರಿಗೆ ಹೀಗೆ ಹೇಳಲಾಯಿತು, "ಕಳವು ಮಾಡುವವನು ಇನ್ನು ಮೇಲೆ ಕಳವು ಮಾಡದೆ ಕೈಯಿಂದ ಯಾವದೊಂದು ಒಳ್ಳೇ ಉದ್ಯೋಗವನ್ನು ಮಾಡಿ ದುಡಿಯಲಿ; ಆಗ ಕಷ್ಟದಲ್ಲಿರುವರಿಗೆ ಕೊಡುವದಕ್ಕೆ ಅವನಿಂದಾಗುವದು" (ಎಫೆಸ 4:28). ನಮ್ಮ ಅಗತ್ಯತೆಗಳನ್ನು ಸಂಧಿಸಿಕೊಳ್ಳಲು ಮತ್ತು ಬೇರೆಯವರೊಂದಿಗೆ ಹಂಚಿಕೊಳ್ಳಲು ಕೆಲಸ ಮಾಡುವದು ಪ್ರತಿಯೊಬ್ಬ ಕ್ರೈಸ್ತನ ಜೀವಿತದ ಒಂದು ಭಾಗವಾಗಿರಬೇಕು.

ಈ ದಿನಗಳಲ್ಲಿ, ಸರ್ಕಾರಗಳು ಕಷ್ಟದಲ್ಲಿರುವವರ ಸಹಾಯಕ್ಕಾಗಿ ಅನೇಕ ಸಾರಿ ಕಲ್ಯಾಣ ಕಾರ್ಯಕ್ರಮಗಳನ್ನು ಹೊಂದಿರುತ್ತವೆ. ಈ ಕಾರ್ಯಕ್ರಮಗಳು ಅನೇಕರಿಗೆ ಸಹಾಯವನ್ನು ಒದಗಿಸಿವೆ, ಆದರೆ ನಮಗೆ ಸಹಾಯ ಮಾಡಿಕೊಳ್ಳುವದಕ್ಕಾಗಿ ದುಡಿಯುವ ಶಕ್ತಿಯು ನಮಗಿದ್ದರೂ ಈ ಸವಲತ್ತುಗಳನ್ನು ದುರ್ಬಳಕೆ ಮಾಡಿಕೊಳ್ಳುವದು ಭಕ್ತಿಹೀನವಾದದ್ದು. ಕ್ರೈಸ್ತರೊಳಗೆ ಕೆಲಸ ಮಾಡುವ ಇಚ್ಛೆಯೊಂದನ್ನು ನಾವು ಹೇಗೆ ಬೆಳೆಸಬಲ್ಲೆವು? ನಾವು ನಮ್ಮ ಮಕ್ಕಳೊಂದಿಗೆ ಆರಂಭಿಸಬಹುದು, ಅವರಿಗೆ ಸಾಧ್ಯವಾದಗಲೆಲ್ಲಾ ಸಹಾಯವನ್ನು ಒದಗಿಸುವಂತೆ ಪ್ರೋತ್ಸಾಹಿಸುವ ಮೂಲಕ, ಅವರು ನೆರವೇರಿಸಬೇಕಾದ ಜವಾಬ್ದಾರಿಗಳನ್ನು ಅವರಿಗೆ ಕೊಡುವ ಮೂಲಕ, ಅವರು ಪ್ರಾಯಕ್ಕೆ ಬರುವಾಗ ಅವರಿಗಿರುವ ಜವಾಬ್ದಾರಿಗಳೇನೆಂಬುದನ್ನು ಅವರಿಗೆ ಕಲಿಸುವ ಮೂಲಕ ಒಳ್ಳೇ ಮಾದರಿಗಳನ್ನು ತೋರುವವರಾಗಿರಬೇಕು. ಕೆಲವು ಒತ್ತಾಯದಿಂದ ಮಾಡಲ್ಪಡುವಂತದ್ದು ಅಥವಾ ಯಾರೂ ಗಮನಿಸದಿದ್ದಲ್ಲಿ ಕೆಲಸ ಮಾಡುವದರಿಂದ ದೂರವಿರಬೇಕು ಎಂಬಂತೆ ಭಾವಿಸಿಕೊಳ್ಳುವಂತೆ ಮಾಡುವ ಬದಲಾಗಿ, ಅವರು ಕೆಲಸವನ್ನು ದೇವರಿಂದ ಕೊಡಲ್ಪಟ್ಟದ್ದು, ಅಪೇಕ್ಷಿಸುವಂಥದ್ದು, ಮತ್ತು ಅವರಿಗೆ ಹಾಗೂ ಬೇರೆಯವರಿಗೆ ಪ್ರಯೋಜನಕರವಾದದ್ದೆಂದು ಕಾಣುವ ಹಾಗೆ ನಾವು ಸಹಾಯ ಮಾಡಬಹುದು.

ಸೋಮಾರಿಗಳಾಗಿರುವ ಕ್ರೈಸ್ತರು-ತಮ್ಮ ಕುಟುಂಬಗಳ ಬಗ್ಗೆ ಕಾಳಜಿಯಿಲ್ಲದವರು ಮತ್ತು ಕೆಲಸ ಮಾಡುವದನ್ನು ಇಷ್ಟಪಡದವರು-ದೇವರ ಗುಣಸ್ವಭಾವವನ್ನು ಕೆಟ್ಟದ್ದಾಗಿ ಪ್ರತಿಬಿಂಬಿಸುವವರಾಗಿದ್ದಾರೆ. ಅದಕ್ಕೆ ತದ್ವಿರುದ್ಧವಾಗಿ, ಕೆಲಸ ಮಾಡುತ್ತಿರುವ, ತಮ್ಮ ಸ್ವಂತ ಅಗತ್ಯತೆಗಳನ್ನು ನೋಡಿಕೊಳ್ಳುವವರು, ಮತ್ತು ಬೇರೆಯವರಿಗೆ ಸಹಾಯವನ್ನು ಮಾಡುವವರು ತಮ್ಮ ಸುತ್ತಲಿನ ಜಗತ್ತಿಗೆ ಒಂದು ಶ್ರೇಷ್ಠವಾದ ಪ್ರಭಾವವನ್ನು ಬೀರುವವರಾಗಿರುತ್ತಾರೆ. ಅಂಥ ನಡವಳಿಕೆಯನ್ನು ಅಭ್ಯಾಸ ಮಾಡುವ ಮೂಲಕ, ಅವರು ಬೇರೆಯವರಿಗೆ ದೇವರು ಮತ್ತು ಆತನ ಜನರು ಎಂಥವರೆಂಬುದನ್ನು

ತೋರ್ಪಡಿಸುವವರಾಗಿರುತ್ತಾರೆ, ಮಾತ್ರವಲ್ಲದೆ ತಮ್ಮ ಸುತ್ತಲಿನ ಜನರಿಗೆ ಕಾಳಜಿ ತೋರಿಸುವ ಮೂಲಕ ಸಮಾಜಕ್ಕೆ ಒಂದು ದೊಡ್ಡ ಪ್ರಯೋಜನವಾಗಿರುತ್ತಾರೆ. ಕ್ರೈಸ್ತರು ದೇವರ ಜಗತ್ತಿನಲ್ಲಿ ಅನೇಕರಿಗೆ ಪ್ರಯೋಜನವನ್ನುಂಟು ಮಾಡುವಂತಹ ದೇವರ ಕೆಲಸಗಾರರಾಗಿರಬೇಕು.

*ಮುಕ್ತಾಯ.* ಈ ವಚನಗಳಲ್ಲಿ ಹುಮ್ಮಸ್ಸಿನಿಂದ ಪ್ರೀತಿಸುವದರಲ್ಲಿ "ಇನ್ನೂ ಹೆಚ್ಚಾಗಿ" ಉನ್ನತಿ ಸಾಧಿಸುವದಕ್ಕಾಗಿ ಕೊಡಲ್ಪಟ್ಟಿರುವ ಮಾರ್ಗಸೂಚಿಗಳಿಂದ ನಾವೆಲ್ಲರೂ ಪ್ರಯೋಜನವನ್ನು ಪಡೆದುಕೊಳ್ಳಬಹುದು. ಪ್ರೀತಿಯ ಮೂಲಕ, ನಾವು ನಮ್ಮ ಸಹೋದರರಿಗೆ ಸಾಧ್ಯವಾದಷ್ಟು ಉತ್ತಮವಾದ ಪ್ರೋತ್ಸಾಹವಾಗಬಲ್ಲೆವು. ಶಾಂತತೆಯಿಂದ ಕೆಲಸ ಮಾಡುವ ಮೂಲಕ, ನಾವು ನಮ್ಮ ಅಗತ್ಯತೆಗಳನ್ನು ಸಂಧಿಸಿಕೊಳ್ಳಬಹುದು ಮತ್ತು ದೇವರ ಕುಟುಂಬದ ಹೊರಗಿರುವವರ ಮೇಲೆ ಸಾಧ್ಯವಾದಷ್ಟು ಉತ್ತಮವಾದ ಪ್ರಭಾವವನ್ನು ಬೀರಬಹುದು. TP

## ಉದ್ಯೋಗದ ಸ್ಥಳದಲ್ಲಿ ದೈನಂದಿನ ಜೀವನ (4:9-12)

ಪೌಲನು ತನ್ನ ವಾಚಕರಿಗೆ ಏನು ಅಗತ್ಯವೋ ಅದರ ಬಗ್ಗೆ ಮಾತಾಡುವದಕ್ಕೆ ಯಾವಾಗಲೂ ಜಾಗ್ರತೆ ವಹಿಸುತ್ತಿದ್ದನು. ಥೆಸಲೋನಿಕದವರು ತಾವು ಬಂದ ಹಿನ್ನಲೆಯ ಕಾರಣದಿಂದಾಗಿ ಕೆಲವು ವಿಶಿಷ್ಟವಾದ ಸಮಸ್ಯೆಗಳನ್ನು ಹೊಂದಿದ್ದರು, ಆದ್ದರಿಂದ ಪೌಲನು ಆ ಸಮಸ್ಯೆಗಳ ಕುರಿತಾಗಿ ಈ ವಾಕ್ಯಭಾಗದಲ್ಲಿ ಮಾತಾಡುತ್ತಾನೆ.

ಕ್ರಿಸ್ತನು ತಾವು ಜೀವಂತವಾಗಿರುವ ಕಾಲದಲ್ಲಿಯೇ ಹಿಂದಿರುಗಿ ಬರಲಿದ್ದಾನೆಂಬುದನ್ನು ನಂಬುವವರಾಗಿದ್ದರು. ಅವರು ಕ್ರಿಸ್ತನ ಪುನರಾಗಮನದ ಕುರಿತು ಕೇಳಿದ ಬೋಧನೆಗಳನ್ನು ಅಪಾರ್ಥ ಮಾಡಿಕೊಂಡ ಸಾಧ್ಯತೆಯು ಇರುತ್ತದೆ. ಈ ಗೊಂದಲದ ಕಾರಣದಿಂದಾಗಿ, ಅವರಲ್ಲಿ ಕೆಲವರು ತಮ್ಮ ಕೆಲಸಗಳಲ್ಲಿ ಉದಾಸೀನರಾಗಿದ್ದರು, ನಿಷ್ಕ್ರಿಯರಾಗಿದ್ದರು ಮತ್ತು ಅವರ ವೈಯಕ್ತಿ ಅಗತ್ಯತೆಗಳಿಗೋಸ್ಕರ ಬೇರೆ ಕ್ರೈಸ್ತರನ್ನು ಅವಲಂಭಿಸಿದ್ದರು. ಪೌಲನು ದೈನಂದಿನ ಜೀವನದ ಬಗ್ಗೆ ಚರ್ಚಿಸಿದ ಹಾಗೆ, ಆತನು ಅವರಿಗೆ ಕೆಲಸದ ಸ್ಥಳದ ಕುರಿತು ನಿರ್ದೇಶನಗಳನ್ನು ಸಹ ಕೊಟ್ಟನು.

*ಅವರು ಒಬ್ಬರನ್ನೊಬ್ಬರು ಪ್ರೀತಿಸಬೇಕಿತ್ತು.* ಈ ಆಜ್ಞೆಯು ಪೌಲನ ಎಲ್ಲಾ ಪತ್ರಿಕೆಗಳಲ್ಲಿಯೂ ಕಂಡು ಬರುತ್ತದೆ, ಮತ್ತು ಅದು ಸರಿಯಾದದ್ದೇ ಆಗಿದೆ, ಯಾಕೆಂದರೆ ಇದು ಕ್ರಿಸ್ತನ ಒಂದು ಪ್ರಧಾನವಾದ ಉಪದೇಶವಾಗಿತ್ತು. ಒಂದೇ ತಂದೆಯ ಮಕ್ಕಳು ಒಬ್ಬರನ್ನೊಬ್ಬರು ಪ್ರೀತಿಸಬೇಕು. ಇದು ಪ್ರತಿಯೊಬ್ಬ ಕ್ರೈಸ್ತನಿಂದ ಅರ್ಥಮಾಡಿಕೊಳ್ಳಲ್ಪಟ್ಟ ಒಂದು ಕರ್ತವ್ಯವಾಗಿದೆ ಯಾಕೆಂದರೆ ದೇವರು ಅದನ್ನು ಆರಂಭದಿಂದಲೇ ಕಲಿಸಿರುತ್ತಾನೆ. ಅದು ಶಿಷ್ಯತ್ವದ ಒಂದು ಗುರುತು ಆಗಿತ್ತು (ಯೋಹಾನ 13:35). ಈ ಆಜ್ಞೆಗೆ ವಿಧೇಯರಾಗುವದು ಸಭೆಯ ಬೆಳವಣಿಗೆ ಸಾರಭೂತವಾಗಿರುತ್ತದೆ (ಎಫೆಸ 4:16). ಅವರು ಈಗಾಗಲೇ ಪ್ರೀತಿಗೆ ಮಾದರಿಗಳಾಗಿದ್ದರು, ಆದರೆ ಅವರು ಅದರಲ್ಲಿ ಇನ್ನು ಹೆಚ್ಚೆಚ್ಚಾಗಿ ಅಭಿವೃದ್ಧಿಗೊಳ್ಳಬೇಕೆಂದು ಪೌಲನು ಅವರನ್ನು ಪ್ರೋತ್ಸಾಹಿಸುತ್ತಿದ್ದಾನೆ.

*ಅವರು ಒಂದು ಶಾಂತವಾದ, ಶಿಸ್ತಿನ ಜೀವನವನ್ನು ನಡಿಸಬೇಕಿತ್ತು.* ಅಂದರೆ, ಅವರು

ಅವರು ದೇವರಲ್ಲಿ ವಿಶ್ರಾಂತಿಯಿಂದಿರಬೇಕಿತ್ತು ಮತ್ತು ಲೋಕದ ಚಿಂತೆಗಳಿಂದ ತಳಮಳಗೊಳ್ಳದೆ, ಅವರ ಕೆಲಸವನ್ನು ನೋಡಿಕೊಳ್ಳುತ್ತಾ ಇರಬೇಕಿತ್ತು. ಅವರು ತಮ್ಮ ಸ್ವಂತ ಜವಾಬ್ದಾರಿಗಳನ್ನು ನೆರವೇರಿಸುವದರಲ್ಲಿ ನಂಬಿಗಸ್ತರಾಗಿದ್ದಿ, ಸೋಮಾರಿತನದಿಂದ ದೂರವಾಗಿರಬೇಕಿತ್ತು, ಮತ್ತು ಅವರು ತಮಗಿದ್ದ ಉದ್ಯೋಗಗಳಲ್ಲಿ ಶ್ರದ್ಧೆಯಿಂದಿರಬೇಕಾಗಿತ್ತು. ಒಬ್ಬ ನಂಬಿಗಸ್ತ ಕ್ರೈಸ್ತನು ಸೋಮಾರಿಯ ಮನೋಭಾವವನ್ನು ದೂರವಿರುವವನಾಗಿರುತ್ತಾನೆ. ಕೆಲವರು ಕರ್ತನ ಬರೋಣವು ಬಹಳ ಹತ್ತಿರವಿದೆಯೆಂದು ಭಾವಿಸಿಕೊಂಡು ಕ್ರಿಸ್ತನಿಗೋಸ್ಕರ ಎದುರು ನೋಡುವದಕ್ಕಾಗಿ ತಮ್ಮ ಸ್ವಂತ ಜೀವನೋಪಾಯಕ್ಕಿದ್ದ ಕೆಲಸವನ್ನು ನಿಲ್ಲಿಸಿ ಬಿಟ್ಟಿದ್ದರು ಎಂಬುದರ ಬಗ್ಗೆ ಈ ಪುಸ್ತಕದಲ್ಲಿ ಈ ಬುದ್ಧಿವಾದವು ಮೊದಲನೆಯ ಸೂಚನೆಯಾಗಿದೆ.

*ಅವರು ಕ್ರಿಸ್ತನಿಂದ ಹೊರಗಿದ್ದವರ ಕಡೆಗೆ ಮಾದರಿ ಜೀವಿತಗಳನ್ನು ನಡಿಸಬೇಕಾಗಿತ್ತು.* ಕ್ರೈಸ್ತನು ತನ್ನನ್ನು ಮಿಕ್ಕ ಲೋಕದಿಂದ ಪ್ರತ್ಯೇಕವಾದವನೆಂದು ಭಾವಿಸಿಕೊಳ್ಳಬಾರದು. ಕ್ರೈಸ್ತ ಜೀವಿತಗಳು ಎಲ್ಲರ ಮುಂದೆ ಗೌರವಪೂರ್ವಕವಾದವುಗಳು ಎಂಬುದನ್ನು ಕ್ರೈಸ್ತೇತರರು ಸುಲಭವಾಗಿ ಕಾಣುವದಕ್ಕೆ ಶಕ್ತರಾಗುವಂತಿರಬೇಕು.

ಈ ಬುದ್ಧಿವಾದಗಳು ಉದ್ಯೋಗ ಸ್ಥಳಗಳಲ್ಲಿ ಅವರ ನಡವಳಿಕೆಯು ಹೇಗಿರಬೇಕೆಂಬ ಕುರಿತಾಗಿದ್ದವು. ಅವರು ಒಬ್ಬರಿಗೊಬ್ಬರು ಒಂದು ವಿಶೇಷವಾದ ಪ್ರೀತಿಯನ್ನು ಹೊಂದಿರಬೇಕಿತ್ತು, ತಮ್ಮ ಕೆಲಸವನ್ನು ತಾವು ನೋಡಿಕೊಳ್ಳಬೇಕಿತ್ತು, ಮತ್ತು ತಮ್ಮ ಕುಟುಂಬಗಳ ಅಗತ್ಯತೆಗಳನ್ನು ಒದಗಿಸುವಂತಹ ತಮ್ಮ ಜವಾಬ್ದಾರಿಗಳನ್ನು ನೆರವೇರಿಸಬೇಕಿತ್ತು. ಅಷ್ಟುಮಾತ್ರವಲ್ಲದೆ, ಅವರು ಕ್ರೈಸ್ತರಲ್ಲದವರ ವಿಷಯದಲ್ಲಿ ಗೌರವಪೂರ್ವಕವಾಗಿ ಜೀವಿಸಬೇಕಿತ್ತು. ನೀವು ಈ ಜೀವನ ಶೈಲಿಯನ್ನು "ಉದ್ಯೋಗ ಸ್ಥಳದಲ್ಲಿ ಕ್ರೈಸ್ತೀಯ ಜೀವನ" ಎಂದು ಕರೆಯಬಹುದು. EC

### ಎರಡನೆಯ ಬರೋಣ (4:13-18)

ಕೆಲವು ಜನರು ಕ್ರಿಸ್ತನ ಬರೋಣದ ಕಾಲವನ್ನು ಮುಂತಿಳಿಸುವದಕ್ಕೆ ಪ್ರಯತ್ನವನ್ನು ಮಾಡಿರುತ್ತಾರೆ. 1994ರಲ್ಲಿ *Charleston Daily Mail* ಹೀಗೆ ವರದಿ ಮಾಡಿತ್ತು, "ಲೋಕಾಂತ್ಯದ ವಿಷಯದಲ್ಲಿ ಈ ಬೋಧಕನು ಮುಂತಿಳಿಸಿದ್ದು ತಪ್ಪಾಗಿತ್ತು."[21] ಈ ಲೇಖನದಲ್ಲಿ Harold Camping ಎಂಬ ಒಬ್ಬ ಬಾನುಲಿ ಬೋಧಕನು ಹೇಳಿಕೊಂಡಿದ್ದ ಕೆಲವು ಮಾತುಗಳ ಬಗ್ಗೆ ಚರ್ಚಿಸಲಾಗಿತ್ತು. ಆತನು ಸೆಪ್ಟೆಂಬರ್ 6, 1994, ಮಂಗಳವಾರದಂದು ಲೋಕವು ಅಂತ್ಯಗೊಳ್ಳುವದು ಎಂಬದಾಗಿ ಪ್ರವಾದನೆ ಮಾಡಿದ್ದನು. William Miller ನು 1843 ಮತ್ತು 1844ರಲ್ಲಿ ಎರಡನೆಯ ಬರೋಣಕ್ಕೆ ದಿನಾಂಕವನ್ನು ನಿಗದಿ ಪಡಿಸಿದ್ದನು. ಆತನ ಹಿಂಬಾಲಕರು ಕನಿಷ್ಠ ಆರು ಸಾರಿ ಲೋಕಾಂತ್ಯದ ಬಗ್ಗೆ ಮುಂತಿಳಿಸಿದರು, ಮತ್ತು ಅವರು ಪ್ರತಿ ಸಾರಿಯೂ ತಪ್ಪಾಗಿರುತ್ತಾರೆ! ನಾವು ಯೇಸುವಿನ ಮಾತುಗಳನ್ನು ಕೇಳಿಸಿಕೊಳ್ಳಬೇಕು, "ಇದಲ್ಲದೆ ಆ ದಿನದ ವಿಷಯವಾಗಲಿ ಆ ಗಳಿಗೆಯ ವಿಷಯವಾಗಲಿ ನನ್ನ ತಂದೆಗೆ ತಿಳಿಯುವದೇ ಹೊರತು ಮತ್ತಾರಿಗೂ ತಿಳಿಯದು; ಪರಲೋಕದಲ್ಲಿರುವ ದೂತರಿಗೂ ತಿಳಿಯದು; ಮಗನಿಗೂ ತಿಳಿಯದು" (ಮಾರ್ಕ 13:32)

ಎರಡನೆಯ ಬರೋಣದ ಕುರಿತ ಅಧ್ಯಯನವೊಂದು ಅದು *ಯಾವಾಗ* ಸಂಭವಿಸುವದು ಎಂದು ಕೇಳಬಾರದು, ಆದರೆ ಬದಲಾಗಿ ಆತನು ಯಾವ ಸಮಯದಲ್ಲೇ ಬಂದರೂ ಏನು ಸಂಭವಿಸುತ್ತದೆ ಎಂದು ಕೇಳಬೇಕು. ಈ ವಿಷಯದ ಕುರಿತ ಸಾಕಷ್ಟು ವಿವರಣೆಯು 1 ಥೆಸಲೋನಿಕ 4:13-18ರಲ್ಲಿ ಒದಗಿಸಲ್ಪಟ್ಟಿರುತ್ತದೆ. ಸಭೆಯು ಆ ಬರೋಣದ ಕುರಿತು ತಿಳುಕೊಳ್ಳಬೇಕೆಂಬುದು ಪೌಲನ ಬಯಕೆಯಾಗಿತ್ತು, ಆದ್ದರಿಂದ ಆತನು ಈ ವಿವರಣೆಯ ಮೂಲಕ ಪ್ರತ್ಯುತ್ತರ ಕೊಡುತ್ತಾನೆ.

ಕ್ರಿಸ್ತನ ಬರೋಣವು ಒಂದು ಶ್ರೇಷ್ಠ ಘಟನೆಯಾಗುವದು ಎಂಬುದನ್ನು ಥೆಸಲೋನಿಕದವರು ತಿಳಿದಿದ್ದರು, ಆದರೆ ಅದು ಯಾವಾಗ ಸಂಭವಿಸುವದೆಂಬ ವಿಷಯದಲ್ಲಿ ಅವರು ಅಪಾರ್ಥ ಮಾಡಿಕೊಂಡಿದ್ದರು. ಅವರ ಕಾಲದ ಕ್ರೈಸ್ತರಲ್ಲಿ ಯಾವನೇ ಆಗಲಿ ಮರಣಿಸುವದಕ್ಕೆ ಮುನ್ನವೇ ಅದು ಸಂಭವಿಸುವದೆಂದು ಅವರು ಭಾವಿಸಿದ್ದರು. ಅವರ ಪ್ರಿಯರಲ್ಲಿ ಕೆಲವರು ಮರಣಿಸಿದ ಬಳಿಕ, ತಾವು ಯೇಸುವಿನ ಎರಡನೆಯ ಬರೋಣವನ್ನು ತಪ್ಪಿಸಿಕೊಂಡು ಬಿಟ್ಟೆವೇನೋ ಎಂದು ಅವರು ಹೆದರಿದವರಾದರು. ಆದದರಿಂದ, ಪೌಲನು ಅವರ ತಪ್ಪು ತಿಳುವಳಿಕೆಯ ಕುರಿತು ಬರೆಯುತ್ತಾನೆ.

*ಕ್ರಿಸ್ತನ ಬರೋಣದಲ್ಲಿ ಮರಣ ಹೊಂದಿರುವ ಕ್ರೈಸ್ತರಿಗೆ "ನಿರೀಕ್ಷೆ" ಇರುತ್ತದೆ* (ವಚನಗಳು 13, 14). ಮೊದಲನೆಯದಾಗಿ, ಆತನು "ನಿದ್ರೆ ಹೋಗಿರುವವರ" ಅಥವಾ ಮರಣಿಸಿರುವವರ ಕುರಿತಾಗು ಬರೆಯುತ್ತಾನೆ (ವ. 13a). ಆತನು ಅವರನ್ನು "ನಿರೀಕ್ಷೆಯಿಲ್ಲದವರಾದ ಇತರರಂತೆ ದುಃಖಿಸಬೇಡಿರಿ" ಎಂದು ಪ್ರೋತ್ಸಾಹಿಸುತ್ತಾನೆ (ವ. 13b). ಕ್ರೈಸ್ತೇತರರಿಗೆ ಮರಣಾನಂತರ ಜೀವನದ ನಿರೀಕ್ಷೆಯು ಇರುವದಿಲ್ಲ. Bruce ನು ಗ್ರೀಕ್ ಸಾಹಿತ್ಯಗಳಲ್ಲಿ ಮತ್ತು ಶಾಸನಲಿಪಿಗಳಲ್ಲಿ ನಿರೀಕ್ಷೆರಹಿತತೆಯ ಭಾವನೆಯು ಸ್ಪಷ್ಟವಾಗಿ ಕಾಣಿಸುತ್ತದೆಂಬುದನ್ನು ಗಮನಕ್ಕೆ ತರುತ್ತಾನೆ.[22] ಒಂದು ಸಾಮಾನ್ಯವಾಗಿರುತ್ತಿದ್ದ ಪ್ರಾಚೀನ ಸಮಾಧಿಲೇಖವು ಹೀಗಿತ್ತು, "ನಾನಿರಲಿಲ್ಲ, ನಾನು ಬಂದೆನು, ನಾನು ಇರಲಿಲ್ಲ, ನನಗೆ ಚಿಂತೆಯಿಲ್ಲ."[23] ಪರಿಪಕ್ವವುಳ್ಳ ಕ್ರೈಸ್ತರು ಅಂತಹ ನಿರಾಶತೆಯನ್ನು ಅನುಭವಿಸುವದಿಲ್ಲ.

ಈಗಾಗಲೇ ಮರಣಿಸಿರುವ ಕ್ರೈಸ್ತರ ವಿಷಯದಲ್ಲಿ ದೇವರು ಕಾರ್ಯಮಾಡುವನು, ಯೇಸು ಅವರನ್ನು "ಜೊತೆಯಲ್ಲಿ" ಕರೆತರುವಂತೆ ಆತನು ಮಾಡುವನು (ವ. 14). ಅವರು ಯಾವಾಗ ಯೇಸುವಿನೊಂದಿಗೆ ಇರುವರು? ಕೆಲವರು ಕ್ರಿಸ್ತನ ಅಂತಿಮ ಬರೋಣಕ್ಕೆ ಮುಂಚೆ "ಎತ್ತಲ್ಪಡುವಿಕೆ" ಸಂಭವಿಸುತ್ತದೆಂದು ನಂಬುತ್ತಾರೆ. ಈ ಪುನರುತ್ಥಾನಗೊಂಡ ದೇವಜನರು ಲೋಕಾಂತ್ಯದ ಮುಂಚೆ ರಹಸ್ಯವಾಗಿ ಭೂಮಿಯಿಂದ ಎತ್ತಿಕೊಳ್ಳಲ್ಪಡುವರು, ಹೀಗೆ ಅವರು ಯೇಸುವಿನೊಂದಿಗೆ ಹಿಂದಿರುಗಿ ಭೂಮಿಗೆ ಬರುವರೆಂಬ ನಿರ್ಧಾರಕ್ಕೆ ಬಂದಿರುತ್ತಾರೆ.

ಥೆಸಲೋನಿಕದವರು ಮರಣಿಸಿರುವ ತಮ್ಮ ಪ್ರಿಯರ ಕುರಿತಾಗಿ ಚಿಂತಿಸಬೇಕಾಗಿಲ್ಲ ಎಂಬುದನ್ನು ಪೌಲನು ಒತ್ತಿ ಹೇಳುತ್ತಾನೆ. ಅವರು ನಂಬಿಗಸ್ತ ಕ್ರೈಸ್ತರಾಗಿ ಮರಣಿಸಿದ್ದರೆ, ಅವರು ಅದೇ ನಿರೀಕ್ಷೆಯೊಂದಿಗೆ ಕಾಯುವವರಾಗುತ್ತಾರೆ.

*ಜೀವದಿಂದುಳಿದಿರುವ ದೇವಜನರು ಮರಣಿಸಿರುವವರಿಗಿಂತ ಮುಂದಾಗುವದೇ ಇಲ್ಲ* (ವ. 15). ಅನೇಕರು ಸಮಾಧಿಯಾಚೆಯ ಕಾರ್ಯಗಳ ಬಗ್ಗೆ ಅರ್ಥಮಾಡಿಕೊಳ್ಳುವದಕ್ಕೆ

ಪ್ರಯತ್ನಿಸಿರುತ್ತಾರೆ. ತತ್ವಜ್ಞಾನಿಗಳಾಗಲಿ ಪ್ರೇತ ಸಂಪರ್ಕವಾದಿಗಳಾಗಲಿ ಮರಣಾನಂತರ ಜೀವನದ ಕುರಿತು ಸಾಕಾಗುವಷ್ಟು ವಿವರಣೆಗಳನ್ನು ಕೊಡುವದಕ್ಕೆ ಶಕ್ತರಾಗಿರುವದಿಲ್ಲ. ಈ ವಿಷಯದ ಮೇಲೆ "ಕರ್ತನ ವಾಕ್ಯವು" ಮಾತ್ರವೇ ಬೆಳಕನ್ನು ಚೆಲ್ಲುತ್ತದೆ (ವ. 15). ನಮಗೆ ನಮ್ಮ ಪ್ರಿಯರ ಕುರಿತಾಗಿ ತಿಳುಕೊಳ್ಳಬೇಕೆಂಬ ಬಯಕೆಯಿದ್ದಲ್ಲಿ, ನಮ್ಮ ಪ್ರಶ್ನೆಗಳಿಗೆ ಉತ್ತರಿಸುವಂತೆ ನಾವು ವಾಕ್ಯಕ್ಕೆ ಅವಕಾಶನ್ನು ಕೊಡತಕ್ಕದ್ದು.

ಪೌಲನು ಹೀಗೆ ಬರೆದನು, "ಕರ್ತನು ಪ್ರತ್ಯಕ್ಷನಾಗುವವರೆಗೂ ಜೀವಿದಿಂದುಳಿದಿರು ನಾವು . . ." (ವ. 15). "ನಾವು" ಎಂದು ಹೇಳವ ಮೂಲಕ ಕ್ರಿಸ್ತನು ಹಿಂದಿರುಗಿ ಬರುವಾಗ ತಾನು ಜೀವಂತವಾಗಿರುವೆನೆಂದು ಪೌಲನು ನಂಬಿದ್ದನೆಂದು ಅರ್ಥವೋ? ಕೆಲವು ಸಂದೇಹವಾದಿಗಳು ಹೌದು, ಆದರೆ ಆತನು ತಪ್ಪಾಗಿ ತಿಳುಕೊಂಡಿದ್ದನು ಎನ್ನುತ್ತಾರೆ. ಪೌಲನ ಬರಹಗಳನ್ನು ಪ್ರೇರಿತವೆಂದು ಪರಿಗಣಿಸುವವರು ವಿಷಯವನ್ನು ಹೆಚ್ಚು ಜಾಗ್ರತೆಯಿಂದ ಅಧ್ಯಯನ ಮಾಡುವರು. 1 ಕೊರಿಂಥ 6:14ರಲ್ಲಿ, ಕ್ರಿಸ್ತನ ಬರೋಣದ ವೇಳೆ ಮರಣಿಸಿರುವವರೊಳಗೆ ಪೌಲನು ತನ್ನನ್ನು ಸೇರ್ಪಡೆಗೊಳಿಸಿಕೊಂಡನು (2 ಕೊರಿಂಥ 4:14ನ್ನು ಸಹ ನೋಡಿರಿ). 1 ಥೆಸಲೋನಿಕ 5:10ರಲ್ಲಿ, ಕ್ರಿಸ್ತನು ಬರುವ ವೇಳೆ ತಾನು ಜೀವಂತವಿರುವನೋ ಅಥವಾ ಸತ್ತಿರುವನೋ ಎಂಬುದನ್ನು ಖಚಿತವಾಗಿ ತಿಳಿದಿಲ್ಲ ಎಂಬುದರ ಸೂಚನೆಯನ್ನು ಪೌಲನು ಕೊಡುತ್ತಾನೆ. ಪೌಲನು ಕೇವಲ ತಾನು ಯಾರ ಕುರಿತು ಬರೆದನೋ ಆ ಗುಂಪಿನಲ್ಲಿ ತನ್ನನ್ನು ಸೇರಿಸಿಕೊಂಡನಷ್ಟೆ.

ಪೌಲನು ತಿಳಿಸಲಿಚ್ಛಿಸಿದ ಅಂಶವು ಕ್ರಿಸ್ತನು *ಯಾವಾಗ* ಬರುವನು ಎಂಬದಾಗಿರಲಿಲ್ಲ. ಅದು ಯಾವ *ಗಳಿಗೆಯಲ್ಲಾದರೂ* ಸಂಭವಿಸಲಿ ಜೀವದಿಂದಿರುವವರು ಮರಣಿಸಿರುವವರಿಗಿಂತ ಮುಂದಾಗುವದೇ ಇಲ್ಲ. ಆ ಮಹಾ ಬರೋಣವನ್ನು ಯಾವನೊಬ್ಬನೂ ತಪ್ಪಿಸಿಕೊಳ್ಳುವದಿಲ್ಲ!

*"ಕರ್ತನು ತಾನೇ . . . ಆಕಾಶದಿಂದ ಇಳಿದು ಬರುವನು"* (ವ. 16). ಯಾವನೋ ಒಬ್ಬ ದೇವದೂತನಾಗಲಿ ಅಥವಾ ಸಂದೇಶಕನಾಗಲಿ ಅಲ್ಲ, ಯೇಸುವೇ ಬರುವನು. ಕ್ರಿಸ್ತನ ಎರಡನೆಯ ಬರೋಣವು ಇತಿಹಾಸದಲ್ಲಿ ಅತ್ಯಂಥ ಪ್ರಾಮುಖ್ಯವಾದ ಆಗಮನವಾಗಲಿದೆ. ಯೇಸುವಿನ ಪುನರಾಗಮನದಲ್ಲಿ ಸಂಭವಿಸುವ ಮೂರು ಕಾರ್ಯಗಳನ್ನು ಪೌಲನು ಬಣ್ಣಿಸುತ್ತಾನೆ.

ಆತನು "ಆಜ್ಞಾಘೋಷದೊಡನೆಯೂ . . . ಇಳಿದು ಬರುವನು." ಇದು ಆತನ ಬರುವಿಕೆಗೆ ಒಂದು ಸೂಚನೆಯಾಗಿದೆ. ಇದು ಸಮಾಧಿಯಲ್ಲಿರುವವರಿಗೆ ಕ್ರಿಸ್ತನು ನೀಡುವ ಕರೆ ಆಗಿರಬಹುದು. ಯೇಸು ಹೀಗೆ ಹೇಳಿದನು, "ಸಮಾಧಿಗಳಲ್ಲಿರುವವರೆಲ್ಲರು ಆತನ ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವ ಕಾಲ ಬರುತ್ತದೆ" (ಯೋಹಾನ 5:28, 29a). ಯೋಹಾನನು ಪ್ರಕಟನೆಯಲ್ಲಿ ಹೀಗೆ ಬರೆದನು, "ಎಲ್ಲರ ಕಣ್ಣುಗಳು ಆತನನ್ನು ಕಾಣುವವು; ಆತನನ್ನು ಇರಿದವರು ಸಹ ಕಾಣುವರು" (ಪ್ರಕಟನೆ 1:7).

ಆತನು "ಪ್ರಧಾನದೂತನನ ಶಬ್ದದೊಡನೆಯೂ . . . ಇಳಿದು ಬರುವನು." ಇದು ಬಹುಶಃ ಮಿಕಾಯೇಲನಾಗಿರಬಹುದು, ಆತನೊಬ್ಬನನ್ನೇ ಶಾಸ್ತ್ರಗಳಲ್ಲಿ ಪ್ರಧಾನದೂತನು ಎಂದು ಕರೆಯಲಾಗಿದೆ (ಯೂದನು 9). ಪ್ರಧಾನದೂತನ ಶಬ್ದವು ಬಹುಶಃ ಇತರ ದೂತರಿಗೆ

"ಆದುಕೊಂಡವರನ್ನು ಒಟ್ಟುಗೂಡಿಸುವಂತೆ" ನೀಡುವ ಕರೆಯಾಗಿರಬಹುದು (ಮತ್ತಾಯ 24:31).

"ಆತನು ದೇವರ ತುತೂರಿಧ್ವನಿಯೊಡನೆಯೂ . . . ಇಳಿದು ಬರುವನು." ಸ್ಪಷ್ಟವಾಗಿರುವ ಹಾಗೆ, ಈ ಮೂರು ಶಬ್ದಗಳು ಒಂದಾದರ ಮೇಲೊಂದರಂತೆ ಕೇಳಿಸಲ್ಪಡುವವು. ಈ ತುತೂರಿಯೇ "ಕಡೇ ತುತೂರಿ" ಎಂದು ಕರೆಯಲ್ಪಟ್ಟಿದೆ (1 ಕೊರಿಂಥ 15:52). ಅದು "ದೇವರ ತುತೂರಿ" ಎಂದು ಕರೆಯಲ್ಪಟ್ಟಿದೆ ಯಾಕೆಂದರೆ ಅದು ದೈವಿಕನಾಗಿರುವ ಕ್ರಿಸ್ತನ ಆಗಮನವನ್ನು ಘೋಷಿಸುವದಾಗಿದೆ. ಅಲ್ಲದೆ ಇದು ಸಿನಾಯ್ ಪರ್ವತದಲ್ಲಿ ಅವರ ದೇವರನ್ನು ಸಂಧಿಸುವಂತೆ ಕೂಡಿ ಬರುವಂತೆ ಇಸ್ರಾಯೇಲ್ಯರನ್ನು ಕರೆದ ತುತೂರಿಯನ್ನು ಸಹ ಜ್ಞಾಪಿಸುತ್ತದೆ (ವಿಮೋಚನಕಾಂಡ 19:19).

ತುತೂರಿಗಳು ಜನರನ್ನು ಎಚ್ಚರಗೊಳಿಸುವದಕ್ಕೆ ಸಹ ಬಳಸಲ್ಪಡುತ್ತಿದ್ದವು. ಇಲ್ಲಿ ಅದು "ನಿದ್ರೆಹೋಗಿರುವವರನ್ನು" ಎಚ್ಚರಗೊಳಿಸುವದಾಗಿದೆ. ಪೌಲನ ಕೇವಲ ಕ್ರೈಸ್ತರ ಪುನರುತ್ಥಾನವನ್ನು ಮಾತ್ರವೇ ಬಣ್ಣಿಸಿದನು. ಹೇಗೂ, ದುಷ್ಟರು ಸಹ ಪುನರುತ್ಥಾನಗೊಳಿಸಲ್ಪಡುವರು ಎಂಬುದನ್ನು ಸಹ ಆತನು ನಂಬಿದನು (ಅಪೊಸ್ತಲರ ಕೃತ್ಯಗಳು 24:15). ಯೇಸುವು ನೀತಿವಂತರ ಪುನರುತ್ಥಾನ ಮತ್ತು ಅನೀತಿವಂತರಿಗಾಗುವ ಪುನರುತ್ಥಾನವನ್ನು ಕುರಿತು ಪ್ರಸ್ತಾಪಿಸಿದನು (ಯೋಹಾನ 5:28, 29).

ಈ ಕಾರ್ಯಗಳು ಯೇಸು ಇಳಿದು ಬರುವ ವೇಳೆ ಸಂಭವಿಸುವವು. ಈ ಸಂದರ್ಭದಲ್ಲಿಯೇ ಯೇಸುವು ನಮ್ಮೆಲ್ಲರಿಗೆ ನ್ಯಾಯತೀರಿಸುವನು. "ಇದಲ್ಲದೆ ಮನುಷ್ಯಕುಮಾರನು ತನ್ನ ಮಹಿಮೆಯಿಂದ ಎಲ್ಲಾ ದೇವದೂತರೊಂದಿಗೆ ಕೂಡಿಬರುವಾಗ ತನ್ನ ಮಹಿಮೆಯ ಸಿಂಹಾಸನದಲ್ಲಿ ಕೂತುಕೊಳ್ಳುವನು; ಮತ್ತು ಎಲ್ಲಾ ದೇಶಗಳ ಜನರು ಆತನ ಮುಂದೆ ಕೂಡಿಸಲ್ಪಡುವರು. ಕುರುಬರು ಆಡುಗಳನ್ನೂ ಕುರಿಗಳನ್ನೂ ಬೇರೆ ಬೇರೆ ಮಾಡುವ ಪ್ರಕಾರ ಆತನು ಅವರನ್ನು ಬೇರೆ ಬೇರೆ ಮಾಡುವನು" (ಮತ್ತಾಯ 25:31, 32).

*ಬಳಿಕ ಕ್ರಿಸ್ತನು ಆದುಕೊಂಡ ತನ್ನವರನ್ನೆಲ್ಲಾ ಒಟ್ಟುಗೂಡಿಸಿಕೊಳ್ಳುವನು* (ವ. 17). ಅವಿಧೇಯರು ಬೆಂಕಿಯ ಕೆರೆಗೆ ಹಾಕಲ್ಪಡುವರು (ಪ್ರಕಟನೆ 20:15). ಹೇಗೂ, ಕ್ರೈಸ್ತರು ಬೇರೆಯಾದ ಅನುಭವವನ್ನು ಹೊಂದುವರು. ಪೌಲನು ದೃಢಪಡಿಸುತ್ತಾನೆ, "ಆ ಮೇಲೆ ಜೀವದಿಂದಿರುವ ನಾವು ಅಂತರಿಕ್ಷದಲ್ಲಿ ಕರ್ತನನ್ನು ಎದುರುಗೊಳ್ಳುವದಕ್ಕೆ ಅವರ ಸಂಗಡಲೇ ಮೇಘವಾಹನರಾಗಿ ಫಕ್ಕನೆ ಒಯ್ಯಲ್ಪಡುವೆವು; ಹೀಗಾಗಿ ನಾವು ಸದಾಕಾಲವೂ ಕರ್ತನ ಜೊತೆಯಲ್ಲಿರುವೆವು" (ವ. 17; ನೋಡಿರಿ ಮತ್ತಾಯ 24:31).

ಕಾರ್ಯಗಳು ಸಂಭವಿಸುವ ಕ್ರಮಾನುಗತಿಯು ಹೀಗಿರುವದು. "ಕ್ರಿಸ್ತನಲ್ಲಿ ಸತ್ತವರು ಮೊದಲು ಎದ್ದು ಬರುವರು" (ವ. 16). ಅವರು ಯೇಸುವಿನ ಧ್ವನಿಯನ್ನು ಕೇಳಿದ ಬಳಿಕ ದೇವದೂತರಿಂದ ಒಟ್ಟುಗೂಡಿಸಲ್ಪಡುವರು (ನೋಡಿರಿ ಯೋಹಾನ 5:28). ಅದಾದ ಬಳಿಕ, "[ಈ ಭೂಮಿಯ ಮೇಲೆ] ಜೀವದಿಂದುಳಿದಿರುವ" ಕ್ರೈಸ್ತರು "ಫಕ್ಕನೆ ಒಯ್ಯಲ್ಪಡುವರು."

ಕರ್ತನು ಇಳಿದು ಬರುವದರ ಉದ್ದೇಶವು ತನ್ನ ಜನರನ್ನು ಒಟ್ಟುಗೂಡಿಸಿಕೊಳ್ಳುವದಕ್ಕಾಗಿಯೇ ಆಗಿದೆ. ಲೋಕಾಂತ್ಯಕ್ಕೆ ಹಲವಾರು ವರ್ಷಗಳ ಮುಂಚೆ ಕೆಲವು ಕ್ರೈಸ್ತರು ರಹಸ್ಯವಾಗಿ ಎತ್ತಲ್ಪಡುವರೆಂಬ ಬಗ್ಗೆ ಶಾಸ್ತ್ರಗಳು ಕಲಿಸುವದಿಲ್ಲ.

ಜೀವದಿಂದುಳಿದಿರುವ ಕ್ರೈಸ್ತರು "ಅವರ ಸಂಗಡಲೇ ಮೇಘವಾಹನರಾಗಿ ಫಕ್ಕನೇ ಒಯ್ಯಲ್ಪಡುವರು"; ಹೀಗೆ ಎರಡು ಗುಂಪುಗಳು ಸಹ ಒಟ್ಟಿಗೆ ಇರುವರು. ಅವರು "ಅಂತರಿಕ್ಷ"ದಲ್ಲಿ ಸಂಧಿಸುವರು (ನೋಡಿರಿ ಪ್ರಕಟನೆ 1:7). ಅವರು "ಅಂತರಿಕ್ಷದಲ್ಲಿ" ಸಂಧಿಸುವರು ಎಂಬುದು ಬಹುಶಃ ಯೇಸುವು "ಆಕಾಶ ಮಂಡಲದಲ್ಲಿ ಅಧಿಕಾರ ನಡಿಸುವ ಅಧಿಪತಿ" ಎಂದು ಕರೆಯಲ್ಪಟ್ಟಿರುವ ಸೈತಾನನ ಮೇಲೆ ಸಂಪೂರ್ಣ ಜಯ ಸಾಧಿಸಿದ್ದಾನೆಂಬುದನ್ನು ತೋರಿಸುತ್ತದೆ (ಎಫೆಸ 2:2).

"ಹೀಗಾಗಿ ನಾವು ಸದಾಕಾಲವೂ ಕರ್ತನ ಜೊತೆಯಲ್ಲಿರುವೆವು." ನಾವು ಆತನೊಂದಿಗೆ ಎಲ್ಲಿರುವೆವು? ನಾವು ಆತನ ಸಂಗಡ ಭೂಮಿಯ ಮೇಲೆ ಇರುವದಿಲ್ಲ. ಆತನು ಭೂಮಿಗೆ ಬರುವನು, ಆದೆ ಕೇವಲ ಭೂಮಂಡಲ ವಾಯುಮಂಡಲಕ್ಕೆ ಮಾತ್ರವೇ ಬರುವನು. ಆತನು ಎಂದಿಗೂ ಅದರ ಮೇಲೆ ಕಾಲುಗಳನ್ನಿಡುವದಿಲ್ಲ! ಆತನು ವಾಯುಮಂಡಲದಲ್ಲಿ ಉಳಿಯುತ್ತಾನೆ ಮತ್ತು ನಂಬಿಗಸ್ತರನ್ನು "ಮೇಘವಾಹನರಾಗಿ ಫಕ್ಕನೆ ಎತ್ತಿಕೊಳ್ಳುವನು." ಇಲ್ಲಿ ಭೂಮಿಯ ಮೇಲಿನ ಸಹಸ್ರವರ್ಷಾಡಳಿತದ ಕುರಿತು ಯಾವದೇ ಉಲ್ಲೇಖವಿರುವದಿಲ್ಲ. (ಪ್ರಕಟನೆ 20:2ರಲ್ಲಿರುವ ಪರಿಭಾಷೆಯು ಸಾಂಕೇತಿಕವಾಗಿರುತ್ತದೆ.)

ಕರ್ತನು ಒಂದು ಅರ್ಥದಲ್ಲಿ ಈಗ ಭೂಮಿಯ ಮೇಲೆ ನಮ್ಮೊಂದಿಗಿರುತ್ತಾನೆ. ಯೇಸು ತನ್ನ ಶಿಷ್ಯರಿಗೆ ತಾನು ಯಾವಾಗಲೂ ಅವರ ಸಂಗಡ ಇರುವೆನೆಂದು ವಾಗ್ದಾನ ಮಾಡಿದನು (ಮತ್ತಾಯ 28:20). ಆತನ ಎರಡನೆಯ ಬರೋಣದ ಬಳಿಕ, ಒಂದು ವ್ಯಾಪಕವಾದ ಅರ್ಥದಲ್ಲಿ ನಾವು ಆತನ ಸಂಗಡ ಇರುವೆವು. ಪೌಲನು ಈ ಭೂಮಿಯ ಮೇಲಿರುವದಕ್ಕಿಂತಲೂ ಕರ್ತನ ಸಂಗಡವಿರುವದೇ ಎಷ್ಟೋ ಹೆಚ್ಚು ಉತ್ತಮವಾದದ್ದೆಂದು ಪರಿಗಣಿಸಿದನು (2 ಕೊರಿಂಥ 5:8; ಫಿಲಿಪ್ಪಿ 1:23). ಆತನು ಆ ಆಶೀರ್ವಾದದ ರಾಜ್ಯದಲ್ಲಿ ಕ್ರಿಸ್ತನ ವಾಸಿಸಬೇಕೆಂದು ಹಾತೊರೆದನು, ಇನ್ನು ಮೇಲೆ ಒಂದು ಶಾರೀರಿಕ ದೇಹದಿಂದಲ್ಲ, ಆದರೆ ಒಂದು ನಿರ್ಲಯವಾದ ದೇಹದೊಂದಿಗೆ ವಾಸಿಸುವದಕ್ಕೆ ಹಾತೊರೆದನು (1 ಕೊರಿಂಥ 15:48-52; 2 ಕೊರಿಂಥ 5:1). ಆದುದರಿಂದ, "ಹೀಗಿರಲಾಗಿ ನಾವು ಸದಾಕಾಲವೂ ಕರ್ತನ ಜೊತೆಯಲ್ಲಿರುವೆವು."

ಒಂದು ವೇಳೆ ನಿಮಗೆ ಕ್ರಿಸ್ತನು ಈ ದಿನ ಬರಲಿದ್ದಾನೆಂದು ತಿಳಿದಿದ್ದರೆ, ನಿಮ್ಮ ಪ್ರತಿಕ್ರಿಯೆ ಏನಾಗಿರುವದು? ಅದೊಂದು ಶ್ರೇಷ್ಠವಾದ ಘಟನೆಯಾಗಿರಲಿದೆ, ಆದರೆ ಅದು "ರಾತ್ರಿಯಲ್ಲಿ ಕಳ್ಳನು ಬರುವಂತೆ" ಒಂದು ಅನಿರೀಕ್ಷಿತ ಬರೋಣ ಸಹ ಆಗಿರಲಿದೆ (1 ಥೆಸಲೋನಿಕ 5:2). ಆತನು ಪಕ್ಕನೆ ಬರುವಾಗ, ಆತನ ಪ್ರತ್ಯಕ್ಷತೆಯು ಆಕಾಶದಲ್ಲಿ, ಪೂರ್ವದಿಂದ ಪಶ್ಚಿಮಕ್ಕೆ ಮಿಂಚು ಹೊಳೆದಂತಿರುವದು (ಮತ್ತಾಯ 24:27). ಲೋಕವು ಹೇಗೆ ಪ್ರತಿಕ್ರಿಯೆ ತೋರುವದು?

ನೀತಿವಂತರೆಂಬ ನಿರ್ಣ ಹೊಂದಿದವರು ಹರ್ಷಿಸುವರು. ಪೌಲನು "ನೀತಿವಂತವರಿಗೆ ದೊರಕುವ ಜಯಮಾಲೆಯು ಮುಂದೆ ನನಗೆ ಸಿದ್ಧವಾಗಿದೆ . . . ಕರ್ತನು ಆ ದಿನದಲ್ಲಿ [ದೇವರು] ನನಗೆ ಮಾತ್ರವಲ್ಲದೆ ತನ್ನ ಪ್ರತ್ಯಕ್ಷತೆಯನ್ನು ಪ್ರೀತಿಸುವವರೆಲ್ಲರಿಗೂ ಕೊಡುವನು" ಎಂಬದಾಗಿ ಹೇಳುತ್ತಾನೆ (2 ತಿಮೊಥೆ 4:8).

ನೀತಿವಂತರೆಂಬ ನಿರ್ಣಯ ಹೊಂದದವರು ಭಯ ಹಿಡಿದವರಂತಾಗುವರು. ಪ್ರಕಟನೆ

6:15, 16 ವಚನಗಳು "ಭೂರಾಜರು," "ಪ್ರಭುಗಳು," "ಐಶ್ವರ್ಯವಂತರು," ಭೂಮಿಯ ಮೇಲೆ ಅವಿಧೇಯರಾಗಿದ್ದು ಬರಲಿರುವ ನ್ಯಾಯತೀರ್ಪಿನಿಂದ ತಮ್ಮನ್ನು ಮರೆಮಾಡಿಕೊಂಡರು ಎಂಬದನ್ನು ತಿಳಿಸುತ್ತವೆ. ಅವರಿಗಾದರೋ, ಕ್ರಿಸ್ತನ ಪುನರಾಗಮನವು ಒಂದು ಭಯಂಕರವಾದ ಅನುಭವವಾಗಿರಲಿದೆ.

ಪ್ರಶ್ನೆಯು ಏನೆಂದರೆ: ಕ್ರಿಸ್ತನು ಹಿಂದಿರುಗಿ ಬರುವಾಗ ನಾವು ಸಿದ್ಧರಾಗಿರುತ್ತೇವೋ-ಆತನನ್ನು ನ್ಯಾಯತೀರ್ಪಿನಲ್ಲಿ ಎದುರುಗೊಳ್ಳುವದಕ್ಕೆ ಮತ್ತು ನಮ್ಮ ನಿತ್ಯವಾದ ನಿವಾಸವನ್ನು ಪ್ರವೇಶಿಸುವದಕ್ಕೆ ಸಿದ್ಧರಾಗಿರುತ್ತೇವೋ? EE

## ಯೇಸುವಿನಲ್ಲಿ ಪುನರ್ಮಿಲನ (4:13-18)

ಯೇಸು ತಿರಿಗಿ ಬರುತ್ತಿದ್ದಾನೆ! ಅದು ಯೇಸುವಿನ ಕುರಿತ ಶುಭವಾರ್ತೆಯಲ್ಲಿನ ಒಂದು ಮೂಲಭೂತವಾದ ವಾಸ್ತವಾಂಶವಾಗಿರುತ್ತದೆ. ಒಂದು ವೇಳೆ ನಾನು, "ಯೇಸು ಈ ದಿನ ಹಿಂದಿರುಗಿ ಬರುವನು!" ಎಂದು ಹೇಳಿದರೆ ಅದು ತೀವ್ರವಾದ ಪ್ರತಿಕ್ರಿಯೆಗಳನ್ನು ಎಬ್ಬಿಸುವದು, ಅದು ಭಯವಾಗಿರಬಹುದು, ಆತಂಕ, ಅಥವಾ ಸಂತೋಷ ಆಗಿರಬಹುದಾಗಿದೆ.

ಯೇಸುವಿನ ಪುನರಾಗಮನವು 1 ಥೆಸಲೋನಿಕದವರಿಗೆ ಬರೆದ ಪತ್ರಿಕೆಯ ಪ್ರಮುಖ ಚರ್ಚೆಯಾಂಶವಾಗಿದೆ, ಪ್ರತಿಯೊಂದು ಅಧ್ಯಾಯದಲ್ಲಿಯೂ ಪ್ರಸ್ತಾಪಿಸಲ್ಪಡುತ್ತದೆ. ಆತನ ಪುನರಾಗಮನದ ಕುರಿತು ಇಂದು ಆಗಾಗ್ಗೆ ಬೋಧಿಸುವದಕ್ಕೆ ಎರಡು ಕಾರಣಗಳಿರುತ್ತವೆ: ಅದು ಸಂಭವಿಸುವದೆಂದು ಅನೇಕ ಜನರು ನಂಬುವದಿಲ್ಲ, ಅಥವಾ ನಂಬುವಂತ ಅನೇಕರು ನ್ಯಾಯತೀರ್ಪು ಇರುವದಿಲ್ಲವೇನೋ ಎಂಬಂತೆ ಜೀವಿಸುತ್ತಿದ್ದಾರೆ. 1 ಥೆಸಲೋನಿಕದವರಿಗೆ ಬರೆದ ಪತ್ರಿಕೆಯಲ್ಲಿ ಯೇಸುವಿನ ಪುನರಾಗಮನದ ಕುರಿತು ಚರ್ಚಿಸುವದಕ್ಕೆ ಇವುಗಳಲ್ಲಿ ಯಾವದೊಂದು ಕಾರಣವಾಗಿರಲಿಲ್ಲ. ಪುಸ್ತಕವು ಯಾರಿಗೆ ಬರೆಯಲ್ಪಟ್ಟಿತೋ ಆ ಕ್ರೈಸ್ತರು ಈಗಾಗಲೇ ಯೇಸುವಿನ ಪುನರಾಗಮನದಲ್ಲಿ ನಂಬಿಕೆಯನ್ನಿಟ್ಟಿದ್ದರು. ವಾಸ್ತವದಲ್ಲಿ, ಆತನ ಪುನರಾಗಮನವನ್ನು ಎದುರು ನೋಡಿದ್ದೇ ಅವರು ಕ್ರೈಸ್ತರಾಗುವದಕ್ಕೆ ಒಂದು ಕಾರಣವಾಗಿತ್ತು; ಅವರು ಯೇಸುವನ್ನು ಸಂಧಿಸುವದಕ್ಕೆ ಸಿದ್ಧರಾಗಿರಲು ಬಯಸಿದ್ದರು. ಯೇಸುವಿನ ಬರೋಣವು ಆತನೊಂದಿಗೆ ಮತ್ತು ಬೇರೆ ಸ್ಥಳಗಳಲ್ಲಿದ್ದ ತಮ್ಮ ಸಹೋದರರೊಂದಿಗೆ ಪುನರ್ಮಿಲನಗೊಳ್ಳುವ ಒಂದು ದೊಡ್ಡ ಗಳಿಗೆಯಾಗಿರುವದು ಎಂದು ಬಲ್ಲವರಾಗಿದ್ದರು.

ಹೇಗೂ, ಒಂದು ಸಂಶಯವು ಅವರ ಮನಸ್ಸುಗಳನ್ನು ತುಂಬಿಕೊಂಡಿತ್ತು ಮತ್ತು ಅವರು ಯೇಸುವು ಹಿಂದಿರುಗಿ ಬರುವದನ್ನು ಯೋಚಿಸುವಾಗ ಅದು ಅವರನ್ನು ದುಃಖಗೊಳಿಸುವದಾಗಿತ್ತು. ಈಗಾಗಲೆ ಮರಣಿಸಿರುವಂತವರ ಅಂತ್ಯಾವಸ್ಥೆಯು ಏನಾಗುವದು? ಅವರು ಈ ಮಹಾ ಪುನರ್ಮಿಲನವನ್ನು ತಪ್ಪಿಸಿಕೊಳ್ಳುವರೋ? 4:13-18ರಲ್ಲಿ, ಪೌಲನು ಅವರಿಗೋಸ್ಕರ ಈ ಚಿಂತೆಗೊಳಪಡಿಸಿದ್ದ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾನೆ. ತತ್ಫಲಿತವಾಗಿ, ಅವರು ಯೇಸುವಿನ ಪುನರಾಗಮನವನ್ನು ಸಂತೋಷದಿಂದ ಎದುರು ನೋಡುವದಕ್ಕೆ ಶಕ್ತರಾಗಬಹುದಿತ್ತು.

ಯೇಸುವಿನ ಪುನರಾಗಮನದ ನಿರೀಕ್ಷೆಯು ನಮ್ಮನ್ನು ಸಂತೋಷದಿಂದ ತುಂಬಿಸುವದೋ? ನಮ್ಮ ಪ್ರತಿಕ್ರಿಯೆಯು ಏನಾಗಿರಬೇಕು? ಇದರ ಬಗ್ಗೆ ತೀರ್ಮಾನಿಸುವದಕ್ಕೋಸ್ಕರ, ಯೇಸು ಬಂದಾಗ ಏನು ಸಂಭವಿಸುವದು ಮತ್ತು ಅದಕ್ಕೆ ನಮ್ಮ ಮನೋಭಾವವು ಏನಾಗಿರತಕ್ಕದ್ದೆಂಬುದನ್ನು ಕಂಡುಕೊಳ್ಳುವ ಅಗತ್ಯವಿರುತ್ತದೆ.

*ಲೋಕವು ದುಃಖಿಸುವ ರೀತಿಯಲ್ಲಿ ನಾವು ದುಃಖಿಸಬಾರದು (4:13).* ಥೆಸಲೋನಿಕದವರಿಗೆ ಮರಣಿಸಿದ್ದ ತಮ್ಮ ಸಹೋದರರ ಹಿತಾಸಕ್ತಿಯ ಬಗ್ಗೆ ಚಿಂತೆಯಾಗಿತ್ತು. ಮರಣವು ನಿದ್ರೆಗೆ ಹೋಲಿಕೆಯಾಗಿದೆಯೆಂಬುದನ್ನು ಯೇಸು ಲಾಜರನು ಸತ್ತ ಬಳಿಕ ಬಳಸಿದ್ದನು (ಯೋಹಾನ 11:11-14). ಹೀಗೆ ಬಳಸಿದ್ದಕ್ಕೆ ಕಾರಣವೇನೆಂದರೆ ಎರಡೂ ಸಂದರ್ಭದಲ್ಲಿ ಪ್ರಜ್ಞೆಯಿರುವದಿಲ್ಲ ಮತ್ತು ಜೀವನದ ವ್ಯವಹಾರಗಳಲ್ಲಿ ಭಾಗಿಯಾಗುವಿಕೆಯು ಇರುವದಿಲ್ಲ ಎಂಬದೆ. ಈ ಕ್ರೈಸ್ತರು ಮರಣ ಹೊಂದಿದ್ದ ಆ ಸಹೋದರರ ಹಿತಾಸಕ್ತಿಯ ಬಗ್ಗೆ ಕಳಕಳಿ ಹೊಂದಿದ್ದರು.

ಅನೇಕರು ಮರಣವು ಅಂತ್ಯವನ್ನು ಗುರುತಿಸುತ್ತದೆ-ಜೀವದ ಅಂತ್ಯ ಮತ್ತು, ಆ ಕಾರಣದಿಂದ ಜೀವಿಸುವದರಲ್ಲಿ ಇರುವಂಥ ಸಂಬಂಧಗಳು, ಆಶೀರ್ವಾದಗಳು, ಮತ್ತು ಪ್ರಯೋಜನಗಳ ಅಂತ್ಯವೆಂದು ನಂಬುತ್ತಾರೆ. ಈ ಜೀವನದಾಚೆ ಏನಾದರೂ ಮುಂದುವರೆಯುತ್ತದೆ ಎಂಬ ನಿರೀಕ್ಷೆಯು ಅವರಿಗಿರುವದಿಲ್ಲ. ಮರಣವು ಕ್ರೈಸ್ತರಿಗಿರುವ ಎಲ್ಲಾ ಪ್ರಯೋಜನಗಳಿಗೆ ಒಂದು ಅಂತ್ಯವಾಗಿರುವದಿಲ್ಲ, ಆದರೆ ಒಂದು ಆಶೀರ್ವಾದ ಕಾಲದ ಮತ್ತು ನಿತ್ಯವಾದ ಪ್ರಯೋಜನ ಕಾಲದ ಒಂದು ಆರಂಭವಾಗಿದೆ ಎಂಬುದನ್ನು ಪೌಲ ಮತ್ತು ಆತನ ಜೊತೆಯ ಕೆಲಸಗಾರರು ಬಲ್ಲವರಾಗಿದ್ದರು (4:13).

ಯೇಸುವು ಹಿಂದಿರುಗಿ ಬರೋಣಕ್ಕೆ ಮುಂಚೆ ಈಗಾಗಲೆ ಸತ್ತವರು ಆತನ ಬರೋಣದಿಂದ ಸಿಕ್ಕುವ ಪ್ರಯೋಜನಗಳನ್ನು ಕಳೆದುಕೊಳ್ಳುವರೆಂಬದಾಗಿ ಥೆಸಲೋನಿಕದವರು ಭಾವಿಸಿಕೊಂಡಿದ್ದರೆಂದು ತೋರುತ್ತದೆ, ಆದ್ದರಿಂದ ನಿರೀಕ್ಷೆಯು ಈ ಜೀವಿತವನ್ನು ದಾಟಿಯು ಮುಂದುವರೆಯುತ್ತದೆಂಬುದನ್ನು ಅವರಿಗೆ ತಿಳಿಯ ಪಡಿಸುವದಕ್ಕಾಗಿ ಪತ್ರಿಕೆಯ ಈ ಭಾಗವು ಬರೆಯಲ್ಪಟ್ಟಿರುತ್ತದೆ. ಸಮಾಧಿಯ ಆಚೆ ಪ್ರಯೋಜನಗಳನ್ನು ಹೊಂದುವ ಯಾವ ನಿರೀಕ್ಷೆಯೂ ಇಲ್ಲದಂಥ ಲೋಕದ ಜನರ ಹಾಗೆ ಕ್ರೈಸ್ತರು ದುಃಖಿಸಬಾರದು.

ಇಂದು ಜನರ ಮಧ್ಯದಲ್ಲಿ ಮರಣವು ಕೇವಲ ಒಂದು ದುಃಖದ ಸಮಯವಾಗಿರುತ್ತದೆಂಬ ಜನಪ್ರಿಯವಾದ ಕಲ್ಪನೆಯು ಇರುತ್ತದೆ. ನಮಗೆ ಯೇಸುವಿನಲ್ಲಿ ನಿರೀಕ್ಷೆಯು ಇರುವದರಿಂದ, ನಾವು ಈ ವಿಧದಲ್ಲಿ ಪ್ರತಿಕ್ರಿಯಿಸಬಾರದು!

*ನಾವು ದುಃಖಿಸಬಾರದು ಯಾಕೆಂದರೆ ಮರಣದ ಹಿಂದೆ ಜೀವವು ಇರುತ್ತದೆ (4:14).* "ಯೇಸುವಿನಲ್ಲಿದ್ದುಕೊಂಡು ನಿದ್ರೆಹೋಗುವವರು" ಎಂಬ ಪದಗುಚ್ಛವು ಪ್ರೋತ್ಸಾಹ ಕರವಾಗಿರುತ್ತದೆ. ಥೆಸಲೋನಿಕದ ಕ್ರೈಸ್ತರಿಗಾದರೋ, ದೇವರು ಈಗಲೂ ಮರಣಿಸಿರುವ ಅವರ ಸಹೋದರರ ಬಗ್ಗೆ ತಿಳಿದಿದ್ದಾನೆ, ಅವರ ಬಗ್ಗೆ ಕಳಕಳಿ ಹೊಂದಿದ್ದಾನೆ, ಮತ್ತು ಕಾಳಜಿ ಮಾಡುತ್ತಾನೆಂಬ ಅರ್ಥವನ್ನು ಕೊಡುವದಾಗಿತ್ತು. ಮೊದಲ ಶತಮಾನದಲ್ಲಿ ಯೆಹೂದ್ಯರೊಂದಿಗೆ ಮಾತಾಡುವಾಗ, ಯೇಸುವು ನಂಬಿಗಸ್ತರು "ಅಬ್ರಹಾಮನ ಎದೆಗೆ

ಒರಗಿಕೊಳ್ಳುವರು" ಎಂದು ಹೇಳಿದನು (ನೋಡಿರಿ ಲೂಕ 16:22), ಅದು ನಂಬಿಗಸ್ತರಾದ ಯೆಹೂದಿ ಜನರಿಗೆ ವಿಶ್ರಾಂತಿ ಮತ್ತು ಆದರಣೆಯ ಯೋಚನೆಯನ್ನು ತಿಳಿಯಪಡಿಸಿರಬಹುದಾಗಿದೆ. ಮರಣಿಸಿರುವಂಥ ಕ್ರೈಸ್ತರ ಅಂತ್ಯಾವಸ್ಥೆಯ ಕುರಿತು ಏನೇ ಅನಿಶ್ಚಿತತೆಗಳಿದ್ದಾಗ್ಯೂ, ಅವರು ದೇವರ ಆರೈಕೆಯಲ್ಲಿದ್ದಾರೆಂಬುದನ್ನು ಥೆಸಲೋನಿಕದವರು ತಿಳಿಯಬಹುದಿತ್ತು.

ದೇವರು ಮೋಶೆಗೆ ತಾನು "ಅಬ್ರಹಾಮನ ದೇವರು, ಇಸಾಕನ ದೇವರು, ಯಾಕೋಬನು ದೇವರು" (ವಿಮೋಚನಕಾಂಡ 3:6) ಎಂದು ಹೇಳಿದಾಗ, ಈ ನಂಬಿಗಸ್ತ ಯೆಹೂದ್ಯರು, ಮರಣಿಸಿದ್ದ ಬಳಿಕವೂ ಇನ್ನೂ ಅಸ್ತಿತ್ವದಲ್ಲಿದ್ದಾರೆ ಎಂದರ್ಥವಾಗಿದೆ ಎಂಬುದನ್ನು ಯೇಸು ಗಮನಕ್ಕೆ ತರುತ್ತಾನೆ (ನೋಡಿರಿ ಮತ್ತಾಯ 22:32). ದೇವರು ಜೀವಿಸುವವರಿಗೆ ದೇವರಾಗಿದ್ದಾನಾದ್ದರಿಂದ, ಒಂದು ರೀತಿಯಲ್ಲಿ ಇದರರ್ಥವು, ಅಬ್ರಹಾಮ, ಇಸಾಕನು ಮತ್ತು ಯಾಕೋಬರು ಈಗಲೂ ಜೀವಂತವಾಗಿದ್ದಾರೆ, ದೇವರ ಪೋಷಣೆಯಲ್ಲಿದ್ದಾರೆ, ಮತ್ತು ಪುನರುತ್ಥಾನದ ವೇಳೆ ಪುನಃ ಬರಬಹುದು ಎಂಬದೆ.

ಥೆಸಲೋನಿಕದವರ ಬಳಿಯಲ್ಲಿ ಈಗಾಗಲೇ ಮರಣಾನಂತರದ ಆಶೀರ್ವಾದಗಳ ಬೀಗದ ಕೈ ಇತ್ತು; ಯೇಸುವಿನ ಪುನರಾಗಮನದ ವೇಳೆ ಅವರು ಆತನನ್ನು ಸಂಧಿಸುವ ಯೋಜನೆಯನ್ನು ಮಾಡಿಕೊಂಡಿದ್ದರು! ಮರಣದ ಬಳಿಕ ಜೀವವು ಇರುತ್ತದೆ (4:14)! ಸ್ವತ ಯೇಸುವೇ ಒಮ್ಮೆ ಮರಣಿಸಿದ್ದನು ಆದರೆ ಈಗ ಜೀವಂತನಾಗಿದ್ದಾನೆ. ಈ ಕ್ರೈಸ್ತರು ಸತ್ತವರಿಗೆ ಪುನರುತ್ಥಾನವಾಗುತ್ತದೆಂಬುದನ್ನು ನಂಬುತ್ತಿದ್ದರು: ದೇವರು ತನ್ನ ವಾಗ್ದಾನಗಳನ್ನು ಉಳಿಸಿಕೊಳ್ಳುವದಕ್ಕಾಗಿ ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದ ಪ್ರಕಾರವೇ, ತಾನು ಸಹೋದರರಿಗೆ ವಾಗ್ದಾನ ಮಾಡಿದ್ದ ಪ್ರಯೋಜನಗಳನ್ನು ಆನಂದಿಸುವಂತೆ ತಮ್ಮ ಸಹೋದರರು ಹಾಗೂ ಸಹೋದರಿಯರನ್ನು ಎಬ್ಬಿಸುವನೆಂಬ ನಂಬಿಕೆ ಅವರಲ್ಲಿತ್ತು!

ನೀವು ಮರಣವನ್ನು ನಿರೀಕ್ಷೆಯ ಅಂತ್ಯವೆಂದು ಯೋಚಿಸುತ್ತೀರೋ, ಅಥವಾ ಬಹೂಶಃ ಕ್ರೈಸ್ತರು ಸಾಯುವಾಗ ಅದೇ ಸಂಭವಿಸುವದೇನೋ ಎಂಬಂತೆ ನಡೆದುಕೊಳ್ಳುವಿರೋ? ನಾವು ಸ್ವತಃ ಸತ್ತಾಗ ಏನನ್ನು ಕಳಕೊಳ್ಳುವೆವೆಂಬುದನ್ನು ಮಾತ್ರವೇ ಯೋಚಿಸುತ್ತೀರೋ ಮತ್ತು, ಆ ಕಾರಣದಿಂದ, ಮರಣವನ್ನು ನಡುಕದ ಭಾವದೊಂದಿಗೆ ಎದುರು ನೋಡುವಿರೋ? ನಮಗೆ ಮರಣಾನಂತರ ಇರುವದನ್ನು ಯೋಚಿಸಿ ಭಯಪಡುತ್ತೇವೋ? ಪೌಲನು ಫಿಲಿಪ್ಪಿಯವರಿಗೆ "ನನಗಂತೂ ಬದುಕುವದೆಂದರೆ ಕ್ರಿಸ್ತನೇ, ಸಾಯುವದು ಲಾಭವೇ" ಎಂದು ಹೇಳುತ್ತಾನೆ; ಆತನು ತನಗೆ "ಇಲ್ಲಿಂದ ಹೊರಟು ಹೋಗಿ ಬಿಟ್ಟು ಕ್ರಿಸ್ತನ ಜೊತೆಯಲ್ಲಿರಬೇಕೆಂಬದೇ ನನ್ನ ಅಭಿಲಾಷೆ" ಎಂದು ಹೇಳುತ್ತಾನೆ (ಫಿಲಿಪ್ಪಿ 1:21, 23). ಮರಣವನ್ನು ದೇವರಲ್ಲಿ ಭರವಸವಿಟ್ಟ ಭಾವದೊಂದಿದೆ ಮತ್ತು ಮರಣದಲ್ಲಿ ಆತನ ಒದಗಿಸುವಿಕೆಯನ್ನು ನೆನಸಿ ಸಂತೋಷ ಪಡುವವರಾಗಿ ಮರಣವನ್ನು ಎದುರುನೋಡುವದು ಕ್ರೈಸ್ತೀಯ ಪರಿಪಕ್ವತೆಗೆ ಒಂದು ಗುರುತಾಗಿರುತ್ತದೆ.

ವಾಸ್ತವದಲ್ಲಿ, ಯೇಸುವಿನ ಪುನರುತ್ಥಾನದ ಮೂಲಕವಾಗಿ ದೇವರಲ್ಲಿ ನಂಬಿಕೆಯನ್ನು ಹೊಂದಿರುವದೇ ಮರಣ ಭಯವನ್ನು ಜಯಿಸುವದಕ್ಕೆ ಏಕೈಕ ದಾರಿಯಾಗಿರುತ್ತದೆ.

ನಾಸ್ತಿಕರು ತಮಗಿರುವದನ್ನೆಲ್ಲಾ ಕಳೆದುಕೊಳ್ಳುವ ಭವಿಷ್ಯವನ್ನು ಎದುರಿಸುತ್ತಾರೆ; ಖಂಡಿತವಾಗಿಯೂ ಅವರಿಗೆ ನಿರೀಕ್ಷಿಸುವದಕ್ಕೆ ಏನೂ ಇರುವದಿಲ್ಲ. ಆಜ್ಞೇಯತಾವಾದಿಗಳು ಮರಣದಾಚೆಯಲ್ಲಿರುವದರ ಕುರಿತು ಸಂಶಯಗಳನ್ನು ಹೊಂದಿರುತ್ತಾರೆ. ದೇವರಲ್ಲಿ ವಿಶ್ವಾಸವಿಡುವವರು ಮಾತ್ರವೇ ಈ ಜೀವನವು ಅಂತ್ಯಗೊಂಡಾಗ ಆಶೀರ್ವಾದಗಳಿರುತ್ತವೆಂಬ ಭರವಸೆಯನ್ನು ಹೊಂದಿರಬಲ್ಲರು. ಮರಣದ ಬಳಿಕ ಜೀವವು ಇರುತ್ತದೆಂಬದಕ್ಕಾಗಿ ದೇವರಲ್ಲಿ ವಿಶ್ವಾಸವಿಡಿರಿ!

*ನಾವು ದುಃಖಿಸಬಾರದು, ಯಾಕೆಂದರೆ ಮರಣಿಸಿರುವವರು ಯೇಸುವಿನ ಪುನರಾಗಮನದಲ್ಲಿ ಪಾಲುಗಾರರಾಗುವರು (4:15, 16).* ಯೇಸುವಿನ ಪುನರಾಗಮನದ ವೇಳೆಯಲ್ಲಿ ಕೆಲವರು ಜೀವದಿಂದಿರುವರು ಎಂಬ ವಾಸ್ತವಾಂಶದ ಅರ್ಥವು ಈಗಾಗಲೇ ಮರಣಿಸಿರುವವರು ಪುನರಾಗಮನದ ಪ್ರಯೋಜನಗಳನ್ನು ತಪ್ಪಿಸಿಕೊಳ್ಳುವರು ಎಂದಾಗಿರುವದಿಲ್ಲ. ಕ್ರಿಸನಲ್ಲಿದ್ದುಕೊಂಡು ಮರಣಿಸಿರುವವರು “ಆತನೊಡನೆ” ಸಮಾಧಿಯಿಂದ ಹೊರಕ್ಕೆ ಕರೆತರಲ್ಪಡುವರು (4:14).

ಯೇಸುವಿನ ಪುನರಾಗಮನದ ವಿವರಗಳಲ್ಲಿ ಮೂರು ವಿವರಗಳು ನಮಗೆ 15 ಮತ್ತು 16 ವಚನಗಳಲ್ಲಿ ಪ್ರಕಟಗೊಳಿಸಲ್ಪಟ್ಟಿವೆ. ಮೊದಲನೆಯದಾಗಿ, ಕರ್ತನು ಆಕಾಶದಿಂದ ಬರುವನು. ಯೇಸು ಪರಲೋಕಕ್ಕೆ ಆರೋಹಣಗೊಳ್ಳುತ್ತಾ, ಕಣ್ಣಿಗೆ ಮರೆಯಾಗುತ್ತಿದ್ದ ಹಾಗೆ, ಆತನು ಶಿಷ್ಯರಿಗೆ ಹೀಗೆ ಹೇಳಲ್ಪಟ್ಟಿತು, “ಗಲಿಲಾಯದವರೇ, ನೀವು ಯಾಕೆ ಆಕಾಶದ ಕಡೆಗೆ ನೋಡುತ್ತಾ ನಿಂತಿದ್ದೀರಿ? ನಿಮ್ಮ ಬಳಿಯಿಂದ ಆಕಾಶದೊಳಕ್ಕೆ ಸೇರಿಸಲ್ಪಟ್ಟಿರುವ ಆ ಯೇಸು ಯಾವ ರೀತಿಯಲ್ಲಿ ಆಕಾಶದೊಳಕ್ಕೆ ಹೋಗಿರುವದನ್ನು ನೀವು ಕಂಡಿರೋ ಅದೇ ರೀತಿಯಲ್ಲಿ ಬರುವನು” (ಅಪೊಸ್ತಲರ ಕೃತ್ಯಗಳು 1:11). ಯೇಸುವು ಹೊರಟು ಹೋದಷ್ಟೇ ಖಚಿತವಾಗಿ ಆತನ ಪುನರಾಗಮನವು ವಾಗ್ದಾನ ಮಾಡಲ್ಪಟ್ಟಿರುತ್ತದೆ. ಥೆಸಲೋನಿಕದವರು ಇದನ್ನು ನಂಬಿದರು; ಇದು ಸುವಾರ್ತೆಯ ಸಂದೇಶದ ಭಾಗವಾಗಿತ್ತು ಮತ್ತು ಅದು ಅವರು ಕ್ರೈಸ್ತರಾಗುವದಕ್ಕೆ ಕಾರಣವೂ ಆಗಿತ್ತು. (1:10).

ಎರಡನೆಯದಾಗಿ, ಪ್ರಧಾನದೂರನ ಶಬ್ದವೂ ದೇವರ ತುತೂರಿಯಧ್ವನಿಯೂ ಉಂಟಾಗುವದು. ಆತನ ಪುನರಾಗಮನವು ಗಟ್ಟಿಯಾದ ಶಬ್ದದೊಡನೆ ಘೋಷಿಸಲ್ಪಡುವದು; ಯಾರೋಬ್ಬರು ಅದನ್ನು ತಪ್ಪಿಸಿಕೊಳ್ಳುವದಿಲ್ಲ-ಜೀವದಿಂದಿರುವವರಾಗಿರಲಿ ಅಥವಾ ಸತ್ತವರಾಗಿರಲಿ! ವಿಶ್ವವನ್ನು ನಿರ್ಮಿಸಿ ನಿಯಂತ್ರಣವನ್ನು ಮಾಡುವದಕ್ಕೆ ದೇವರಿಗಿರುವ ಶಕ್ತಿಯು ಕೇವಲ “ಆತನ ಮಾರ್ಗಗಳ ಕಟ್ಟಕಡೆಯಾಗಿವೆ” ಎಂದು ಹೇಳಲಾಗಿದೆ (ಯೋಬನು 26:14)! ಯೇಸುವಿನ ಬರೋಣವನ್ನು ಘೋಷಿಸುವದಕ್ಕೆ ದೇವರು ಸುಲಭವಾಗಿ ಲೋಕದ ಗಮನವನ್ನು ಸೆಳೆಯುವನು.

ಮೂರನೆಯದಾಗಿ, ಸತ್ತವರು ಪುನರುತ್ಥಾನಗೊಳಿಸಲ್ಪಡುವರು. ಇದು ಮೊದಲ ಶತಮಾನದಲ್ಲಿ ಅಪೊಸ್ತಲರ ಬೋಧಿಸುತ್ತಿದ್ದ ವಿಷಯವಾಗಿತ್ತು. ನಾವು ಅಪೊಸ್ತಲರ ಕೃತ್ಯಗಳು 4:33ರಲ್ಲಿ ಹೀಗೆ ಓದುತ್ತೇವೆ, “ಕರ್ತನಾದ ಯೇಸು ಜೀವಂತನಾಗಿ ಎದ್ದು ಬಂದನೆಂಬದಕ್ಕೆ ಅಪೊಸ್ತಲರು ಬಹು ಬಲವಾಗಿ ಸಾಕ್ಷಿ ಹೇಳುತ್ತಿದ್ದರು.” ಇದು ಯೇಸುವಿನ ದೇವತ್ವದ ಪುರಾವೆಗೆ ಪರಾಕಾಷ್ಠೆಯಾದಂಥ ಅದ್ಭುತವಾಗಿತ್ತು. ಯೇಸುವನ್ನು ದೇವರು

ಮಾತ್ರವೇ ಪುನಃ ಜೀವಂತಗೊಳಿಸಿಬಲ್ಲನು. ಯೇಸುವು "ಸತ್ತಮೇಲೆ ಜೀವಿತನಾಗಿ ಎದ್ದು ಬಂದ ಮಹಾತ್ಕಾರ್ಯದಿಂದ ದೇವಕುಮಾರನೆಂದು ನಿರ್ಣಯಿಸಲ್ಪಟ್ಟನು ಆಗಿದ್ದನು" (ರೋಮಾ 1:4). ಯೇಸುವಿನ ಪುನರುತ್ಥಾನದ ಕಾರಣದಿಂದಾಗಿ, ನಾವು ಸಹ ಆತನ ಪುನರುತ್ಥಾನದಲ್ಲಿ ಪಾಲುಗಾರರಾಗಿದ್ದೇವಾದ್ದರಿಂದ, ಕ್ರೈಸ್ತರು ಮರಣಾನಂತರ ಶಾಶ್ವತವಾದ ಜೀವನದಲ್ಲಿ ಪಾಲುಗಾರರಾಗುವದನ್ನು ಎದುರು ನೋಡಬಹುದಾಗಿದೆ. ನಾವು ಹೀಗೆ ಓದುತ್ತೇವೆ, "ಕೇಳಿರಿ, ಇದುವರೆಗೆ ಗುಪ್ತವಾಗಿದ್ದ ಸಂಗತಿಯನ್ನು ನಿಮಗೆ ತಿಳಿಸುತ್ತೇನೆ-ನಾವೆಲ್ಲರೂ ನಿದ್ರೆ ಹೋಗುವದಿಲ್ಲ; ಆದರೆ ಕಡೇ ತುತೂರಿಯು ಧ್ವನಿಯಾಗುವಾಗ ನಾವೆಲ್ಲರು ಒಂದು ಕ್ಷಣದಲ್ಲೇ ರೆಪ್ಪೆ ಬಡಿಯುವಷ್ಟರೊಳಗಾಗಿ ಮಾರ್ಪಡುವೆವು. ತುತೂರಿಯು ಊದಲಾಗಿ ಸತ್ತವರು ನಿರ್ಲಯರಾಗಿ ಎಬ್ಬಿಸಲ್ಪಡುವರು, ನಾವು ಮಾರ್ಪಡುವೆವು" (1 ಕೊರಿಂಥ 15:51, 52). ಅಂತಿಮ ಪುನರ್ಮಿಲನದ ಮೊದಲ ಭಾಗವೆಂದರೆ ಕ್ರಿಸ್ತನಲ್ಲಿದ್ದುಕೊಂಡು ಸತ್ತವರು ಎಬ್ಬಿಸಲ್ಪಡುವರು, ಅವರು ನಿರ್ಲಯವಾದ ದೇಹಗಳನ್ನು ಪಡೆದುಕೊಳ್ಳುವರು. ಬಳಿಕ ಅವರು ಯೇಸುವಿನೊಂದಿಗೆ ನಿತ್ಯತ್ವವನ್ನು ಆನಂದಿಸುವದಕ್ಕೆ ಆರಂಭಿಸುವರು.

*ನಾವು ದುಃಖಿಸಬಾರದು, ಯಾಕೆಂದರೆ ಜೀವಿದಿಂದಿರುವವರು ಮತ್ತು ಎಬ್ಬಿಸಲ್ಪಟ್ಟವರು ಪುನರ್ಮಿಲನಗೊಳ್ಳುವರು (4:17).* ಕ್ರಿಸ್ತನಲ್ಲಿದ್ದುಕೊಂಡು ಸತ್ತವರ ವಿಷಯವನ್ನು ಗಮನಿಸಿದ ಬಳಿಕ, ದೇವರು ಜೀವದಿಂದಿರುವವರು ಎಬ್ಬಿಸಲ್ಪಟ್ಟ ದೇವಜನರ ಜೊತೆಯಲ್ಲಿ ಸದಾಕಾಲವೂ ಯೇಸುವಿನೊಂದಿಗೆ ಇರುವಂತಾಗಲು ಅವರ ವಿಷಯದಲ್ಲಿ ಗಮನ ಹರಿಸುವನು (4:17). ಮಹಾ ಪುನರ್ಮಿಲನವು "ಅಂತರಿಕ್ಷದಲ್ಲಿ" ಸಂಭವಿಸುವದೆಂಬದಾಗಿ ಈ ವಚನವು ಬಣ್ಣಿಸುತ್ತದೆ ಮತ್ತು ಯೇಸು ರಹಸ್ಯವಾಗಿ ಹಿಂದಿರುಗುವನು ಮತ್ತು ಭೂಮಿಯ ಮೇಲೆ ಕಂಡುಕೊಳ್ಳಲ್ಪಡುವನೆಂಬ ಯೋಚನೆಯು ಸುಳ್ಳು ಎಂದು ಸಾಭಿತುಗೊಳಿಸುತ್ತದೆ. ಅಲ್ಲದೆ ಯೇಸು ತನ್ನ ರಾಜ್ಯವನ್ನು ಸ್ಥಾಪಿಸುವದಕ್ಕೆ ಬರುವನೆಂಬ ಯೋಚನೆಯು ಸತ್ಯವಲ್ಲ ಎಂಬುದು ಸಹ ಇದರ ಅರ್ಥವಾಗಿರುತ್ತದೆ. ದೇವರು ತನ್ನ ದೇವಜನರು ಭೂಮಿಯ ಮೇಲೆ ನಿತ್ಯತ್ವವನ್ನು ಕಳೆಯಬೇಕೆಂದು ಯೋಜನೆಯನ್ನು ಮಾಡಿರುವದಿಲ್ಲ.

"ಆಕಾಶಮಂಡಲವು ಮಹಾ ಘೋಷದಿಂದ ಇಲ್ಲದೆ ಹೋಗುವದು" ಮತ್ತು "ಭೂಮಿಯೂ ಅದರಲ್ಲಿರುವ ಕೆಲಸಗಳೂ ಸುಟ್ಟುಹೋಗುವವು" ಎಂದು ಶಾಸ್ತ್ರಗಳು ನಮಗೆ ಭರವಸೆಯನ್ನು ಕೊಡುತ್ತವೆ (2 ಪೇತ್ರ 3:10b, d). ನಾವು ನೆನಪಿನಲ್ಲಿಟ್ಟುಕೊಳ್ಳತಕ್ಕದ್ದೇನೆಂದರೆ, "ನಾವಾದರೋ ಪರಲೋಕ ಸಂಸ್ಥಾನದವರು; ಕರ್ತನಾದ ಯೇಸು ಕ್ರಿಸ್ತನು ಅಲ್ಲಿಂದಲೇ ರಕ್ಷಕನಾಗಿ ಬರುವದನ್ನು ಎದುರುನೋಡುತ್ತಾ ಇದ್ದೇವೆ" ಎಂಬದೆ (ಫಿಲಿಪ್ಪಿ 3:20). ಯೇಸುವು ಬರುವಾಗ ದೇವರು ನಮಗೊಂದು ಹೊಸ, ನಿತ್ಯವಾದ ನಿವಾಸವನ್ನು ಒದಗಿಸುವ ದಿನವನ್ನು ಎದುರು ನೋಡುತ್ತಿದ್ದೇವೆ. ಪೇತ್ರನು ಹೀಗೆ ಹೇಳುತ್ತಾನೆ, "ನಾವು ದೇವರ ವಾಗ್ದಾನವನ್ನು ನಂಬಿ ನೂತನಾಕಾಶ ಮಂಡಲವನ್ನೂ ನೂತನಭೂಮಂಡಲವನ್ನೂ ಎದುರುನೋಡುತ್ತಾ ಇದ್ದೇವೆ; ಅವುಗಳಲ್ಲಿ ನೀತಿಯು ವಾಸವಾಗಿರುವದು" (2 ಪೇತ್ರ 3:13).

*ನಾವು ದುಃಖಿಸಬಾರದು, ಆದರೆ ಬದಲಾಗಿ ಜೊತೆಯ ಕ್ರೈಸ್ತರನ್ನು ಸಂತೈಸಬೇಕು (4:18).* ಥೆಸಲೋನಿಕದಲ್ಲಿನ ಕ್ರೈಸ್ತರು ಮರಣಿಸಿರುವ ಸಹೋದರರ ಭವಿಷ್ಯವು

ಏನಾಗಿರುವದೋ ಎಂದು ಚಿಂತಿತರಾಗಿದ್ದರು. ಈಗ ನಿಜವಾದ ಪರಿಸ್ಥಿತಿಯು ಏನಾಗಿರುವದೆಂದು ವಿವರಿಸಿದ ಮೇಲೆ, ಅವರು ಮರಣಿಸಿರುವವರ ಬಗ್ಗೆ, ಅವರು ಯೇಸುವಿನೊಂದಿಗೆ ಪುನರ್ಮಿಲನವನ್ನು ತಪ್ಪಿಸಿಕೊಳ್ಳುವರೋ ಎಂದು ಯೋಚಿಸಿ ವಿಷಾದವನ್ನು ಪಡುವವರಾಗಿರಲಿಲ್ಲ. ಅವರು ಆ ಸಹೋದರರೊಂದಿಗೆ ಪುನರ್ಮಿಲನಗೊಳ್ಳುವರು, ಮತ್ತು ಒಟ್ಟಾಗಿ ಅವರು ದೇವರ ಆಶೀರ್ವಾದಗಳನ್ನು ನಿತ್ಯಕಾಲಕ್ಕೂ ಅನುಭವಿಸುವರು.

ಕ್ರೈಸ್ತರಿಗೆ ಮಾತ್ರವೇ ಮರಣಾನಂತರ ಜೀವನದ ನಿರೀಕ್ಷೆಯು ಇರುತ್ತದೆ. ಕ್ರಿಸ್ತನ ಹಿಂಬಾಲಕರಾಗಿ ಮತ್ತು ಪುನರುತ್ಥಾನದಲ್ಲಿ ನಂಬಿಕೆಯುಳ್ಳವರಾಗಿ, ನಮ್ಮ ಜೊತೆಯ ಕ್ರೈಸ್ತರ ಯೋಚನೆಗಳು ಮರಣದ, ಅದು ಅವರ ಮರಣವೇ ಆಗಿರಬಹುದು ಅಥವಾ ಒಬ್ಬ ಸಹೋದರ ಅಥವಾ ಸಹೋದರಿಯ ಮರಣದ ಕಡೆಗೆ ತಿರುಗಿಕೊಳ್ಳುವಾಗ ಅವರನ್ನು ನಾವು ಅವರನ್ನು ಸಂತೈಸಬಹುದು (4:18).

*ಮುಕ್ತಾಯ.* ಯೇಸುವಿನ ಪುನರಾಗಮನದ ಕುರಿತ ಸತ್ಯದ ಪ್ರಕಟನೆಯು ದೇವರೊಂದಿಗೆ ಸರಿಯಾದ ಸಂಬಂಧವನ್ನು ಹೊಂದಿರುವವರಿಗೆ ಭದ್ರತೆ ಮತ್ತು ಆದರಣೆಯನ್ನುಂಟು ಮಾಡುತ್ತದೆ. ಕ್ರೈಸ್ತ ಜೀವಿತವು ಪ್ರಯಾಸಗಳನ್ನು ಮತ್ತು ಒತ್ತಡಗಳನ್ನು ಹೊಂದಿದೆ, ಈ ಕ್ರೈಸ್ತರಿಗಿದ್ದ ರೀತಿಯಲ್ಲಿಯೇ; ಆದರೆ ಯೇಸುವು ಹಿಂದಿರುಗಿ ಬರುವಾಗ, ಪ್ರತಿಯೊಂದು ಸಮಸ್ಯೆಯು ಅಂತ್ಯಗೊಳ್ಳುವದು. TP

## ನಿದ್ರೆಹೋಗಿರುವವರು (4:13-18)

ಥೆಸಲೋನಿಕದವರು ಕ್ರಿಸ್ತನ ಪುನರಾಗಮನದ ಕುರಿತ ಕೆಲವೊಂದು ಅಂಶಗಳನ್ನು ಅಪಾರ್ಥ ಮಾಡಿಕೊಂಡಿದ್ದರೆಂದು ತೋರುತ್ತದೆ. ಒಂದು ತಪ್ಪು ಕಲ್ಪನೆಯು ಏನಾಗಿತ್ತೆಂದರೆ ಈಗಾಗಲೆ ಸತ್ತಿರುವವರು ಹೇಗೋ ಕ್ರಿಸ್ತನ ಎರಡನೆಯ ಬರೋಣವನ್ನು ತಪ್ಪಿಸಿಕೊಳ್ಳುವರು ಎಂಬದಾಗಿತ್ತು. ಪೌಲನು ಕ್ರಿಸ್ತನ ಪುನರಾಗಮನದ ಕುರಿತು ವಿವರಿಸುವಾಗ, ಆತನು ಈಗಾಗಲೇ ಕ್ರಿಸ್ತನಲ್ಲಿದ್ದುಕೊಂಡು ನಿದ್ರೆಹೋಗಿರುವ ಅವರ ಪ್ರಿಯರ ವಿಷಯದಲ್ಲಿ ಅವರು ಹೇಗೆ ಯೋಚಿಸಬೇಕೆಂಬುದನ್ನು ಪೂರ್ಣವಾಗಿ ತಿಳಿಸುವದಕ್ಕೆ ಸಮಯವನ್ನು ತೆಗೆದುಕೊಳ್ಳುತ್ತಾನೆ.

*"ನಿರೀಕ್ಷೆಯಿಲ್ಲದವರಾದ ಇತರರಂತೆ ದುಃಖಿಸಬೇಡಿರಿ."* ಪೌಲನು ಒಬ್ಬ ಪ್ರಿಯನ ಮರಣದ ಕುರಿತು ಕಣ್ಣೀರಿಡುವದನ್ನು ನಿಷೇಧಿಸಲಿಲ್ಲ (ಯೋಹಾನ 11:35), ಆದರೆ ಸತ್ತಿರುವ ಪ್ರಿಯನಿಗೆ ನಿರೀಕ್ಷೆಯೇ ಇಲ್ಲವೇನೋ ಎಂಬಂತೆ ದುಃಖಿಸುವದನ್ನು ಆತನು ನಿಷೇಧಿಸುತ್ತಾನೆ. ನಿರೀಕ್ಷೆಯಿಲ್ಲದವರಾಗಿ ಸಾಯುವವರಿಗೆ ಮರಣವು ನಿರಾಶದಾಯಕತೆಯನ್ನು ತರುತ್ತದೆ; ಆದರೆ ಕ್ರಿಸ್ತನಿಗಾದರೋ ಕ್ರಿಸ್ತನಲ್ಲಿ ಮಹಿಮೆಯುಳ್ಳ ನಿರೀಕ್ಷೆಯಿರುತ್ತದೆ, ಮತ್ತು ಅದರ ಮೂಲಕ, ಒಂದು ಅತೀತವಾದ ಆದರಣೆಯನ್ನು ಪಡೆಯುತ್ತಾನೆ.

*"ನಾವು ನಮ್ಮ ಪ್ರಿಯರನ್ನು ಮತ್ತೊಂದಾವರ್ತಿ ನೋಡುವವೆಂಬಬ ಭರವಸೆಯಿರಲಿ."* ಅವರು ಯೇಸುವಿನ ಮರಣ, ಹೂಣಲ್ಪಡುವಿಕೆ, ಮತ್ತು ಪುನರುತ್ಥಾನಗಳಲ್ಲಿ ಎಷ್ಟು

ಖಚಿತವಾಗಿ ವಿಶ್ವಾಸವಿಟ್ಟಿದ್ದರೋ, ಅಷ್ಟೇ ನಂಬಿಕೆಯನ್ನು ಅವರು ತಮ್ಮ ಪ್ರಿಯರನ್ನು ಮತ್ತೊಂದಾವರ್ತಿ ನೋಡುವವೆಂದು ಸಹ ಅವರು ಹೊಂದಿರಬಹುದಿತ್ತು. ಸಭೆಯ ಮಹಾ ಶಿರಸ್ಸಾಗಿರುವ ಯೇಸುವು ಮರಣದಿಂದ ಎದ್ದು ಸದಾಕಾಲವೂ ಜೀವಿಸುವವನಾದನು. ಆತನು ವಿಮೋಚಿಸಲ್ಪಟ್ಟಿರುವ ಎಲ್ಲರನ್ನೂ ಪುನರುತ್ಥಾನದ ಮೂಲಕ ನಡಿಸುವನು. ಆತನು ಬರುವ ವೇಳೇ, ಆತನು ನಮ್ಮ ಪ್ರಿಯರನ್ನು ತನ್ನೊಂದಿಗೆ ಕರೆ ತರುವನು (4:14).

*"ಜೀವದಿಂದಿರುವವರು ನಿದ್ರೆಹೋಗಿರುವವರಿಗಿಂತ ಮುಂದಾಗುವದೇ ಇಲ್ಲ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಿರಿ"* (ವ. 15). ಜೀವಿಸುತ್ತಿರುವವರು ಕ್ರಿಸ್ತನಲ್ಲಿದ್ದು ಕೊಂಡು ನಿದ್ರೆಹೋದವರಿಗಿಂತ ಮುಂದಾಗುವದೇ ಇಲ್ಲ. ಅಗಲಿರುವ ದೇವಜನರು ಯೇಸುವಿನ ಪುನರಾಗಮನದ ವಿಷಯದಲ್ಲಿ ಏನನ್ನೂ ತಪ್ಪಿಸಿಕೊಳ್ಳುವದಿಲ್ಲ. ಯೇಸು ಹಿಂದಿರುಗಿ ಬರುವಾಗ ನಾವು ಅವರೊಂದಿಗೆ ಪುನರ್ಮಿಲನಗೊಳ್ಳುವೆವು (4:17). ಅವರು ಎರಡನೆಯ ಬರೋಣದಲ್ಲಿ ಒಂದು ಪ್ರಮುಖ ಸ್ಥಾನವನ್ನು ಹೊಂದಿರುವರು.

*"ಜೀವದಿಂದಿರುವವರು ಅಗಲಿರುವ ದೇವಜನರೊಂದಿಗೆ ಪುನರ್ಮಿಲನಗೊಳ್ಳುವ ರೆಂಬುದನ್ನು ನಂಬುವವರಾಗೋಣ."* ಯೇಸು ಪುನಃ ಭೂಮಿಯ ಮೇಲೆ ಕಾಲಿಡುವವನಾಗಿ ಚಿತ್ರಿಸಲ್ಪಟ್ಟಿರುವದಿಲ್ಲ. ಜೀವದಿಂದಿರುವವರು ಯೇಸುವನ್ನು ಮತ್ತು ಅಗಲಿರುವ ದೇವಜನರನ್ನು ಸಂಧಿಸುವದಕ್ಕೆ ಅಂತರಿಕ್ಷದಲ್ಲಿ ಪಕ್ಕನೆ ಒಯ್ಯಲ್ಪಡುವರು.

"*ನಮ್ಮ ಪ್ರಿಯರೊಂದಿಗೆ ಪುನರ್ಮಿಲನಗೊಂಡ ಬಳಿಕ, ನಾವು ಸದಾಕಾಲವೂ ಯೇಸುವಿನ ಮತ್ತು ವಿಮೋಚಿಸಲ್ಪಟ್ಟವರ ಸಂಗಡ ಇರುವೆವು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳೋಣ."* ಎರಡನೆಯ ಬರೋಣವು ನಮಗೆ ತಿಳಿದಿರುವಂತಹ ಈ ಸಮಯವನ್ನು ಅಂತ್ಯಗೊಳಿಸುವದು. ನಾವು ಅಂತರಿಕ್ಷದಲ್ಲಿ ಪಕ್ಕನೆ ಒಯ್ಯಲ್ಪಡುವೆವು ಮತ್ತು ರಕ್ಷಿಸಲ್ಪಟ್ಟವರೆಲ್ಲರ ಜೊತೆಯಲ್ಲಿ ನಮ್ಮ ನಿತ್ಯ ನಿವಾಸದಲ್ಲಿ ಆನಂದಿಸುವದಕ್ಕಾಗಿ ಪರಲೋಕಕ್ಕೆ ಒಯ್ಯಲ್ಪಡುವೆವು.

ವಾಚಕರನ್ನು ಬೆದರಿಸುವದಕ್ಕೋಸ್ಕರ ಕ್ರಿಸ್ತನ ಎರಡನೆಯ ಬರೋಣದ ಕುರಿತು ಚರ್ಚಿಸಲಾಗಿರುವದಿಲ್ಲ; ಅವರನ್ನು ಸಂತೈಸುವದಕ್ಕಾಗಿ ಅದನ್ನು ಅವರ ಮುಂದಿಡಲಾಯಿತು. ಈ ಮಾತುಗಳು ನಮಗೆ ಆದರಣೆಯನ್ನುಂಟು ಮಾಡತಕ್ಕದ್ದು, ನಾವು ಎದುರು ನೋಡಬಹುದಾದ ಅತ್ಯಂಥ ದೊಡ್ಡ ನಿರೀಕ್ಷೆಯನ್ನು ನಮಗೆ ಕೊಡಬಹುದು. ಚಿಂತೆಗೀಡು ಮಾಡುವದಕ್ಕಾಗಿ ಈ ಮಾತುಗಳು ಹೇಳಲ್ಪಡಲಿಲ್ಲ; ನಮಗೋಸ್ಕರ ಕಾದಿರುವಂಥ ಜಯವನ್ನು ತೋರಿಸುವದಕ್ಕೋಸ್ಕರ ಅವುಗಳು ಬರೆಯಲ್ಪಟ್ಟಿವೆ. EC

### "ದುಃಖಿಸಬೇಡಿರಿ" (4:13-18)

ಥೆಸಲೋನಿಕದವರು ಯೇಸುವಿನ ಬರೋಣವನ್ನು ಭೂಮಿಯಲ್ಲಿ ಜೀವದಿಂದಿರುವವರಿಗೆ ಒಂದು ಮಹಿಮೆಯುಳ್ಳ ಕಾರ್ಯವಾಗಿ ಕಂಡರು. ಕ್ರಿಸ್ತನಲ್ಲಿದ್ದುಕೊಂಡು ಪ್ರಿಯರು ಮರಣಿಸಿದಾಗ, ಕ್ರಿಸ್ತನ ಪುನರಾಗಮನಕ್ಕೆ ಸಂಬಂಧಿಸಿದಂತೆ ಅವರಿಗೆ ಏನು ಸಂಭವಿಸುದೆಂಬ ಅವರು ಚಕಿತಗೊಳ್ಳಲಾರಂಭಿದ್ದರು. ಸತ್ತಿರುವವರು ಅದರಲ್ಲಿ ಎಲ್ಲವನ್ನು ಅಲ್ಲದಿದ್ದರೂ, ಬಹಳಷ್ಟನ್ನು ತಪ್ಪಿಸಿಕೊಳ್ಳುವರೆಂದು ಅವು ಭಾವಿಸಿದ್ದರು. ಆದ್ದರಿಂದ ಅವರು

ಮರಣಿಸಿದ್ದ ತಮ್ಮ ಪ್ರಿಯರ ವಿಷಯದಲ್ಲಿ ದುಃಖಿಸಿದರು, ಅವರು ಮೇಲೆ ಒಂದು ದೊಡ್ಡ ದುರಂತವೇ ಸಂಭವಿಸಿರುತ್ತದೇನೋ ಎಂದು ಯೋಚಿಸುವವರಾಗಿದ್ದರು.

ಪೌಲನು ಅವರಿಗೆ ಹೀಗೆ ಹೇಳಿದನು, "ಅವರ ವಿಷಯವಾಗಿ ದುಃಖಿಸಬೇಡಿರಿ. ನೀವು ದುಃಖಿಸುವ ಅಗತ್ಯವೂ ಇಲ್ಲ. ಅವರಿಗೆ ಕ್ರಿಸ್ತನ ಪುನರಾಗಮನದಲ್ಲಿ ಒಂದು ಮಹಿಮೆಯುಳ್ಳ ಪಾತ್ರವು ಇರುವದು." ಬಳಿಕ, ಅವರು ಈಗಾಗಲೇ ಮರಣಿಸಿರುವವರ ವಿಷಯದಲ್ಲಿ ಏಕೆ ಕಣ್ಣೀರಿಡಬಾರದೆಂಬ ಬಗ್ಗೆ ಪೌಲನು ಕಾರಣಗಳನ್ನು ಮುಂದಿಡುತ್ತಾನೆ.

*"ಯೇಸು ಮಾಡಿರುವಂಥ ಕಾರ್ಯ ನಿಮಿತ್ತವಾಗಿ ಅವರ ಕುರಿತತು ದುಃಖಿಸಬೇಡಿರಿ."* ನಾವು ಕ್ರಿಸ್ತನ ದೇಹಕ್ಕೆ ಸೇರಿದವರು. ಆ ದೇಹದ ಶಿರಸ್ಸಾಗಿ, ಆತನು ಸತ್ತವರೊಳಗಿಂದ ಪುನರುತ್ಥಾನಗೊಂಡು ನಮಗೆ ಮುಂದಾಗಿದ್ದಾನೆ. ಆತನು ಎಷ್ಟು ಖಚಿತವಾಗಿ ಎದ್ದು ಬಂದನೋ, ನಾವು ಸಹ, ಅಷ್ಟೇ ನಿಶ್ಚಯವಾಗಿ ಎದ್ದು ಬರುವೆವು. ಯೇಸುವಿನ ಪುನರುತ್ಥಾನವು ನಮ್ಮ ನಂಬಿಕೆಯ ಹೃದಯಭಾಗವಾಗಿರುತ್ತದೆ. ಅದು ಆತನದ ದೈವತ್ವವನ್ನು, ಆತನ ವಾಕ್ಯವನ್ನು, ಮತ್ತು ನಿತ್ಯಜೀವದ ಕುರಿತ ಆತನ ವಾಗ್ದಾನವನ್ನು ಪ್ರಮಾಣೀಕರಿಸುತ್ತದೆ.

*"ದೇವರು ಮಾಡಲಿರುವ ಕಾರ್ಯ ನಿಮಿತ್ತವಾಗಿ ಅವರ ಕುರಿತು ದುಃಖಿಸಬೇಡಿರಿ."* ಯೇಸುವು ತನ್ನಲ್ಲಿದ್ದುಕೊಂಡು ನಿದ್ರೆಹೋದವರನ್ನು ತನ್ನೊಂದಿಗೆ ಕರೆದೊಯ್ದಿದ್ದಾನೆ. ಕ್ರಿಸ್ತನು ಹಿಂದಿರುಗಿ ಬರುವಾಗ ದೇವರು ನಮ್ಮನ್ನು ಅವರೊಂದಿಗೆ ಪುನರ್ಮಿಲನಗೊಳಿ ಸುವನು. ಕ್ರೈಸ್ತರಾಗಿ, ನಾವು ಎಂದಿಗೂ ವಿದಾಯ ಹೇಳಬೇಕಾಗಿರುವದಿಲ್ಲ. ನಾವು ಮತ್ತೊಂದಾವರ್ತಿ ನಮ್ಮ ಪ್ರಿಯರೊಂದಿಗೆ ದೇವರ ನಿತ್ಯವಾದ ನಗರದಲ್ಲಿ ಇರುವೆವು.

ಜೀವಿದಿಂದಿರುವ ದೇವಜನರು ಮರಣಿಸಿರುವ ದೇವಜನರಿಗಿಂತ ಮುಂದಾಗುವದಿಲ್ಲ. ನಮಗಿಂತ ಮುಂಚೆ ಹೋಗಿರುವವರು ಏನನ್ನೂ ತಪ್ಪಿಸಿಕೊಳ್ಳುವದಿಲ್ಲ. ಅವರು ಕ್ರಿಸ್ತನ ಮಹಿಮಾಕರವಾದ ಪುನರಾಗಮನವನ್ನು ತಪ್ಪಿಸಿಕೊಳ್ಳುವದಿಲ್ಲ. ಅವರು ಇನ್ನಷ್ಟು ಸ್ಪಷ್ಟವಾಗಿ ಅದನ್ನು ಕಾಣುವರು, ಯಾಕೆಂದರೆ ಅವರು ಅಂತರಿಕ್ಷದಲ್ಲಿ ಕ್ರಿಸ್ತನೊಂದಿಗೆ ಇರುವರು.

*"ಕ್ರೈಸ್ತರು ಅನುಭವಿಸುವದಕ್ಕೆ ಹೋಗಲಿರುವ ಕಾರ್ಯದ ನಿಮಿತ್ತವಾಗಿ ಅವರ ಕುರಿತು ದುಃಖಿಸಬೇಡಿರಿ."* ಕ್ರಿಸ್ತನ ಬರೋಣವು ನಮ್ಮನ್ನು ಶಾಶ್ವತವಾಗಿ ಒಂದುಗೂಡಿಸುವದು. ಕ್ರಿಸ್ತನು ಕ್ರೈಸ್ತ ಯುಗವನ್ನು ಆರಂಭಗೊಳಿಸುವನು, ಮತ್ತು ವಿಮೋಚಿಸಲ್ಪಟ್ಟವರೆಲ್ಲರೂ ಕ್ರಿಸ್ತನ ಜೊತೆಯಲ್ಲಿ ನಿತ್ಯವಾದ ಮಹಿಮೆಯೊಳಗೆ ಪ್ರವೇಶಿಸುವರು.

ಪೌಲನು ನಮಗಿಂತ ಮುಂಚೆ ಹೋದವರ ನೆನಪು ನಮ್ಮನ್ನು ಕಾಡುತ್ತದೋ ಇಲ್ಲವೋ ಎಂಬ ಪ್ರಶ್ನೆಯನ್ನು ಕುರಿತು ಮಾತಾಡುತ್ತಿಲ್ಲ. ಖಂಡಿತವಾಗಿಯೂ, ಅವರ ನೆನಪು ನಮ್ಮನ್ನು ಕಾಡುತ್ತದೆ. ಅಲ್ಲದೆ, ಅವರು ನಮ್ಮನ್ನು ಅಗಲಿದ್ದಕ್ಕಾಗಿ ನಾವು ದುಃಖವನ್ನು ಸಹ ಪಡುತ್ತೇವೆ. ಆತನು ಕ್ರಿಸ್ತನಲ್ಲಿ ನಮಗಿರುವ ನಿರೀಕ್ಷೆಯ ಕುರಿತಾಗಿ ಮಾತಾಡುತ್ತಿದ್ದಾನೆ. ನಿರೀಕ್ಷೆಯಿಲ್ಲದ ಜನರು ಇದ್ದಾರೆ, ಆದರೆ ಕ್ರೈಸ್ತನಿಗೆ ಕ್ರಿಸ್ತನ ಪುನರುತ್ಥಾನದ ಮೇಲೆ ನೆಲೆಯಾಗಿರುವ ಒಂದು ನಿರೀಕ್ಷೆಯಿರುತ್ತದೆ. EC

## ಅಂತ್ಯಕಾಲದ ಕುರಿತು ನೋಡುವದು (4:16-18)

ಈ ವಾಕ್ಯಭಾಗದಲ್ಲಿ ಪೌಲನು ಅಂತ್ಯಕಾಲದ ಕುರಿತು ಹಲವಾರು ಅಂಶಗಳನ್ನು ಪ್ರಸ್ತಾಪಿಸಿದನಾದರೂ, ಕ್ರಿಸ್ತನು ಬರುವಾಗ ಸಂಭವಿಸುವಂತಹ ಎಲ್ಲಾ ವಿಷಯಳ ಬಗ್ಗೆಯೂ ಆತನು ನಮಗೆ ಹೇಳಲಿಲ್ಲ. ನಾವು ಈ ವಾಕ್ಯಭಾಗವನ್ನು ಅಂತ್ಯದ ಬಗ್ಗೆ ಚರ್ಚಿಸುವ ಇತರ ವಾಕ್ಯಭಾಗಗಳೊಂದಿಗೆ ಹೋಲಿಸುವದಾದರೆ, ಆ ಕಡೇ ದಿನಗಳು ಹೇಗಿರುತ್ತವೆಂಬ ಬಗ್ಗೆ ನಮಗೊಂದು ಸಂಪೂರ್ಣ ಚಿತ್ರಣವು ಸಿಕ್ಕುತ್ತದೆ.

ಇತಿಹಾಸ ಅಂತಿಮ ಅಧ್ಯಾಯದ ಕುರಿತಾಗಿ ಧ್ಯಾನಿಸುವದರಿಂದ, ಕ್ರೈಸ್ತರಿಗೆ ಆದರಣೆಯು ಉಂಟಾಗುವದು ಮತ್ತು ಕ್ರೈಸ್ತೇತರರಲ್ಲಿ ಮನವರಿಕೆಯನ್ನುಂಟು ಮಾಡುವದು.

*ಯೇಸುವು ಬರುವನು.* ಆತನು ಕಳ್ಳನು ಬಂದ ರೀತಿಯಲ್ಲಿ ಬರುವನು (2 ಪೇತ್ರ 3:10), ಮೇಘಗಳೊಂದಿಗೆ ಬರುವನು (ಪ್ರಕಟನೆ 1:7), ಅಗ್ನಿಜ್ವಾಲೆಗಳೊಂದಿಗೆ ಬರುವನು (2 ಥೆಸಲೋನಿಕ 1:7), ಮತ್ತು ಒಂದು ದೇವದೂತರ ಗಣದೊಂದಿಗೆ ಬರುವನು (ಮತ್ತಾಯ 25:31). ಆತನ ಬರೋಣವನ್ನು ಎಲ್ಲಾ ಕಣ್ಣುಗಳೂ ನೋಡುವವು (ಪ್ರಕಟನೆ 1:7).

ಆತನು ಒಂದು ಆಜ್ಞಾಘೋಷದೊಡನೆ ಇಳಿದು ಬರುವನು. "ಆಜ್ಞಾಘೋಷ" ಎಂಬುದಕ್ಕೆ ಬಳಸಲ್ಪಟ್ಟಿರುವ ಗ್ರೀಕ್ ಪದವು ಒಂದು ಮಿಲಿಟರಿ ಪದವಾಗಿದೆ, ಅದೊಂದು ಆಜ್ಞೆಯ ಘೋಷಣೆಯನ್ನು ಸೂಚಿಸುತ್ತದೆ. ಬಹುಶಃ ಈ ಆಜ್ಞೆಯು ಸತ್ತವರನ್ನು ಸಮಾಧಿಗಳೊಳಗಿಂದ ಹೊರಗೆ ಕರೆಯುವದು (ಯೋಹಾನ 5:28, 29). ಒಬ್ಬ ಪ್ರಧಾನದೂತನು ಕೂಗುವನು, ಆದರೆ ಆತನು ಏನು ಹೇಳುವನೆಂಬುದು ನಮಗೆ ಖಚಿತವಾಗಿ ತಿಳಿಯದು. ಬಹುಶಃ ಆತನು ಈ ಲೋಕಕ್ಕೆ ಸಂಬಂಧಿಸಿದಂತೆ ಎಲ್ಲಾ ಕಾರರ್ಯಗಳ ಅಂತ್ಯವನ್ನು ಘೋಷಿಸುವನು. ಬಳಿಕ ಒಂದು ತುತೂರಿಯ ಧ್ವನಿಯಾಗುವದು. ಈ ಧ್ವನಿಯ ಫಲಿತವಾಗಿ ಸತ್ತವರು ಎಬ್ಬಿಸಲ್ಪಡುವರು ಮತ್ತು ಕಣ್ಣುರೆಪ್ಪೆ ಬಡಿಯುವಷ್ಟರೊಳಗೆ ಜೀವಿಸುವವರು ಮಾರ್ಪಡುವರು ಎಂಬದಾಗಿ ಪೌಲನು 1 ಕೊರಿಂಥ 15:52ರಲ್ಲಿ ಹೇಳುತ್ತಾನೆ. 16ನೇ ವಚನದಲ್ಲಿ, ಅತಿ ಹೆಚ್ಚು ಶಬ್ದಗಳಿಂದ ಕೂಡಿದ ವಚನವಾದ ಇದರಲ್ಲಿ ನಮ್ಮ ಕರ್ತನ ಬರೋಣದ ಜೊತೆಯಲ್ಲಿ ಆಗುವ ಎಲ್ಲಾ ಮೂರು ಶಬ್ದಗಳನ್ನು ಒಳಗೊಂಡಿರುತ್ತದೆ.

*ಸತ್ತವರು ಎಬ್ಬಿಸಲ್ಪಡುವರು.* ಎಲ್ಲರಿಗೂ ಆಗುವ ಪುನರುತ್ಥಾನದಲ್ಲಿ ನೀತಿವಂತರ ಮತ್ತು ಅನೀತಿವಂತರ ಎಬ್ಬಿಸಲ್ಪಡುವಿಕೆಗಳು ಸೇರಿರುತ್ತವೆ (ಯೋಹಾನ 5:28, 29). ಪೌಲನು ಈ ವಾಕ್ಯಭಾಗದಲ್ಲಿ ಅನೀತಿವಂತರಿಗಾಗುವ ಪುನರುತ್ಥಾನದ ಬಗ್ಗೆ ಪ್ರಸ್ತಾಪಿಸಲಿಲ್ಲ, ಯಾಕೆಂದರೆ ಆತನು ನಿದ್ರೆಹೋಗಿರುವ ಕ್ರೈಸ್ತರಿಗೆ ಏನು ಸಂಭವಿಸು ತ್ತದೆಂಬದರ ಮೇಲೆ ಮುಖ್ಯ ಗಮನವನ್ನಿಟ್ಟಿದ್ದನು.

*ನ್ಯಾಯತೀರ್ಪು ಸಂಭವಿಸುವದು.* ತಾನು ಬರುವಾಗ ಎಲ್ಲಾ ದೇಶಗಳವರು ತನ್ನ ಮುಂದೆ ಕಾಣಿಸಿಕೊಳ್ಳುವರೆಂದು ಯೇಸು ಹೇಳಿದನು. ಬಳಿಕ ಈ ಎಲ್ಲಾ ದೇಶಗಳಿಗೆ ಸೇರಿದ ಜನರನ್ನು ಆತನು ಕುರುಬನು ಹಾಗೇ ಆಡುಗಳನ್ನೂ ಕುರಿಗಳನ್ನೂ ಬೇರೆ ಬೇರೆಮಾಡುವನು (ಮತ್ತಾಯ 25:31-34). ಈ ಶ್ರೇಷ್ಠವಾದ ಘಟನೆಯಲ್ಲಿ, ಪ್ರತಿಯೊಂದು ಆತ್ಮವನ್ನು ಅವನ ಅಥವಾ ಅವಳಿಗೆ ಸಿಕ್ಕಿರುವ ನಿತ್ಯವಾದ ಪ್ರತಿಫಲಕ್ಕೆ ಕಳುಹಿಸಲಾಗುವದು. ನಾವು ನ್ಯಾಯತೀರ್ಪಿನಿಂದ ನಿತ್ಯತ್ವದೆಡೆಗೆ ಮುನ್ನಡೆಯುವೆವು.

ಕ್ರೈಸ್ತನು ಈಗಾಗಲೆ ಕ್ರಿಸ್ತನ ಮೂಲಕ ಪಡೆದುಕೊಂಡಿರುವ ವಿಮೋಚನೆಯನ್ನು ಪೌಲನು ಪೂರ್ವಕಲ್ಪನೆ ಮಾಡಿಕೊಂಡ ಕಾರಣದಿಂದಾಗಿ ಈ ವಾಕ್ಯಭಾಗದಲ್ಲಿ ನ್ಯಾಯತೀರ್ಪಿನ ಬಗ್ಗೆ ಪ್ರಸ್ತಾಪಿಸುವದಿಲ್ಲ. ಪೌಲನ ಮನಸ್ಸಿನಲ್ಲಿ, ನ್ಯಾಯತೀರ್ಪಿನಲ್ಲಿ ಕ್ರೈಸ್ತನ ಜಯವು ಒಂದು ಪೂರ್ವನಿರ್ಧರಿತವಾದ ತೀರ್ಮಾನವಾಗಿರುತ್ತದೆ.

*ಕಾಲವು ನಿತ್ಯತ್ವದೊಳಗೆ ಸೇರ್ಪಡೆಗೊಳ್ಳುವದು.* ನ್ಯಾಯತೀರ್ಪಿನ ಆಚೆಯಲ್ಲಿ ನಿತ್ಯತ್ವವು ಇರುತ್ತದೆ. ಆಗ ಭೂಮಿಯು ಅಳಿದು ಹೋಗಿರುತ್ತದೆ, ಮತ್ತು ನೂತನ ಆಕಾಶಗಳು ಮತ್ತು ನೂತನ ಭೂಮಿಯು ಉದಯಗೊಳ್ಳುವವು (2 ಪೇತ್ರ 3:11-13). ನಮಗೆ ತಿಳಿದಿರುವಂಥ ಕಾಲವು ಆಗ ಇರುವದಿಲ್ಲ ಯಾಕೆಂದರೆ ಇನ್ನು ಮೇಲೆ ಅಲ್ಲಿ ಭೂಮಿಯೇ ಇರುವದಿಲ್ಲ.

*ನಾವು ನಮ್ಮ ನಿತ್ಯನಿವಾಸಗಳಿಗೆ ಸ್ಥಳಾಂತರಗೊಳ್ಳುವೆವು.* ನ್ಯಾಯತೀರ್ಪು ದೇವರ ಮಾರ್ಗಗಳನ್ನು ಅಂತಿಮಗೊಳಿಸುವದು ಮತ್ತು ಆತನ ದೈವಿಕ ನಿರ್ಧಾರಗಳು ನ್ಯಾಯವೆಂದು ಸಾಭಿತುಗೊಳಿಸುತ್ತದೆ. ಅದು ಹೆಡೆಸ್ (ನರಕ) ಮತ್ತು ಭೂಮಿಯ ಕಾಲವನ್ನು ಮುಕ್ತಾಯಕ್ಕೆ ತರುವದು. ನೀತಿವಂತರಿಗೆ ನಿತ್ಯಜೀವ ಸಿಕ್ಕುವದು, ಮತ್ತು ಅನೀತಿವಂತರು ನಿತ್ಯವಾದ ಮರಣವನ್ನು ಎದುರಿಸುವರು (ಮತ್ತಾಯ 25:46).

ಇವುಗಳು ಎಷ್ಟು ಯೋಚನೆಯನ್ನು ಕೆರಳಿಸುವಂಥ ಸತ್ಯಗಳು! ಅವುಗಳು ಇದುವರೆಗೆ ಜೀವಿಸಿ ಮುಗಿಸಿರುವ ಮತ್ತು ಜೀವಿಸುತ್ತಿರುವ ಎಲ್ಲರಿಗೂ ಸಂಬಂಧಿಸಿದವುಗಳಾಗಿವೆ. ಅವುಗಳು ನಾವೆಲ್ಲರೂ ಒಂದು ದಿನ ನೆರವೇರಿಸಬೇಕಾಗಿರುವ ಮೊದಲೇ ಗೊತ್ತುಮಾಡಲ್ಪಟ್ಟಿರುವ ಭೇಟಿಗಳಾಗಿವೆ. ನಾವು ನಿತ್ಯತ್ವಕ್ಕೆ ಮಾಡುವ ಪ್ರಯಾಣವನ್ನು ಕುರಿತು ಹೇಳುತ್ತವೆ, ನಾವು ಎಲ್ಲಿಗೆ ಹೋಗುತ್ತಿದ್ದೇವೆಂಬುದನ್ನು ತೋರಿಸುತ್ತವೆ, ಅವುಗಳು ಎಲ್ಲಾ ಕಾರ್ಯಗಳ ಅಂತ್ಯವನ್ನು ಬಣ್ಣಿಸುತ್ತಾ ನಮ್ಮ ಭವಿಷ್ಯದ ಕುರಿತ ಒಂದು ಮಿನುಗುನೋಟವನ್ನು ಕೊಡುತ್ತವೆ. ಪ್ರೇರಿತ ಲೇಖನಿಯ ಮೂಲಕ ನಮ್ಮ ಮುಂದೆ ಇಡಲ್ಪಟ್ಟದ್ದಾಗಿ, ಈ ವಾಕ್ಯಭಾಗವು ಭೂಲೋಕದ ಎಲ್ಲಾ ಕಾರ್ಯಗಳು ಹೇಗೆ ಅಸ್ತಿತ್ವದಿಂದ ಅಳಿದು ಹೋಗುತ್ತವೆಂಬುದನ್ನು ನಮಗೆ ತೋರಿಸುತ್ತದೆ.

ಇವುಗಳು ವಾಸ್ತವಾಂಶಗಳಾಗಿವೆ. ಪ್ರೇರಿತ ಬರಹಗಾರರು ಕಲ್ಪನೆಗಳನ್ನು ಮಾಡಿಕೊಂಡು ಹೇಳುತ್ತಿಲ್ಲ; ಅವರು ನಮಗೆ ದೇವರ ಪ್ರಕಟನೆಯನ್ನು ಕೊಡುತ್ತಿದ್ದಾರೆ. ನಾವು ಅಂತ್ಯದ ಕುರಿತಾಗಿ ದೇವರು ನಮಗೆ ತಿಳಿಸಿರುವ ಸತ್ಯವನ್ನು ಕಂಡಿದ್ದೇವೆ. EC

---

**ಅಡಿಟಿಪ್ಪಣಿಗಳು**

[1]Leon Morris, *The First and Second Epistles to the Thessalonians*, The New International Commentary on the New Testament (Grand Rapids, Mich.: Wm. B. Eerdmans Publishing Co., 1959), 120. [2]F. F. Bruce, *1 & 2 Thessalonians*, Word Biblical Commentary, vol. 45 (Waco, Tex.: Word Books, 1982), 82. [3]James Hope Moulton and George Milligan, *The Vocabulary of the Greek Testament: Illustrated from the Papyri and Other Non-Literary Sources* (Grand Rapids, Mich: Wm. B. Eerdmans Publishing Co., 1952), 362. [4]Walter Bauer,

*A Greek-English Lexicon of the New Testament and Other Early Christian Literature*, 3d ed., rev. and ed. Frederick William Danker (Chicago: University of Chicago Press, 2000), 748. [5]Quoted in Morris, 124. [6]A. T. Robertson, *The Epistles of Paul*, vol. 4, *Word Pictures in the New Testament* (Nashville: Broadman Press, 1931), 29. [7]Bruce, 86. [8]Morris, 130. [9]Robertson, 31. [10]Note that *Young's Literal Translation* renders verse 14b "so also God those asleep *through Jesus He will bring* with Him" (emphasis added).

[11]Morris, 140. [12]"Present," in *The New International Dictionary of New Testament Theology,* ed. Colin Brown (Grand Rapids, Mich.: Zondervan Publishing House, 1976), 2:887. [13]J. W. McGarvey and Philip Y. Pendleton, *Thessalonians, Corinthians, Galatians and Romans,* The Standard Bible Commentary (Cincinnati, Ohio: Standard Publishing Foundation, 1916), 20. [14]David J. Williams, *1 and 2 Thessalonians*, New International Biblical Commentary: New Testament Series, vol. 12 (Peabody, Mass.: Hendrickson Publishers, 1992), 82. [15]Morris, 141. [16]Robertson, 32. [17]I. Howard Marshall, *1 and 2 Thessalonians,* New Century Bible Commentary (Grand Rapids, Mich.: Wm. B. Eerdmans Publishing Co., 1983), 127. [18]Williams, 83. [19]See Bauer, 538. [20]Morris, 145.

[21]*Charleston Daily Mail* (Charleston, W.Va.), 8 September 1994. [22]Bruce, 96. [23]Everett Ferguson, *Backgrounds of Early Christianity*, 2d ed. (Grand Rapids, Mich.: Wm. B. Eerdmans Publishing Co., 1993), 232.